# ಯುಗರಶ್ಮಿ

★ ದೈವಾಸ್ತಿತ್ವ ಮತ್ತು ಮನುಷ್ಯ ಸ್ವಭಾವ
★ ಯೇಸುಕ್ರಿಸ್ತರ ಜೀವನದ ಕುರಿತು ಹೊಸ ಬೆಳಕು
★ ಪ್ರೀತಿ, ವಿಜ್ಞಾನಗಳ ದಿಗ್ವಿಜಯ: ಅಬ್ದುಸ್ಸಲಾಂ
★ ಓರ್ವ ವಿಜ್ಞಾನಿಯ ಭಾರತ ಸಂದರ್ಶನ
★ ವೈಜ್ಞಾನಿಕ ಪ್ರಗತಿಯಲ್ಲಿ ಮುಸ್ಲಿಮರ ಪಾತ್ರ
★ ಅಹ್ಮದಿಯಾ ಜಮಾಅತ್ ಮತ್ತು ಜಮಾತೆ ಇಸ್ಲಾಮಿ
★ ಇಸ್ಲಾಂ ಧರ್ಮ ಮತ್ತು ಉರೂಸ್ ಸಮಾರಂಭ
★ ಇಸ್ಲಾಂ ಮತ ತತ್ತ್ವಜ್ಞಾನ

ತ್ರೈಮಾಸಿಕ
ಎಪ್ರಿಲ್ 1981
ಬೆಲೆ: ರೂ. 1-00

ರಾತ್ರಿಯಲ್ಲೂ ಹಗಲಿನಲ್ಲೂ ಗೋಪ್ಯವಾಗಿಯೂ ಬಹಿರಂಗವಾಗಿಯೂ ತಮ್ಮ ಧನವನ್ನು (ದೈವಪಥದಲ್ಲಿ) ಖರ್ಚು ಮಾಡುವವರಿಗೆ ಅವರ ರಕ್ಷಕನು ಪ್ರತಿಫಲ ನೀಡುವನು. ಅವರಿಗೆ ಯಾವ ಭಯವಾಗಲಿ ದು:ಖವಾಗಲಿ ಇಲ್ಲ.

—ಪವಿತ್ರ ಖುರ್‌ಆನ್ (2 : 275)

# ಯುಗರಶ್ಮಿ ತ್ರೈಮಾಸಿಕ

**ವಿಷಯ ಸೂಚಿಕೆ:** ಪುಟ


* ದೇವನೊಡನೆ ಯಾಚಿಸಿರಿ ... ... 1

* ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... ... 2

* ದೈವಾಸ್ತಿತ್ವ ಮತ್ತು ಮನುಷ್ಯ ಸ್ವಭಾವ ... ... 3

* ಯೇಸು ಕ್ರಿಸ್ತರ ಜೀವನದ ಕುರಿತು ಹೊಸ ಬೆಳಕು ... ... 8

* ಪ್ರೀತಿ, ವಿಜ್ಞಾನಗಳ ದಿಗ್ವಿಜಯ : ಅಬ್ದುಸ್ಸಲಾಂ ... ... 10

* ಓರ್ವ ವಿಜ್ಞಾನಿಯ ಭಾರತ ಸಂದರ್ಶನ ... ... 14

* ವೈಜ್ಞಾನಿಕ ಪ್ರಗತಿಯಲ್ಲಿ ಮುಸ್ಲಿಮರ ಪಾತ್ರ ... ... 17

* ಅಹ್ಮದಿಯಾ ಜಮಾಅತ್ ಮತ್ತು ಜಮಾತೆ ಇಸ್ಲಾಮಿ ... ... 19

* ಇಸ್ಲಾಂ ಧರ್ಮ ಮತ್ತು ಉರೂಸ್ ಸಮಾರಂಭ .... ... 26

* ಸಂಪಾದಕರಿಗೆ ಪತ್ರ ... ... ... 29

* ಅಹ್ಮದಿಯಾ ಸಂಕ್ಷಿಪ್ತ ವಾರ್ತೆಗಳು ... ... ... 30

* ಪ್ರತಿಕ್ರಿಯೆ ... ... ... ... 34

* ಪುಸ್ತಕ ವಿಭಾಗ—ಇಸ್ಲಾಂ ಮತ ತತ್ತ್ವಜ್ಞಾನ



**Statement about the ownership and other particulars about newspaper**

**YUGARASHMI**

**FORM IV (See Rule 8)**

| | | |
|---|---|---|
| 1 | Place of Publication | Mangalore |
| 2 | Periodicity of its Publication | Quarterly |
| 3 | Printer's Name | U. Ramesh Anchan |
| | Whether Citizen of India ? | Yes |
| | Address | Karavali Printers, Azizuddin Road, Mangalore-575 001. |
| 4 | Publisher's Name | Muhammad Yusuf |
| | Whether Citizen of India ? | Yes |
| | Address | 10-23/1008, Ansari Road Bunder, M'lore-1 |
| 5 | Editor's Name | Muhammad Ynsuf |
| | Whether Citizen of India ? | Yes |
| | Address | 10-23/1008, Ansari Road, Bunder, M'lore-1 |
| 6 | Names and address of individuals who own the newspaper and Partners or share-holders holding more than one per cent of the total capital | Jamath Ahmadiyya, 10-23/1008, Ansari Road, Bunder, Mangalore-575 001. |

I, Muhammad Yusuf hereby declare that the particulars given above are true to the best of my knowledge and belief.

Date 31-3-1981 (Sd.) **Muhammad Yusuf**

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪಾದಕ: ಮುಹಮ್ಮದ್ ಯೂಸುಫ್

| ಸಂಪುಟ: 6 | ಮಾರ್ಚ್-ಎಪ್ರಿಲ್ 1981/ಅಮಾನ್-ಶಹಾದತ್ 1360 | ಸಂಚಿಕೆ: 4 |
|---|---|---|

## ದೇವನೊಡನೆ ಯಾಚಿಸಿರಿ

“ನೇರವಾಗಿ ದೇವನ ಸಮೀಪಕ್ಕೆ ತಲುಪುವ ಮಾರ್ಗವನ್ನು ಕೈಗೊಂಡು ‘ನನ್ನ ನಾಥಾ, ನಾನು ನಿನ್ನ ಪಾಪಿಯೂ ಪತಿತನೂ ಆದ ದಾಸ, ನೀನು ನನಗೆ ಮಾರ್ಗದರ್ಶನ ಮಾಡು’ ಎಂದು ಪ್ರಾರ್ಥಿಸಿರಿ.

ನಿಮಗೆ ಬೇಕಾದುದನ್ನೆಲ್ಲಾ ಅವನೊಡನೆ ಯಾಚಿಸಿರಿ. ನಿಮ್ಮ ಚಿಕ್ಕ ಮತ್ತು ದೊಡ್ಡದಾದ ಎಲ್ಲಾ ಆವಶ್ಯಕತೆಗಳನ್ನು ಏನೂ ನಾಚಿಕೆ ಪಟ್ಟುಗೊಳ್ಳದೆ ಅವನೊಡನೆ ಬೇಡಿರಿ. ಸರ್ವ ದಾನಗಳ ಉದ್ಭವಸ್ಥಾನ ಅವನೇ ಆಗಿದ್ದಾನೆ. ಅತ್ಯಧಿಕ ಪ್ರಾರ್ಥಿಸುವವನೇ ಅತಿ ಹೆಚ್ಚು ಗಳಿಸುವವನು. ಯಾರಾದರೂ, ಒಬ್ಬ ಜಿಪುಣನ ಬಾಗಿಲ ಬಳಿ ಹೋಗಿ ಪ್ರತಿದಿನವೂ ಯಾಚಿಸುತ್ತಾ ಇದ್ದರೆ ಒಂದು ದಿನವಾದರೂ ಆ ಜಿಪುಣನು ಕನಿಕರಪಟ್ಟು ಏನನ್ನಾದರೂ ಕೊಡದೆ ಇರಲಿಕ್ಕಿಲ್ಲ. ಹಾಗಿರುವಾಗ ಅತುಲ್ಯ ಉದಾರಿಯಾದ ದೇವನೊಡನೆ ಪ್ರಾರ್ಥಿಸಿದರೆ ಏನಾದರೂ ಲಭಿಸದೆ ಇದ್ದೀತೇ? ಪ್ರಾರ್ಥಿಸುವವನಿಗೆ ಅತಿ ಬೇಗನೆ ಅಥವಾ ತಡವಾಗಿಯಾದರೂ ಫಲ ಖಂಡಿತವಾಗಿಯೂ ಲಭಿಸುವುದು.” (ಮಲ್‌ಫೂಝಾತ್, ಸಂಪುಟ 7, ಪುಟ 226)

—ಹಝ್ರತ್ ಅಹ್ಮದ್

ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1 ಅಲ್ಲಾಹನು ದಯಾನಿಧಿಯಾಗಿದ್ದಾನೆ; ದಯೆಯನ್ನು ಅವನು ಇಷ್ಟಪಡುತ್ತಾನೆ.

2 ಜನರೊಡನೆ ಕರುಣೆ ತೋರಿಸದವನೊಡನೆ ಅಲ್ಲಾಹನೂ ಕರುಣೆದೋರಲಾರ.

3 ಯಾರಿಗಾದರೂ ದಯಾಗುಣ ಇಲ್ಲವೆಂದರೆ ಅವನಿಗೆ ಅನೇಕ ಒಳಿತುಗಳು ಸಿದ್ಧಿಸದೆ ಹೋಗುವುವು.

4 ಸಂತೃಪ್ತಿಯು ಕೊನೆಗೊಳ್ಳದ ಅನುಗ್ರಹವಾಗಿದೆ.

5 ಒಬ್ಬ ಮುಸ್ಲಿಮನ ನ್ಯೂನತೆಗಳನ್ನು ತಿಳಿದುಕೊಂಡು ಆತನಿಗೆ ಸಹಾಯ ನೀಡುವವನು, ಜೀವಂತವಾಗಿ ಹೂಳಲ್ಪಟ್ಟ ಒಬ್ಬನನ್ನು ಹೊಂಡದಿಂದ ಹೊರತೆಗೆದು ರಕ್ಷಿಸುವವನಿಗೆ ಸಮಾನನು.

6 ಅಸೂಯೆಯ ವಿರುದ್ಧವಾಗಿ ನಾನು ನಿಮಗೆ ಮುನ್ನೆಚ್ಚರಿಕೆ ನೀಡುತ್ತೇನೆ; ಬೆಂಕಿ ಸೌದೆಯನ್ನು ಸುಡುವಂತೆ ಅಸೂಯೆ ಒಳಿತನ್ನು ಸುಡುತ್ತದೆ.

7 ಹಿಂದಿನಿಂದ ತಿವಿಯುವವರನ್ನು (ಮೋಸಗಾರರನ್ನು, ವಂಚಕರನ್ನು) ಸ್ವರ್ಗದಲ್ಲಿ ಪ್ರವೇಶಿಸಲು ಬಿಡಲಾಗುವುದಿಲ್ಲ.

8 ಅನ್ಯರೊಡನೆ ದ್ವೇಷವನ್ನು ಪ್ರಕಟಿಸುವವನೂ ಶಪಿಸುವವನೂ ಮಿಥ್ಯಾರೋಪ ಹೊರಿಸುವವನೂ ಅನಾವಶ್ಯಕವಾಗಿ ಮಾತನಾಡುತ್ತಿರುವವನೂ ಸತ್ಯ ವಿಶ್ವಾಸಿಯಲ್ಲ,

9 ತನ್ನ ಅಕ್ರಮ ವರ್ತನೆಗಳಿಂದ ತನ್ನ ನೆರೆಕೆರೆಯವರಿಗೆ ಅಪಾಯವನ್ನುಂಟು ಮಾಡುವವನು ಸತ್ಯ ವಿಶ್ವಾಸಿಯಲ್ಲ.

10 ವಿನಯಭಾವ ಸತ್ಯ ವಿಶ್ವಾಸದ ಅಂಶವಾಗಿದೆ.


## Ahmadiyya Urdu Literature

1 Ahmadiyyat Ka Paigham
2 Imam Mahdi Ka Zuhoor
3 Sadakat Hazrat Masih Mauwood
4 Silsila Nuduwwat Allah Ka Abdi Ahd Hai
5 Khatamunnabiyyeen
6 Zuroorath-e-Mazhab
7 Al Hujjathul Baligha
8 Kya Hazrath Masih Nasiree Zinda Hein ?
9 Hamari Ta'leem
10 Wafat Hazrat Masih Par Ulamaye Misr Ka Fatawe

**Will be sent free.** Apply with 25 paise stamp for each book to:

**The Editor, Yugarashmi Kannada Quarterly,**
10-23/1008, Ansari Road, Bunder, MANGALORE-575 001.

# ದೈವಾಸ್ತಿತ್ವ ಮತ್ತು ಮನುಷ್ಯ ಸ್ವಭಾವ

★ ಮಿರ್ಝಾ ಬಶೀರ್ ಅಹ್ಮದ್ ಎಂ. ಎ.

ದೈವಾಸ್ತಿತ್ವದ ಕುರಿತು ನಾನಿಲ್ಲಿ ವಿವರಿಸಲಿರುವ ಸಾಕ್ಷ್ಯವು ಮನುಷ್ಯ ಸ್ವಭಾವದಲ್ಲಿ ಅಡಕವಾಗಿರುವ ನೈತಿಕ ನಿಯಮಕ್ಕೆ ಸಂಬಂಧಿಸಿದುದಾಗಿದೆ. ಒಳಿತು ಕೆಡುಕುಗಳ ವ್ಯತ್ಯಾಸವನ್ನು ತಿಳಿದುಕೊಳ್ಳುವ ಜ್ಞಾನ ಮನುಷ್ಯ ಸ್ವಭಾವದಲ್ಲಿ ಒಳಗೊಂಡಿದೆ. ಈ ಪರಿಜ್ಞಾನವಿಲ್ಲದ ಮನುಷ್ಯನನ್ನು ಕಾಣಲಸಾಧ್ಯ. ಒಬ್ಬ ಮನುಷ್ಯನ ಸಹಜಗುಣ ಬಾಹ್ಯವಾದ ಸ್ವಾಧೀನಶಕ್ತಿಯ ಫಲವಾಗಿ ಬಲಹೀನಗೊಳ್ಳಲಿಕ್ಕೆ ಅಥವಾ ಸಂಪೂರ್ಣ ನಿರ್ಜೀವವೆಂಬಂತೆ ಶಕ್ತಿಗುಂದಲಿಕ್ಕೆ ಸಾಧ್ಯವಿದೆ. ಆದರೂ ಸಹ ಯಾವುದೇ ರೂಪದಲ್ಲಾದರೂ ಯಾವುದೇ ರೀತಿಯಲ್ಲಾದರೂ ಯಾವಾಗಲಾದರೂ ಅದು ಪ್ರಕಟಗೊಳ್ಳದಿರಲಿಕ್ಕಿಲ್ಲ. ಎಲ್ಲಾ ಮನುಷ್ಯರು, ಅವರ ಸ್ಥಿತಿ ಎಷ್ಟು ಕೀಳು ಮಟ್ಟದ್ದಾಗಿದ್ದರೂ ಸ್ವಾಭಾವಿಕವಾಗಿ ಒಳಿತನ್ನು ಇಷ್ಟಪಡುವವರೂ ಕೆಡುಕನ್ನು ದ್ವೇಷಿಸುವವರೂ ಆಗಿದ್ದಾರೆ. ಅತ್ಯಂತ ಕಠಿಣ ಹೃದಯಿಯಾದ, ಜನರ ಸಂಪತ್ತನ್ನು ಅಪಹರಿಸಿಕೊಳ್ಳುತ್ತಾ ತನ್ನ ಸತ್ ಸ್ವಭಾವವನ್ನು ಪಾಪದ ಅಂಧಕಾರದಲ್ಲಿ ಸುತ್ತಿಟ್ಟಿರುವ ಕಳ್ಳನು ಕೆಲವು ಬಾರಿ ಜನರ ಅಪಹಾಸ್ಯವನ್ನು ಸಹಿಸಲಾಗದೆ ಅಥವಾ ಮನಃಸಾಕ್ಷಿಯ ಅಗೋಚರ ತಿಕ್ಕಾಟದಿಂದ ನಿವೃತ್ತಿಹೊಂದಲಿಕ್ಕಾಗಿ ನಿರ್ಲಜ್ಜೆಯಿಂದ ಹೀಗೆ ಹೇಳಬಹುದು: "ನಾನು ಕಳ್ಳತನ ಮಾಡುವುದು ದುಷ್ಟ ವೃತ್ತಿಯಲ್ಲ. ಯಾವ ರೀತಿಯಲ್ಲಿ ಜನರು ವಿವಿಧ ವೃತ್ತಿಗಳನ್ನು ಕೈಗೊಂಡು ಜೀವನೋಪಾಯವನ್ನುಂಟುಮಾಡಿಕೊಳ್ಳುತ್ತಾರೋ ಅದೇ ಪ್ರಕಾರ ನಾನು ಸಹ ದುಡಿದು ಜೀವವನ್ನು ಅಪಾಯದಲ್ಲಿ ಸಿಲುಕಿಸಿಕೊಂಡು ನನ್ನ ಮತ್ತು ನನ್ನ ಕುಟುಂಬದ ಜೀವನೋಪಾಯವನ್ನು ಮಾಡಿಕೊಳ್ಳುತ್ತಿದ್ದೇನೆ." ಅವನು ಹೀಗೆ ಹೇಳುವನಾದರೂ ಈ ಕೆಲಸ ತಪ್ಪೆಂದೂ ಅನ್ಯಾಯವೆಂದೂ ಅವನ ಸ್ವಭಾವ ಅವನನ್ನು ಹಳಿಯುವುದು ಖಂಡಿತ. ಈ ಕಾರಣದಿಂದಲೇ ಕಳ್ಳರು ಯೌವನದಿಂದ ವೃದ್ಧಾಪ್ಯಕ್ಕೆ ಕಾಲಿರಿಸುವಾಗ, ಮೃತ್ಯು ಸಮೀಪಿಸುತ್ತಿದೆಯೆಂದು ತೋರುವಾಗ ಕಳ್ಳತನವನ್ನು ವರ್ಜಿಸಿ ತಮ್ಮ ಮನಃಸಾಕ್ಷಿಯೊಡನೆ ಗೆಳೆತನ ಬೆಳೆಸಲು ಪ್ರಯತ್ನಿಸುತ್ತಾರೆ. ಯಾವನಾದರೂ ಒಬ್ಬನ ಸಹಜ ಗುಣ ಸಂಪೂರ್ಣ ನಿರ್ಜೀವಗೊಂಡಿದ್ದು ಅವನು ತನ್ನ ದುಷ್ಕೃತ್ಯಗಳನ್ನು ಅಭಿಮಾನಕರವೆಂದು ಭಾವಿಸುತ್ತಾ, ಒಳಿತು ಕೆಡುಕುಗಳನ್ನು ಗುರುತಿಸುವ ಶಕ್ತಿ ಅವನಿಗೆ ತೀರಾ ಕುಂದಿಹೋಗಿದೆಯೆಂದು ಬಾಹ್ಯವಾಗಿ ತೋರುವ ಒಂದು ಸ್ಥಿತಿಯುಂಟಾದರೂ ಸೂಕ್ಷ್ಮವಾಗಿ ನೋಡುವುದಾದರೆ ಅಂತಹವರು ಸಹ ಒಳಿತು ಕೆಡುಕುಗಳನ್ನು ವಿವೇಚಿಸುವ ಸಹಜ ಸ್ವಭಾವದಿಂದ ತೀರಾ ಬಿಟ್ಟು ಹೋದವರಲ್ಲವೆಂದು ಕಾಣಬಹುದಾಗಿದೆ. ಹೇಗೆಂದರೆ, ಇತರರೊಡನೆ ವರ್ತಿಸುವಾಗ ಅವರ ಸಹಜ ಗುಣ ನಿರ್ಜೀವವಾಗಿ ಕಾಣಲ್ಪಡುವುದಾದರೂ ಇತರರು ಅವರೊಡನೆ ಯಾವ ರೀತಿಯಲ್ಲಿ ವರ್ತಿಸಬೇಕೆಂಬ ಪ್ರಶ್ನೆ ಉದ್ಭವಿಸುವಾಗ ಅವರೊಳಗೆ ಹುದುಗಿರುವ ಸಹಜ ಗುಣ ಎಲ್ಲ ತಡೆಗಳನ್ನು ನೀಗಿಸಿ ಹೊರಕ್ಕೆ ಚಿಮ್ಮುತ್ತದೆ. ಒಳಿತು ಕೆಡುಕುಗಳ ವಿವೇಚನೆಯ ಆಧಾರದಲ್ಲಿ ತಮ್ಮದ್ದೆಂದು ಭಾವಿಸಲ್ಪಡುವ ತೀರಾ ಕ್ಷುಲ್ಲಕ ಹಕ್ಕನ್ನಾದರೂ ಕೈಬಿಡಲು ಅವರು ಒಪ್ಪಲಾರರು. ಉದಾಹರಣೆಗಾಗಿ, ಅನ್ಯರ ಸಂಪತ್ತನ್ನು ಅಪಹರಿಸಿ ತನ್ನ ಸಹಜ ಗುಣವನ್ನು ಅದುಮಿಟ್ಟು ತನ್ನ ಪ್ರವೃತ್ತಿ ನ್ಯಾಯವೆಂದು ಭಾವಿಸುವ ಅಥವಾ ಕನಿಷ್ಠ ಪಕ್ಷ ಅದು ನ್ಯಾಯವೆಂದು ತೋರಿಸಲು ಪ್ರಯತ್ನಿಸುವ ಓರ್ವ ವಂಚಕನ ಸಂಪತ್ತಿನ ಮೇಲೆ ಬೇರೆ ಯಾರಾದರೂ ಕೈಹಾಕುವುದಾದರೆ ಅವನ ನಿರ್ಜೀವ ಸಹಜ ಗುಣ ಸಿಡಿದೆದ್ದು ತನ್ನ ಹಕ್ಕಿನ ರಕ್ಷಣೆಗಾಗಿ ಸನ್ನದ್ಧನಾಗುತ್ತಾನೆ. ಹಾಗೆಯೇ ಪರಸ್ತ್ರೀಯರ ಮಾನಭಂಗ ಮಾಡುವ ಒಬ್ಬ ಲಂಪಟನು ನಿರ್ಲಜ್ಜೆಯಿಂದ ತನ್ನ ಕೃತ್ಯವನ್ನು ನ್ಯಾಯೀಕರಿಸುವನಾದರೂ ತನ್ನ ಮನೆಯೊಳಗೆ ಬೇರೆ ಯಾವನಾದರೂ ದುಷ್ಟನು ಪ್ರವೇಶಿಸಿ ಅತ್ಯಾಚಾರಕ್ಕೆ ಇಳಿದರೆ ಕುಪಿತನಾಗಿ, ತನಗೆ ತನ್ನ ಆಶೆ ಈಡೇರಿಸಲು ಹಕ್ಕಿದ್ದರೆ

ಇತರರಿಗೂ ಅವರ ಆಶೆ ಈಡೇರಿಸಲು ಹಕ್ಕಿದೆಯೆಂಬ ವಿಚಾರವನ್ನು ಮರೆತು ಬಿಡುವನು. ಹಾಗೆಯೇ ಅನ್ಯರನ್ನು ವಂಚಿಸುವುದರಿಂದ ಸಂತೃಪ್ತನಾಗುವ ಒಬ್ಬ ವಂಚಕನು ಬೇರೆಯವರಿಂದ ವಂಚಿಸಲ್ಪಟ್ಟರೆ ಕೋಪಾವಿಷ್ಟನಾಗಿ ಪ್ರತೀಕಾರಕ್ಕೆ ಸಿದ್ಧನಾಗುತ್ತಾನೆ.

ಸಂಕ್ಷಿಪ್ತವಾಗಿ, ಒಳಿತು ಕೆಡುಕುಗಳ ವಿವೇಚನೆ ಸಹಜವಾಗಿಯೇ ಮನುಷ್ಯನಲ್ಲಿ ನಿಕ್ಷೇಪಿಸಲ್ಪಟ್ಟಿದೆ. ಮನುಷ್ಯನು ಯದೃಚ್ಛಿಕ ಅಥವಾ ಅಂದವಾದ ನಿಯಮದ ಫಲವಾಗಿ ಅಲ್ಲ; ಬದಲಾಗಿ ಬುದ್ಧಿಶಾಲಿಯೂ ಸರ್ವಜ್ಞನೂ ಆದ ಒಂದು ಪರಾಶಕ್ತಿಯ ವಿಶಿಷ್ಟ ಉದ್ದೇಶದಿಂದ ಕೂಡಿದ ಸೃಷ್ಟಿಯೆಂಬುದಕ್ಕೆ ಮನುಷ್ಯನ ವಿವೇಚನಾಶಕ್ತಿಯು ಖಂಡಿಸಲಾಗದ ಒಂದು ಪುರಾವೆಯಾಗಿದೆ. ಒಂದು ಬೀಜವೆಂಬ ಸ್ಥಿತಿಯಲ್ಲಿ ತನ್ನಲ್ಲಿ ನಿಕ್ಷೇಪಿಸಲ್ಪಟ್ಟಿರುವ ಸಹಜವಾದ ಈ ವಿವೇಚನೆಯನ್ನು ಮನುಷ್ಯನು ವಿಕಾಸಗೊಳಿಸಿ ತನ್ನ ಅಭಿವೃದ್ಧಿಯ ಕವಾಟವನ್ನು ತೆರೆದಿರಿಸಿ ಒಳಿತಿನ ಕೇದಾರವೂ ಜೀವಿತದ ಉದ್ಭವಸ್ಥಾನವೂ ಆದ ದೇವನ ಪ್ರತಿರೂಪವನ್ನು ತನ್ನಲ್ಲಿ ಸೃಷ್ಟಿಸಿ ಎಂದೆಂದಿಗೂ ಎಲ್ಲಾ ವಿಧದಲ್ಲಿರುವ ಒಳಿತುಗಳ ಉನ್ನತಿಗೇರುವುದೇ ಆಗಿದೆ ಆ ಉದ್ದೇಶ. ಚೆನ್ನಾಗಿ ಆಲೋಚಿಸಿರಿ. ಎಲ್ಲಾ ಮನುಷ್ಯರ ಸ್ವಭಾವದಲ್ಲಿ ನಿಕ್ಷಿಪ್ತವಾಗಿರುವ ಈ ವಿವೇಚನಾಶಕ್ತಿ, ಎಲ್ಲರ ಹೃದಯ ಗಹ್ವರದಿಂದ ಪುಟಿದೇಳುವ ಈ ಪ್ರಕಾಶ ಎಂದಿಗೂ ಅಂಧವಾದ ಯದೃಚ್ಛೆಯ ಅಥವಾ ಅಲಕ್ಷ್ಯ ಪರಿಣಾಮದ ಫಲವಾಗಿರಲಿಕ್ಕೆ ಸಾಧ್ಯವಿಲ್ಲ. ಈ ಸಹಜ ಸ್ವಭಾವದ ಸೃಷ್ಟಿಕರ್ತನಾಗಿ ಉದ್ದೇಶಸಹಿತ ಪ್ರವರ್ತಿಸುವ ಒಂದು ಪರಾಶಕ್ತಿ ಉಂಟೆಂದೂ ಆ ಶಕ್ತಿಯೇ ಮನುಷ್ಯನ ಈ ಸಹಜ ಸ್ವಭಾವಕ್ಕೆ ಅಭಿವೃದ್ಧಿ ನೀಡಿ ಉತ್ಕೃಷ್ಟವಾದ ಪ್ರತಿಫಲಕ್ಕೆ ಅರ್ಹನನ್ನಾಗಿ ಮಾಡಲಿಕ್ಕಾಗಿ ಮನುಷ್ಯನನ್ನು ಸೃಷ್ಟಿಸಿದ್ದೆಂದೂ ಇದರಿಂದ ತಿಳಿದು ಬರುತ್ತದೆ. ಪ್ರತಿಯೊಬ್ಬ ಮನುಷ್ಯನಲ್ಲಿ ಕಾಣಲ್ಪಡುವ ಹಾಗೂ ತದನುಸಾರ ಸಹಜವಾಗಿಯೇ ಅವನು ಕೆಲವು ಒಳ್ಳೆಯ ಕಾರ್ಯಗಳನ್ನು ಮಾಡುವಂತಹ ಈ ಒಳಿತು ಕೆಡುಕುಗಳ ವಿವೇಚನೆ ಕೇವಲ ಯದೃಚ್ಛಿಕ ನಿಯಮದ ಅಥವಾ ಸ್ವಾಭಾವಿಕವಾದ ಪರಿಣಾಮದ ಫಲವೆಂದು ತುಸುವಾದರೂ ಚಿಂತಾ ಶಕ್ತಿಯುಳ್ಳವನು ಹೇಗೆ ಹೇಳಲು ಸಾಧ್ಯವೆಂದು ನನಗೆ ತಿಳಿಯುವುದಿಲ್ಲ.

ಲೋಕವು ಒಂದು ಯಂತ್ರದಂತೆಯೆಂದೂ ಅದರ ವಿವಿಧ ಭಾಗಗಳು ಆ ಯಂತ್ರದ ಆಂತರಿಕ ವ್ಯವಸ್ಥೆಗನುಸಾರವಾಗಿ ಚಲಿಸುತ್ತಿವೆಯೆಂದೂ ಕೆಲವರು ಹೇಳುತ್ತಾರೆ. ದೈವವೆಂಬ ಒಂದು ಶಕ್ತಿ ಇಲ್ಲವೆಂದು ಸಹ ಅವರು ಆ ಮೂಲಕ ಭಾವಿಸುತ್ತಾರೆ. ಆದರೆ ಒಳಿತುಂಟು ಮಾಡಲಿಕ್ಕಾಗಿ ಎಲ್ಲ ಮನುಷ್ಯರನ್ನೂ ಪ್ರೇರೇಪಿಸುತ್ತಿರುವ ಈ ಸಹಜ ಸ್ವಭಾವ ಯಾವುದಾದರೂ ಅಂಥವಾದ ಮೆಕಾನಿಸಮಿನ ಫಲವೋ ಎಂದು ಅವರು ಸತ್ಯಸಂಧತೆಯಿಂದ ಒಮ್ಮೆ ಆಲೋಚಿಸಿ ನೋಡಲಿ. ಬಡವ-ಧನಿಕ, ಸಂತುಷ್ಟ-ಸಂತಪ್ತ, ಯುವಕ – ವೃದ್ಧ, ಬಲಹೀನ – ಬಲಶಾಲಿ, ಅನಾಥ - ಅನಾಥನಲ್ಲದವರ ಕಾರ್ಯಗಳಲ್ಲಿ ವ್ಯತ್ಯಾಸ ಕಲ್ಪಿಸಿ ಅದರ ಆಂತರಿಕ ಶಕ್ತಿಯಿಂದ ತನ್ನಷ್ಟಕ್ಕೇನೇ ಚಲಿಸುವ ಯಾವುದಾದರೂ ಯಂತ್ರ ಲೋಕದಲ್ಲಿದೆಯೇ ? ಇರಲು ಸಾಧ್ಯವಿದೆಯೇ? ಉದಾಹರಣೆಗಾಗಿ, ದರಿದ್ರರ, ದಲಿತರ, ಬಲಹೀನರ, ಮತ್ತು ಅನಾಥರ ಧಾನ್ಯ ಚೆನ್ನಾಗಿಯೂ ವೇಗದಲ್ಲಿಯೂ, ಧನಿಕರ, ಸಂತುಷ್ಟರ, ಯುವಕರ, ಬಲಶಾಲಿಗಳ ಮತ್ತು ಮಾತಾಪಿತರಿರುವ ಮಕ್ಕಳ ಧಾನ್ಯ ಸಾಮಾನ್ಯ ಸ್ಥಿತಿಯಲ್ಲೂ ಬೀಸುವ ಯಾವುದೇ ಯಂತ್ರಲೋಕದಲ್ಲಿದೆಯೇ? ಅಂತಹ ಯಂತ್ರ ಲೋಕದಲ್ಲಿಲ್ಲವಾದರೆ, ಇರಲಿಕ್ಕೆ ಸಾಧ್ಯವಿಲ್ಲವಾದರೆ, ಮನುಷ್ಯ ಹೃದಯದಲ್ಲಿ ಸ್ವಾಭಾವಿಕವಾಗಿಯೇ ಒಳಿತು ಕೆಡುಕುಗಳ ವಿವೇಚನೆ ಉಂಟಾಗುವುದು, ಮನುಷ್ಯನು ಸಹಜವಾಗಿಯೇ ಒಳಿತನ್ನು ಇಷ್ಟಪಡುವುದು, ಸಂದರ್ಭಗನುಗುಣವಾಗಿ ಅನುಕಂಪ, ಪ್ರೀತಿ, ಸಹನೆ, ಔದಾರ್ಯ, ತ್ಯಾಗಶೀಲತೆ ಎಂಬೀ ಗುಣಗಳನ್ನು ತೋರ್ಪಡಿಸುವುದು, ಇತ್ಯಾದಿಗಳೆಲ್ಲಾ ಮನುಷ್ಯ ಜೀವಿತ ಒಂದು ಯಂತ್ರದಂತೆ ತನ್ನಷ್ಟಕ್ಕೆ ಪ್ರವರ್ತಿಸುವುದಿಲ್ಲವೆಂಬುದಕ್ಕೂ, ಅವನ ಪ್ರಕೃತಿಯಲ್ಲಿ ವಿಶಿಷ್ಟವಾದೊಂದು ಉದ್ದೇಶದಿಂದ ಈ ಗುಣಗಳನ್ನು ಶೇಖರಿಸಿಟ್ಟಿರುವ ಬೇರೊಂದು ಶಕ್ತಿ ಇದೆಯೆಂಬುದಕ್ಕೂ ಖಂಡಿಸಲಾಗದ ಪುರಾವೆಯಲ್ಲವೇ ?

ಹಾಗೆಯೇ ಕೆಡುಕನ್ನು ದ್ವೇಷಿಸುವುದು ಮನುಷ್ಯನ ಒಂದು ಸಹಜ ಸ್ವಭಾವವಾಗಿದೆ. ಅವನು ಯಾವಾಗಲಾದರೂ ನಿರ್ಲಕ್ಷ್ಯದಿಂದ ಅಥವಾ ಉದ್ವೇಗದಿಂದ ತಪ್ಪು ಮಾಡಿದರೂ ನಂತರ ಅವನ ಹೃದಯದಲ್ಲಿ ಅದರ ಕುರಿತು ಪಶ್ಚಾತ್ತಾಪ ಮತ್ತು ಲಜ್ಜೆ ಉಂಟಾಗದಿರಲಿಕ್ಕಿಲ್ಲ.

ಈ ಸ್ಥಿತಿ ಸಹ ಮನುಷ್ಯ ಜೀವಿತ ಒಂದು ಯಂತ್ರದಂತೆ ಪ್ರವರ್ತಿಸುವುದಿಲ್ಲ; ಬೇರೊಂದು ಪರಾಶಕ್ತಿ ಅವನನ್ನು ವಿಶಿಷ್ಟ ಉದ್ದೇಶದಿಂದ ಸೃಷ್ಟಿಸಿದೆ; ಅವನ ಹೃದಯ ದುರ್ಗದಲ್ಲಿ ವಿಶಿಷ್ಟವಾದೊಂದು ಗುರಿಯನ್ನಿಟ್ಟು ಕೊಂಡು ಈ ಪ್ರಕೃತಿಪರವಾದ ಕಾವಲುಗಾರನನ್ನು ಕಾವಲಿರಿಸಲಾಗಿದೆಯೆಂಬುದಕ್ಕೆ ಒಂದು ಪುರಾವೆಯಾಗಿದೆ. ಮಾನವ ಹೃದಯದಲ್ಲಿ ಅನೇಕ ಭಾವನೆಗಳು ನಿಕ್ಷೇಪಿಸಲ್ಪಟ್ಟಿವೆ. ಪ್ರತಿಯೊಂದು ಭಾವನೆಯ ಕುರಿತು, ಅದರ ನಿರ್ದಿಷ್ಟ ರೀತಿಯ ಉಪಯೋಗ ಕೆಡುಕೋ ಒಳಿತೋ ಎಂಬ ವಿವೇಚನೆ ಅವನ ಪ್ರಕೃತಿಯಲ್ಲಿ ಒಂದು ಬೀಜವೆಂಬ ರೀತಿಯಲ್ಲಿ ಇರಿಸಲಾಗಿದೆ. ಯಾವಾಗಲೂ ಒಳಿತಾದ ಉಪಯೋಗವನ್ನು ಪುರಸ್ಕರಿಸಲಿಕ್ಕೂ ಕೆಟ್ಟ ಉಪಯೋಗವನ್ನು ತಿರಸ್ಕರಿಸಲಿಕ್ಕೂ ಬೇಕಾಗಿ ಮನುಷ್ಯ ಪ್ರಕೃತಿಯಲ್ಲಿ ಗೂಢವಾಗಿ ಕೂಡಿಕೊಂಡಿರುವ ಈ ಈ ಬೀಜಕ್ಕೆ ಜಲಸೇಚನ ಮಾಡಲಿಕ್ಕೂ ಅದನ್ನು ಮೊಳೆಯಿಸಿ ಬೆಳೆಸಲಿಕ್ಕೂ ಶರೀಅತ್ (ಧರ್ಮ ಸಂಹಿತೆ) ಇದೆ. ಸಂಕ್ಷಿಪ್ತವಾಗಿ, ಮನುಷ್ಯ ಸ್ವಭಾವದಲ್ಲಿ ಗೋಚರವಾಗುವ ಒಳಿತು ಕೆಡುಕುಗಳ ವಿವೇಚನೆಯು ಮನುಷ್ಯನು ತನ್ನಷ್ಟಕ್ಕೆ ಉಂಟಾಗಲಿಲ್ಲ; ಅವನ ಜೀವನ ಒಂದು ಯಂತ್ರದಂತೆ ನಡೆಯುವುದಿಲ್ಲ; ತದ್ವಿರುದ್ಧವಾಗಿ ಅವನ ಹಿಂದೆ ಒಂದು ಪರಾಶಕ್ತಿಯ ಕೈ ಇದೆ; ಹಾಗೂ ಆ ಪರಾಶಕ್ತಿ ಒಂದು ವಿಶಿಷ್ಟ ಉದ್ದೇಶದಿಂದ ಅವನನ್ನು ಸೃಷ್ಟಿಸಿಯೆಂಬುದಕ್ಕೆ ಶಕ್ತಿಯುತವಾದೊಂದು ಪುರಾವೆಯಾಗಿದೆ.

ಸಹಜ ಸ್ವಭಾವವೆಂದು ಹೇಳಲ್ಪಡುವ ಈ ವಿವೇಚನೆಯು ಪರಿಸ್ಥಿತಿ ಮತ್ತು ಕುಟುಂಬಪರ ಹಾಗೂ ರಾಜ್ಯಪರ ಪರಂಪರೆಯ ಪರಿಣಾಮದಿಂದಾಗಲು ಸಾಧ್ಯವಿಲ್ಲವೇ ಎಂಬೊಂದು ವಾದ ಇಲ್ಲಿ ಏಳಬಹುದು. ಎಂದರೆ, ಜನರು ಒಳಿತನ್ನು ಇಷ್ಟಪಟ್ಟು ಕೆಡುಕನ್ನು ದ್ವೇಷಿಸುವರಾದರೆ, ಅದಕ್ಕೆ ಕಾರಣ ಪ್ರಕೃತಿಯ ಪ್ರೇರಣೆಯಲ್ಲ; ಅನುಭವದಿಂದ ಒಳ್ಳೆಯ ಪ್ರವೃತ್ತಿಗಳು ಒಳ್ಳೆಯವೆಂದೂ ಕೆಟ್ಟ ಪ್ರವೃತ್ತಿಗಳು ಕೆಟ್ಟವೆಂದೂ ತಿಳಿದುಕೊಂಡಿರುವರು, ಹಾಗೆ ದೀರ್ಘಕಾಲದ ಅನುಭವದ ಫಲದಿಂದ ಈ ವಿಚಾರ ಮೆಲ್ಲಮೆಲ್ಲನೆ ಮನುಷ್ಯ ವಂಶದಲ್ಲಿ ಸ್ಥಾಪಿತವಾಗಿ ಒಂದು ಸಹಜಗುಣವೆಂಬಂತೆ ಗೋಚರವಾಯಿತು. ಈ ವಾದ ಬಾಹ್ಯವಾಗಿ ಪರಿಗಣನಾರ್ಹವೆಂದು ತೋರುವುದಾದರೂ ತುಸು ಆಲೋಚಿಸುವುದಾದರೆ ವಾಸ್ತವಿಕಾಂಶ ತಿಳಿಯದಿರಲಿಕ್ಕಿಲ್ಲ. ಒಳಿತು ಕೆಡಕುಗಳ ವಿವೇಚನೆ ಎರಡು ರೀತಿಯಲ್ಲಲ್ಲದೆ ಉಂಟಾಗಲಿಕ್ಕೆ ಸಾಧ್ಯವಿಲ್ಲ– ಒಂದೋ, ವಾದಿ ಭಾವಿಸುವಂತೆ ದೀರ್ಘಕಾಲದ ಅನುಭವ ಮತ್ತು ಪರಿಸ್ಥಿತಿಯಿಂದ; ಅಥವಾ ಇಸ್ಲಾಂ ಕಲಿಸುವ ರೀತಿಯಲ್ಲಿ ಒಂದು ಪರಾಶಕ್ತಿ ಮನುಷ್ಯ ಪ್ರಕೃತಿಯಲ್ಲಿ ಅಡಕವಾಗಿರಿಸಿರುವುದರಿಂದ. ಈ ಎರಡು ಮಾರ್ಗಗಳಲ್ಲದೆ, ಮೂರನೆಯ ಮಾರ್ಗದ ಕುರಿತು ಊಹಿಸಲೂ ಸಾಧ್ಯವಿಲ್ಲ. ಒಟ್ಟಿನಲ್ಲಿ, ಇವೆರಡರಲ್ಲಿ ಯಾವುದು ಸತ್ಯಾಧಿಷ್ಠಿತವೆಂದು ನಾವು ನೋಡಬೇಕಾಗಿದೆ. ಒಂದನೆಯದಾಗಿ, ಈ ಒಳಿತು ಕೆಡುಕುಗಳ ವಿವೇಚನೆಯಲ್ಲಿ ನಮಗೆ ಕಾಣಲು ಸಾಧ್ಯವಾಗುವುದೇನೆಂದರೆ, ಲೋಕದಲ್ಲಿರುವ ಎಲ್ಲಾ ಜನತೆಗಳಲ್ಲೂ, ಅವರು ಯಾವುದೇ ಕಾಲದವರಾಗಿದ್ದರೂ ಸರಿ, ಒಂದು ಏಕರೂಪತೆ ಇದೆ. ಇಂಗ್ಲೀಷ್‌ನಲ್ಲಿ ಅದನ್ನು ಯುನಿಫೋರ್ಮಿಟಿ (Uniformity) ಎಂದು ಹೇಳುತ್ತಾರೆ. ಎಂದರೆ, ಪ್ರಪಂಚದಲ್ಲಿರುವ ಎಲ್ಲಾ ಜನತೆಗಳಲ್ಲೂ ಎಲ್ಲಾ ಕಾಲಗಳಲ್ಲೂ ಆ ವಿವೇಚನೆಯ ಮೂಲ ಒಂದೇ ರೂಪದಲ್ಲೂ ಒಂದೇ ರೀತಿಯಲ್ಲೂ ಕಂಡುಬರುತ್ತದೆ. ವಿವೇಚನ ಶಕ್ತಿ ಅನುಭವ ಅಥವಾ ಪರಿಸ್ಥಿತಿಯ ಪರಿಣಾಮದಿಂದಲ್ಲ; ತದ್ವಿರುದ್ಧವಾಗಿ ಸರ್ವೋತ್ಕೃಷ್ಟವಾದ ಒಂದು ಬಾಹ್ಯಶಕ್ತಿಯಿಂದ ಮನುಷ್ಯ ಪ್ರಕೃತಿಯಲ್ಲಿ ನಿಕ್ಷೇಪಿಸಲ್ಪಟ್ಟಿದೆಯೆಂಬುದಕ್ಕೆ ಇದು ಸ್ಪಷ್ಟವಾದ ಪುರಾವೆಯಾಗಿದೆ. ಚೆನ್ನಾಗಿ ಆಲೋಚಿಸಿರಿ. ಅನುಭವ ಮತ್ತು ಪರಿಸ್ಥಿತಿಯ ಕಾರಣದಿಂದ ಉಂಟಾಗುವ ಕಾರ್ಯಗಳು ವಿವಿಧ ಜನತೆಗಳಲ್ಲಿ ಮತ್ತು ವಿಭಿನ್ನ ಕಾಲಗಳಲ್ಲಿ ವ್ಯತ್ಯಸ್ತ ರೀತಿಯಲ್ಲಿರಬೇಕಾಗಿವೆ. ಒಂದು ಜನತೆ ಇನ್ನೊಂದು ಜನತೆಯ ಕುರಿತು ಅರಿಯದಿರುವಾಗ, ಪರಸ್ಪರ ತಿಳಿಯಲಿಕ್ಕೂ ಸಂಪರ್ಕ ಸ್ಥಾಪಿಸಲಿಕ್ಕೂ ಮಾರ್ಗಗಳು ಇಲ್ಲದಿದ್ದ ಆದ್ಯ ಕಾಲಘಟ್ಟದಲ್ಲಿ ಪ್ರತಿಯೊಂದು ಜನತೆಯ ಅನುಭವಗಳೂ ಪರಿಸ್ಥಿತಿಗಳೂ ವ್ಯತ್ಯಸ್ತವಾಗಿರಬಹುದು. ಪರಿಸರ ಮತ್ತು ಪರಿಸ್ಥಿತಿಗಳ ಪ್ರಭಾವದಿಂದ ರೂಪಗೊಳ್ಳುವ ಸಾಮುದಾಯಿಕ ಆಚಾರಗಳೂ ಸಂಪ್ರದಾಯಗಳೂ ಪ್ರತಿಯೊಂದು ಸಮುದಾಯದಲ್ಲಿ ವ್ಯತ್ಯಸ್ತವಾಗಿ ಕಂಡುಬರುತ್ತವೆ. ಇದೇ ಪ್ರಕಾರವೇ ಒಳಿತು ಕೆಡುಕುಗಳ ಕುರಿತಾದ ವಿವೇಚನೆ ಸಹ ಜನತೆಯ ಪರಿಸ್ಥಿತಿ ಮತ್ತು

ಅನುಭವ ಪಾಠಗಳ ಆಧಾರದಲ್ಲಿ ರೂಪಗೊಂಡಿರುವುದಾದರೆ ಪ್ರತಿಯೊಂದು ಸಮುದಾಯದಲ್ಲಿ, ಪ್ರತಿಯೊಂದು ಕಾಲಘಟ್ಟದಲ್ಲಿ ಅದು ವ್ಯತ್ಯಸ್ತ ರೂಪದಲ್ಲಿ ಗೋಚರವಾಗಬೇಕಿತ್ತಲ್ಲವೇ. ಆದರೆ, ಹಾಗೆ ಅಲ್ಲ. ಈ ವಿವೇಚನಬುದ್ಧಿ ಎಲ್ಲಾ ಕಾಲಘಟ್ಟಗಳಲ್ಲೂ ಎಲ್ಲಾ ಜನತೆಗಳಲ್ಲೂ ಒಂದೇ ರೂಪದಲ್ಲಿ ಕಾಣಲ್ಪಡುತ್ತದೆ. ಎಲ್ಲಾ ರೀತಿಯಲ್ಲೂ ವಿಭಿನ್ನವಾಗಿರುವಂತಹ ಎರಡು ಸಮುದಾಯಗಳನ್ನು – ಸುಸಂಸ್ಕೃತ, ವಿದ್ಯಾಸಂಪನ್ನ ಹಾಗೂ ನಾಗರಿಕತೆ ಪಡೆದ ಒಂದು ಸಮುದಾಯವನ್ನೂ ತೀರಾ ಅಸಂಸ್ಕೃತ, ವಿದ್ಯಾವಿಹೀನ ಮತ್ತು ಅನಾಗರಿಕವಾದ ಇನ್ನೊಂದು ಸಮುದಾಯವನ್ನೂ–ಉದಾಹರಣೆಗಾಗಿ ತೆಗೆದು ಕೊಳ್ಳೋಣ. ಇವೆರಡು ಜನತೆಗಳೊಳಗೆ ಪರಸ್ಪರ ಬಾಹ್ಯವಾಗಿ ಎಷ್ಟು ವ್ಯತ್ಯಾಸಗಳು ಕಂಡು ಬಂದರೂ ಒಳಿತು ಕೆಡುಕುಗಳ ಸಂಬಂಧಿಸಿದ ವಿವೇಚನೆ ಸಂಪೂರ್ಣ ಒಂದೇ ರೀತಿಯಲ್ಲಿದೆಯೆಂದು ಕಾಣಬಹುದು. ವ್ಯತ್ಯಾಸವಿದ್ದರೆ ಅದು ಬೀಜಸ್ಥಿತಿಯಲ್ಲಿರುವ ಈ ಸಹಜ ಗುಣದ ಬೆಳವಣಿಗೆಯಲ್ಲಿರುವ ವ್ಯತ್ಯಾಸಕ್ಕೆ ಸಂಬಂಧಪಟ್ಟುದಾಗಿರಬಹುದು. ಎಂದರೆ ಒಂದು ಜನತೆಯಲ್ಲಿ ಈ ಸಹಜ ಗುಣ ಒಂದು ರೀತಿಯಲ್ಲಿ ವಿಕಾಸ ಪಡೆದಿದ್ದರೆ ಬೇರೊಂದು ಜನತೆಯಲ್ಲಿ ಇನ್ನೊಂದು ರೀತಿಯಲ್ಲಿ ವಿಕಾಸಗೊಂಡಿರಬಹುದು. ಆದರೆ ನಂತರದ ವಿಕಸನಗಳನ್ನು ಬೇರೆ ಮಾಡಿ ಮೂಲದ ಕುರಿತು ನೋಡುವುದಾದರೆ ಎರಡು ಸಹ ಒಂದೇ ರೂಪದಲ್ಲಿರುವುದಾಗಿ ಮನಗಾಣಬಹುದು. ಒಟ್ಟಿನಲ್ಲಿ, ಈ ವಿವೇಚನೆಯು ಮೂಲಾಧಾರ ಅನುಭವ ಮತ್ತು ಪರಿಸ್ಥಿತಿಯು ಪರಿಣಾಮವಲ್ಲ; ತದ್ವಿರುದ್ಧವಾಗಿ ಯಾವ ಮನುಷ್ಯನನ್ನೂ ಹೊರತುಪಡಿಸದಂತಹ ಒಂದು ಸಹಜ ಗುಣವೆಂಬುದಕ್ಕೆ ಇದು ಖಂಡಿಸಲಾಗದ ಪುರಾವೆಯಾಗಿದೆ.

ಈ ವಿವೇಚನೆ ಬಾಹ್ಯವಾದ ಯಾವ ಪ್ರೇರಣೆಯು ಫಲವಲ್ಲ, ಒಂದು ಸಹಜ ಗುಣವೆಂಬುದಕ್ಕೆ ಮತ್ತೊಂದು ಪುರಾವೆ ಇದಾಗಿದೆ: ಗಾಢವಾಗಿ ಆಲೋಚಿಸುವ ಪಕ್ಷದಲ್ಲಿ, ಅನುಭವ ಅಥವಾ ಪರಿಸ್ಥಿತಿಯು ಕಾರಣದಿಂದುಂಟಾಗಲು ಅವಕಾಶವಿಲ್ಲದ ಕೆಲವು ಕಾರ್ಯಗಳಲ್ಲಿ ಸಹ ಈ ವಿವೇಚನೆ ಮನುಷ್ಯನಲ್ಲಿ ಪ್ರವರ್ತಿಸುವುದಾಗಿ ಕಾಣುವರೆ ಸಾಧ್ಯವಿದೆ. ಎಂದರೆ, ಗುಣದೋಷಗಳನ್ನು ಅನುಭವದಿಂದ ತಿಳಿದುಕೊಳ್ಳಲು ಅಸಾಧ್ಯವಾದ ಕೆಲವು ಕಾರ್ಯಗಳಿವೆ. ಆ ಕಾರ್ಯಗಳ ಸಂಬಂಧಿಸಿ ಮನುಷ್ಯನಲ್ಲಿ ಗೋಚರವಾಗುವ ವಿವೇಚನೆಯು ಅನುಭವ ಅಥವಾ ಪರಿಸ್ಥಿತಿಯ ಫಲದಿಂದಾಗಿರಲಿಕ್ಕೆ ಯಾವ ವಿಧದಲ್ಲೂ ಅವಕಾಶವೇ ಇಲ್ಲ. ಖಂಡಿತವಾಗಿಯೂ ಅದರ ಉಗಮ ಯಾವುದಾದರೊಂದು ಪರಾಶಕ್ತಿಯಿಂದಾಗಿದೆಯೆಂದೂ ಆ ಶಕ್ತಿ ವಿಶಿಷ್ಟವಾದೊಂದು ಉದ್ದೇಶದಿಂದ ಅದನ್ನು ಎಲ್ಲಾ ಮನುಷ್ಯರಲ್ಲೂ ನಿಕ್ಷೇಪಿಸಿಟ್ಟಿದೆಯೆಂದೂ ಒಪ್ಪಬೇಕಾದೀತು. ಉದಾಹರಣೆಗಾಗಿ, ಮೃತದೇಹವನ್ನು ಗೌರವಿಸುವ ಸ್ವಭಾವ ವಿವಿಧ ತರದಲ್ಲಿ ಎಲ್ಲಾ ಜನತೆಯಲ್ಲಿ ಎಲ್ಲಾ ಕಾಲದಲ್ಲಿ ಇರುವುದಾಗಿ ಕಂಡು ಬರುತ್ತದೆ. ಆದರೆ ಈ ವಿವೇಚನೆ ಅದರ ಪ್ರಕೃತಿಯನ್ನು ಸಂಬಂಧಿಸಿ ಅನುಭವ ಅಥವಾ ಪರಿಸ್ಥಿತಿಗೆ ಸಂಬಂಧಪಟ್ಟದ್ದಲ್ಲವೆಂಬುದು ಸ್ಪಷ್ಟ. ಅದನ್ನು ಯಾವ ರೀತಿಯಲ್ಲೂ ಪ್ರಕೃತಿಯ ಶಬ್ದದೊಂದಿಗಲ್ಲದೆ ಬೇರೆ ಯಾವುದರೊಂದಿಗೂ ಅನುಬಂಧಿಸಲಿಕ್ಕೆ ನಿರ್ವಾಹವಿಲ್ಲ. ಸಂಕ್ಷಿಪ್ತವಾಗಿ, ಗುಣದೋಷಗಳನ್ನು ಅನುಭವದಿಂದ ಅರಿಯಲು ಸಾಧ್ಯವಿಲ್ಲದ ಹಾಗೂ ಪ್ರತ್ಯಕ್ಷದಲ್ಲಿ ಭೌತಿಕವಾದ ಒಂದು ಫಲ ಕಂಡುಬಾರದ ಕೆಲವು ಕಾರ್ಯಗಳಲ್ಲಿ ಸಹ ಒಳಿತು ಕೆಡುಕುಗಳ ವಿವೇಚನೆಯನ್ನು ಕಾಣಲು ಸಾಧ್ಯವಿದೆಯೆಂಬುದು ಆ ವಿವೇಚನೆ ಅನುಭವ ಮತ್ತು ಪರಿಸ್ಥಿತಿಯ ಫಲವಲ್ಲವೆಂದೂ ಯಾವುದೋ ಒಂದು ಪರಾಶಕ್ತಿ ಎಲ್ಲಾ ಮನುಷ್ಯರ ಸಹಜ ಗುಣದಲ್ಲಿ ನಿಕ್ಷೇಪಿಸಿರುವ ಸ್ವಭಾವವಾಗಿದೆಯೆಂಬುದಕ್ಕೂ ಪ್ರತ್ಯಕ್ಷವಾದೊಂದು ಪುರಾವೆಯಾಗಿದೆ.

ಒಳಿತು ಕೆಡುಕುಗಳ ವಿವೇಚನೆ ಒಂದು ಸಹಜ ಗುಣವೆಂಬುದಕ್ಕೆ ಮೂರನೆಯ ಪುರಾವೆಯೇನೆಂದರೆ, ಅದು ಕೆಲವು ಕಾರ್ಯಗಳಲ್ಲಿ ಸಾಮುದಾಯಿಕ ಪರಂಪರೆಗೆ ವಿರುದ್ಧವಾಗಿಯೂ ಗೋಚರಿಸುತ್ತದೆ. ಅದು ಸಾಮುದಾಯಿಕ ಪರಂಪರೆಯ ಫಲವಲ್ಲವೆಂದು ಇದರಿಂದ ಸಾಬೀತಾಗುತ್ತದೆ. ಏಕೆಂದರೆ, ಪರಿಣಾಮವು ಎಂದಿಗೂ ಪರಿಣಾಮ ಉಂಟುಮಾಡುವ ವಸ್ತುವಿಗೆ ವಿರೋಧವಾಗಿರಲಿಕ್ಕಿಲ್ಲ. ಒಂದು ಜನತೆ ದೀರ್ಘಕಾಲದ ಪರಿಸ್ಥಿತಿಯಿಂದ ತಮ್ಮೆಡೆಯಲ್ಲಿ ಹೃದಯ ಕಾಠಿಣ್ಯ ಸೃಷ್ಟಿಸಿ, ಅವರ ಜನರಲ್ಲಿ ಅಕ್ರಮ ಮತ್ತು ನಿರ್ದಯೆ ಉಂಟಾಗಿ, ಸಾಮುದಾಯಿಕ ಪರಂಪರೆಯು ಎಲ್ಲಾ ವ್ಯಕ್ತಿಗಳನ್ನು ಕಠಿಣ ಹೃದಯ ಮತ್ತು ನಿರ್ದಯರನ್ನಾಗಿ

ಮಾಡಿದ ಉದಾಹರಣೆಗಳು ಚರಿತ್ರೆಯಲ್ಲಿ ಧಾರಾಳ ಕಾಣಬಹುದು. ಹಾಗಿದ್ದರೂ ಅವರ ಸ್ವಭಾವ ಮತ್ತು ಮನಃಶಾಸ್ತ್ರವನ್ನು ಕೂಲಂಕುಷವಾಗಿ ಅಧ್ಯಯನ ಮಾಡಿ ಅವರ ಜೀವನ ಚರಿತ್ರೆಯನ್ನು ಗಾಢವಾಗಿ ವೀಕ್ಷಿಸಿದರೆ, ಅವರಲ್ಲಿ ಹೃದಯ ಕಾಠಿಣ್ಯದ ಜೊತೆಗೆ ಕರುಣೆಯ ಭಾವನೆಯನ್ನೂ ಕಾಣಲು ಸಾಧ್ಯ. ಯಾವುದಾದರೂ ಸಂದರ್ಭದಲ್ಲಿ ಯಾವ ವಿಧದಲ್ಲಾದರೂ ಆ ಮರೆಯಾಗಿರುವ ಭಾವನೆ ಅದರ ಪ್ರಕಾಶವನ್ನು ತೋರ್ಪಡಿಸುವುದು. ಹಾಗೆಯೇ ಒಂದು ಜನತೆ ದೀರ್ಘ ಕಾಲದ ತನಕ ಕರುಣೆ ಮತ್ತು ಸಹನಾಶೀಲತೆಯನ್ನು ಬೆಳೆಸಿಕೊಂಡು ಬಂದ ಉದಾಹರಣೆಗಳನ್ನು ಸಹ ಕಾಣಲು ಸಾಧ್ಯವಿದೆ. ಆ ಜನತೆಯು ವ್ಯಕ್ತಿಗಳಲ್ಲಿ ಸಾಮುದಾಯಿಕ ಪರಂಪರೆಗನುಸಾರ ದಯಾಶೀಲತೆ ಎದ್ದು ತೋರುವುದು. ಆದರೂ ಕೂಲಂಕುಷವಾಗಿ ಪರಿಶೋಧಿಸುವುದಾದರೆ ಅವರಲ್ಲಿ ಸಹ, ಕರುಣೆ ಮತ್ತು ಸಹನೆ ದೋಷಕರವೆಂದೂ ಕಾಠಿಣ್ಯ ಮತ್ತು ಪ್ರತೀಕಾರ ಗುಣಕರವೆಂದೂ ಗಣಿಸಲ್ಪಡುವ ಸಂದರ್ಭಗಳಲ್ಲಿ, ಕರುಣೆ ಮತ್ತು ಸಹನೆ ತೋರಿಸುವ ಬದಲು ಕಾಠಿಣ್ಯ ಮತ್ತು ಪ್ರತೀಕಾರ ಮಾಡಬೇಕೆಂಬ ಭಾವನೆ ಮರೆಯಲ್ಲಿರುವುದಾಗಿ ಕಾಣಲು ಸಾಧ್ಯವಿದೆ. ಎಂದರೆ, ಒಳಿತು ಕೆಡುಕುಗಳ ಸ್ವಾಭಾವಿಕವಾದ ಈ ವಿವೇಚನೆ ಕೆಲವು ಸಲ ಸಾಮುದಾಯಿಕ ಪರಂಪರೆಗೂ ರಾಜ್ಯಸ್ಥಿತಿಗೂ ವಿರುದ್ಧವಾಗಿ ಕಂಡು ಬರುತ್ತದೆ. ಏಕೆಂದರೆ ಅದು ಪ್ರಕೃತಿಯ .ಅಂಶವಾಗಿದೆ. ಸಹಜ ಸ್ವಭಾವವು ಪರಿಸ್ಥಿತಿಗಳ ಪ್ರೇರಣೆಗಳಿಂದ ಹುದುಗಿ ಹೋಗುವುದಾದರೂ ಸಂಪೂರ್ಣ ನಿರ್ಜೀವವಾಗಲಿಕ್ಕಿಲ್ಲ. ಈ ಕಾರಣದಿಂದ ಓರ್ವನ ಸ್ವಭಾವ ಅವನ ಸಾಮುದಾಯಿಕ ಹಾಗೂ ಕೌಟುಂಬಿಕ ಪರಿಸರದಿಂದ ಪ್ರತ್ಯೇಕವಾದೊಂದು ಬಣ್ಣ ಪಡೆದು, ಅದರ ಪರಿಣಾಮವಾಗಿ ಅವನಲ್ಲಿ ಎರಡನೆಯ ಸ್ವಭಾವವೆಂದು ಹೇಳಬಹುದಾದ ಹೊಸ ಒಂದು ಗುಣ ಉಂಟಾಗುವುದನ್ನು ಕಾಣಬಹುದು. ಆದರೂ ಮೂಲ ಸ್ವಭಾವಕ್ಕೆ ಏನಾದರೂ ಪ್ರಚೋದನೆ ಸಿಗುವಾಗ ಅದೊಂದು ಜ್ವಾಲಾಮುಖಿಯಂತೆ ಎರಡನೆಯ ಸ್ವಭಾವದ ಮರೆಯನ್ನು ಸೀಳಿ ಹೊರಗೆ ಬರುತ್ತದೆ.

ಸಂಕ್ಷಿಪ್ತವಾಗಿ, ಪರಿಸ್ಥಿತಿ ಮತ್ತು ಪರಂಪರೆಯ ಫಲವಾಗಿಯೂ ಒಂದು ಸ್ವಭಾವ ರೂಪಗೊಳ್ಳುತ್ತದೆ. ಆದರೆ ಅದು ಮೂಲ ಸ್ವಭಾವವಲ್ಲ, ಎರಡನೆಯ ಸ್ವಭಾವವಾಗಿದೆ. ಮೂಲ ಸ್ವಭಾವಕ್ಕೆ ಪರಿಸ್ಥಿತಿ, ರಾಜ್ಯದ ಪರಂಪರೆ, ಸಮುದಾಯಿಕ ಅನುಭವ ಇತ್ಯಾದಿಗಳೊಂದಿಗೆ ಯಾವ ಬಂಧವೂ ಇಲ್ಲ, ಅದು ಎಲ್ಲಾ ಮನುಷ್ಯರ ಸೃಷ್ಟಿಯ ಅಂಶವಾಗಿದೆ. ಆ ಮೂಲ ಸ್ವಭಾವದಲ್ಲಿ ಅತ್ಯಂತ ಬುದ್ಧಿಪೂರ್ವಕವಾದ ರೀತಿಯಲ್ಲಿ ಒಳಿತು ಕೆಡುಕುಗಳ ವಿವೇಚನೆ ನಿಕ್ಷಿಪ್ತವಾಗಿದೆಯೆಂಬುದು ಅದರ ಹಿಂದೆ ಉದ್ದೇಶ ಸಹಿತ ಪ್ರವರ್ತಿಸುವ ಒಬ್ಬ ಸೃಷ್ಟಿಕರ್ತನ ಕೈ ಇದೆಯೆಂಬುದಕ್ಕೂ, ಅವನೇ ವಿಶಿಷ್ಟವಾದೊಂದು ಉದ್ದೇಶದಿಂದ ಆ ಪ್ರಕಾಶವನ್ನು ಮನುಷ್ಯ ಸ್ವಭಾವದಲ್ಲಿ ಅಳವಡಿಸಿಟ್ಟಿರುವನೆಂಬುದಕ್ಕೂ ಪ್ರತ್ಯಕ್ಷವಾದೊಂದು ಪುರಾವೆಯೂಗಿದೆ. ಖುರ್ ಆನ್ ಹೇಳುವುದನ್ನು ನೋಡಿರಿ:

"ಫಅಲ್‌ಹಮಹಾ ಫುಜೂರಹಾ ವ ತಕ್ವಾಹಾ" (91 : 9)

ದೇವನು ಎಲ್ಲಾ ಮನುಷ್ಯರ ಸ್ವಭಾವದಲ್ಲಿ ಒಳಿತು ಕೆಡುಕುಗಳ ವಿವೇಚನೆಯನ್ನು ನಿಕ್ಷೇಪಿಸಿ ಇಂತಹ ದಾರಿ ಹಾಳು, ಇಂತಹ ದಾರಿ ಒಳ್ಳೆಯದೆಂದು ಅವರಿಗೆ ತೋರಿಸಿ ಕೊಟ್ಟಿರುವನು.

ಇನ್ನೊಂದೆಡೆಯಲ್ಲಿ ಖುರ್‌ಆನ್ ಹೀಗೆ ಹೇಳುತ್ತದೆ: "ವ ಹದಯ್ನಾಹು ನ್ನಜ್‌ದಯ್ನಿ" (90 : 11).

ನಾವು ಮನುಷ್ಯನಿಗೆ ಒಳಿತಿನ ಮತ್ತು ಕೆಡುಕಿನ ಹಾದಿಗಳನ್ನು ವ್ಯಕ್ತವಾಗಿ ತೋರಿಸಿಕೊಟ್ಟಿರುವೆವು.

ಇನ್ನು ಒಳಿತಿನ ಮಾರ್ಗವನ್ನು ಕೈಗೊಳ್ಳುವುದಾಗಲಿ ಕೆಡುಕಿನ ಮಾರ್ಗದಲ್ಲಿ ಸಿಲುಕಿಕೊಳ್ಳುವುದಾಗಲಿ ಮನುಷ್ಯನ ಕೆಲಸವಾಗಿದೆ. ಸಂಕ್ಷಿಪ್ತವಾಗಿ, ಎಲ್ಲಾ ಮನುಷ್ಯರ ಸಹಜ ಸ್ವಭಾವದಲ್ಲಿ ಒಳಿತು ಕೆಡುಕುಗಳ ವಿವೇಚನೆ ಕಂಡು ಬರುವುದೇ, ಅದು ತನ್ನಷ್ಟಕ್ಕೆ ಉಂಟಾದುದಲ್ಲವೆಂಬುದಕ್ಕೂ ಅಂಥವಾದೊಂದು ನಿಯಮದ ಪರಿಣಾಮದಿಂದ ಆಗಿಲ್ಲವೆಂಬುದಕ್ಕೂ ಸ್ಪಷ್ಟವಾದ ಪುರಾವೆ ಹಾಗೂ ದೈವಾಸ್ತಿತ್ವದ ಬಗ್ಗೆ ಖಂಡಿಸಲಾಗದೊಂದು ದೃಷ್ಟಾಂತವಾಗಿದೆ.

●

# ಯೇಸುಕ್ರಿಸ್ತರ ಜೀವನದ ಕುರಿತು

# ★ ಹೊಸ ಬೆಳಕು ★

## ‘ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕ’ದಲ್ಲಿ ಯೇಸುವಿನ ವೃದ್ಧಾಪ್ಯ ಕಾಲದ ಚಿತ್ರಗಳು

“ನಾವು ಅವರಿಬ್ಬರಿಗೂ (ಯೇಸುವಿಗೂ ಮಾತೆಗೂ) ಸಸ್ಯಶ್ಯಾಮಲವಾದ ಶುದ್ಧ ಜಲ ಸಮೃದ್ಧಿಯುಳ್ಳ ಒಂದು ಉನ್ನತ ಪ್ರದೇಶದಲ್ಲಿ ಅಭಯ ನೀಡಿದೆವು.”

—ಪವಿತ್ರ ಖುರ್‌ಆನ್ (23:51).


“ಮಸೀಹಿಬ್ನು ಮರಿಯಂ (ಮರಿಯಂ ಸುತ ಮಸೀಹಾ) 120 ವಯಸ್ಸಿನ ವರೆಗೆ ಬದುಕಿದ್ದರು.”

—ಮುಹಮ್ಮದ್ ಪೈಗಂಬರ್.

ಯೇಸು ಶಿಲುಬೆಯ ಮೇಲೆ ಮೂವತ್ತಮೂರನೆಯ ವಯಸ್ಸಿನಲ್ಲಿ ಮೃತಪಟ್ಟು ನಂತರ ಪುನರುಜ್ಜೀವ ಪಡೆದು ಕೆಲವು ದಿನಗಳ ಬಳಿಕ ಸ್ವರ್ಗಾರೋಹಣ ಮಾಡಿದರೆಂದು ಸಾಮಾನ್ಯವಾಗಿ ಕ್ರೈಸ್ತರು ನಂಬಿಕೊಂಡಿದ್ದಾರೆ. ಆದರೆ ಈ ವಿಶ್ವಾಸ ಸಂಪೂರ್ಣ ಆಧಾರರಹಿತವಾಗಿದೆ. ಯೇಸು ಇಸ್ರಾಯೇಲ ಗೃಹದ ತಪ್ಪಿಸಿಹೋದ ಗೋತ್ರಗಳ ಬಳಿಗೆ ಮಾತ್ರವೇ ಕಳುಹಿಸಲ್ಪಟ್ಟಿದ್ದಾರೆ. ಎಂದರೆ ಪೂರ್ವ ರಾಜ್ಯಗಳಲ್ಲಿ ಚದರಿ ಹೋದ ಹತ್ತು ಇಸ್ರಾಯೇಲ ಗೋತ್ರಗಳ ಸಮೀಪಕ್ಕೆ. ಯೇಸುವೇ ಹೇಳುತ್ತಾರೆ:

> “ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲನ ಮನೆತನದವರ ಬಳಿಗೇ ಹೊರತು ಮತ್ತಾರ ಬಳಿಗೂ ನಾನು ಕಳುಹಿಸಲ್ಪಟ್ಟವನಲ್ಲ.”
>
> (ಮತ್ತಾಯ 15:24)

ಯೇಸು ಶಿಲುಬೆಯ ಮೇಲೆ ಮೃತಪಟ್ಟಿಲ್ಲ; ಅವರು ಯಹೂದರ ಬಳಿಗೆ ದೈವಸಂದೇಶವನ್ನು ತಲಪಿಸುವರೆ ಪೂರ್ವ ಪ್ರದೇಶಗಳಲ್ಲಿ ಸಂಚರಿಸುತ್ತಿದ್ದರೆಂಬುದಕ್ಕೆ ಸಾಕ್ಷ್ಯಗಳಿವೆ. ಪುರಾತನ ವಸ್ತು ಶಾಸ್ತ್ರ ಪುರಾವೆಗಳು ಸಹ ಈ ವಾಸ್ತವಾಂಶವನ್ನು ರುಜುಪಡಿಸುತ್ತವೆ. ಆದ್ಯ ಕಾಲದಲ್ಲಿ ಕ್ರೈಸ್ತ ಸಭೆಗಳಿಂದ ಅತ್ಯಧಿಕ ಗೌರವಿಸಲ್ಪಟ್ಟ ಹಾಗೂ ಪವಿತ್ರ ಸ್ಮಾರಕ ವಸ್ತುಗಳೆಂದು ಗಣಿಸಲ್ಪಟ್ಟ ಕೆಲವು ಪುರಾತನ ಚಿತ್ರಗಳು ಇಂದಿನ ಕ್ರೈಸ್ತ ವಿಶ್ವಾಸ ಸಿದ್ಧಾಂತಗಳಿಗೆ ಯಾವುದೇ ಅಡಿಗಟ್ಟು ಇಲ್ಲವೆಂದು ನಿಸ್ಸಂಶಯವಾಗಿ ಸಾಬೀತು ಪಡಿಸುತ್ತವೆ. ‘ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕ’ (Encyclopaedia Britanica) ಎಂಬ ಬೃಹತ್ ವಿಜ್ಞಾನ ಕೋಶದ ಹದಿನಾಲ್ಕನೆಯ ಆವೃತಿಯ 13ನೇ ಸಂಪುಟದಲ್ಲಿ (Ed. XIV, Vol. XIII ‘ಯೇಸುಕ್ರಿಸ್ತ’ ಎಂಬ ಲೇಖನದಲ್ಲಿ 1ನೇ ನಂಬರದ ‘ಪ್ಲೇಟ್’ನಲ್ಲಿ ಈ ಚಿತ್ರಗಳಿವೆ. ಅವುಗಳ ಪೈಕಿ ಮೂರನ್ನು ಇಲ್ಲಿ ಕೊಡಲಾಗಿದೆ.



ಒಂದು

ಒಂದನೆಯದು ಆ ಪ್ಲೇಟಿನಲ್ಲಿ ಐದನೆಯ ಕ್ರಮಾಂಕದಲ್ಲಿ ಕೊಡಲಾದ ಚಿತ್ರವಾಗಿದೆ. ಯೇಸು ತನ್ನ ಯೌವನ ಕಾಲದಲ್ಲಿ ಹೇಗಿದ್ದರೆಂದು ತೋರಿಸುವ ಈ ಚಿತ್ರ ಕೆಳಗಿನ ವಿವರಣೆ ಸಹಿತ ಇದೆ:

"ಸೈಪ್ರಸ್ ಮರದಲ್ಲಿ ಬರೆದ ಕ್ರಿಸ್ತನ ಮುಖ. ಇತಿಹಾಸ ಪ್ರಕಾರ ಲೂಕನೊಡನೆ ಸಂಬಂಧಿಸಬಹುದಾದರೂ ಇದು 3ನೇ ಶತಮಾನದ್ದು ಆಗಲಿಕ್ಕೆ ಸಾಧ್ಯತೆ ಇದೆ. ಇದು ರೋಮಿನ ವೆಟಿಕನ್ ಲೈಬ್ರರಿಯಲ್ಲಿ ಇದೆ."



## ಎರಡು

ಎರಡನೆಯ ಚಿತ್ರ ಅದೇ ಪ್ಲೇಟಿನ 6ನೇ ಕ್ರಮಾಂಕ ಪೈಂಟಿಂಗಾಗಿದೆ. ಇಳಿಪ್ರಾಯದ ಯೇಸುವನ್ನು ಈ ಚಿತ್ರ ತೋರಿಸುತ್ತದೆ. ಇದು ಕೆಳಗಿನ ವಿವರಣೆ ಸಹಿತ ಇದೆ:

"ವಸ್ತ್ರದಲ್ಲಿ ಬರೆದ ಕ್ರಿಸ್ತನ ಮುಖ; ಎರಡನೇ ಶತಮಾನ. ಜಿನೇವಾದ ಪವಿತ್ರ ಬರ್ತಲೋಮ್ಯೊ ಇಗರ್ಜಿ."

## ಮೂರು

ಮೂರನೆಯ ಚಿತ್ರ ಪ್ಲೇಟಿನ 4ನೇ ಕ್ರಮಾಂಕ ಪೈಂಟಿಂಗ್, ಯೇಸುವಿನ ವೃದ್ಧಾಪ್ಯವನ್ನು ತೋರಿಸುತ್ತದೆ. ನೂರು ವಯಸ್ಸು ಕಳೆದ ಯೇಸುವಿನ ರೂಪವನ್ನು ಇದು ಖಂಡಿತವಾಗಿ ಬಹಿರಂಗ ಪಡಿಸುತ್ತದೆ. ಅದರ ವಿವರಣೆ ಹೀಗಿದೆ:



"ರೋಮಿನ 'ಸೈಂಟ್ ಪೀಟರ್ಸ್ ಸಾಕ್ರಿಸ್ಟಿ' (ಇಗರ್ಜಿಯ ಉಪಕರಣ ಕೋಣೆ) ಯಲ್ಲಿರುವ ಈ ಚಿತ್ರ ಎರಡನೇ ಶತಮಾನದಷ್ಟು ಹಳೆಯದೆಂದು ನಿರ್ಣಯಿಸಲಾಗಿದೆ."

ಈ ಚಿತ್ರಗಳಿಂದ ಎರಡು ಸಂಗತಿಗಳು ಸ್ಪಷ್ಟವಾಗುತ್ತವೆ.

ಒಂದು: ಯೇಸು 120 ವಯಸ್ಸಿನ ವರೆಗೆ ಅಥವಾ ಅದರ ಸಮೀಪ ಕಾಲದ ವರೆಗೆ ಬದುಕಿದ್ದರು.

ಎರಡು: ಆದಿಕಾಲದ ಮೂರು ಶತಮಾನಗಳ ಪೂರ್ವಕ್ರೈಸ್ತರು, ಯೇಸು 120 ವಯಸ್ಸಿನವರೆಗೆ, ಒಂದು ದೀರ್ಘಕಾಲದ ವರೆಗೆ, ಈ ಭೂಮಿಯಲ್ಲೇ ಜೀವಿಸಿದ್ದರೆಂದು ನಂಬಿ ಕೊಂಡಿದ್ದರು. ಮೂವತ್ತ ಮೂರನೆಯ ವಯಸ್ಸಿನಲ್ಲಿ ಉಂಟಾದುದೆಂದು ಹೇಳಲ್ಪಡುವ ಅವರ 'ಸ್ವರ್ಗಾರೋಹಣ' ಒಂದು ವಾಸ್ತವಿಕ ಘಟನೆಯಲ್ಲ.

ಈ ಎರಡು ವಿಚಾರಗಳ ಆಧಾರದಲ್ಲಿ ಚಿಂತಿಸುವಾಗ ಯೇಸುಕ್ರಿಸ್ತರ "ಶಿಲುಬಾ ಮರಣ" ಮತ್ತು "ಸ್ವರ್ಗಾರೋಹಣ" ನಿರ್ಬಲಗೊಳ್ಳುತ್ತವೆ. ಯೇಸು ಕ್ರಿಸ್ತರು ಇತರ ಪ್ರವಾದಿಗಳಂತೆಯೇ ತನ್ನ ದೌತ್ಯವನ್ನು ಪೂರ್ಣಗೊಳಿಸಿ ವೃದ್ಧಾಪ್ಯ ಕಾಲದ ವರೆಗೆ ತನ್ನ ಸಂದೇಶವನ್ನು ಸಾರುತ್ತಾ ಕೊನೆಗೆ ಕಾಶ್ಮೀರದಲ್ಲಿ ಮರಣವನ್ನಪ್ಪಿದರೆಂಬ ಅಹ್ಮದಿಯಾ ಸಿದ್ಧಾಂತ ವಾಸ್ತವಿಕ.

★

# ಪ್ರೀತಿ, ವಿಜ್ಞಾನಗಳ ದಿಗ್ವಿಜಯ: ಅಬ್ದುಸ್ ಸಲಾಂ*



"ಬೆಂಗಳೂರಿಗೆ ಅಬ್ದುಸ್ ಸಲಾಂ ಬರೋ ಚಾನ್ಸ್ ಇದೆ. ಸ್ವಲ್ಪ ಕಣ್ಣಿಟ್ಟಿರಿ" ಎಂದು ನಮ್ಮ ಸಂಪಾದಕರು ಒಂದು ವಾರದ ಹಿಂದೆಯೇ ಸೂಚನೆ ಕೊಟ್ಟಿದ್ದರು. ಮೊನ್ನೆ ಸೋಮವಾರ ಇಂಗ್ಲೀಷ್ ದಿನಪತ್ರಿಕೆಯೊಂದರಲ್ಲಿ ಮಾತ್ರ "ನಾಳೆ ಪ್ರೊ. ಸಲಾಂ ನಗರಕ್ಕೆ ಆಗಮಿಸಲಿದ್ದಾರೆ" ಎಂಬ ಎರಡು ಸಾಲಿನ ಸುದ್ದಿ ನೋಡಿ, ತಕ್ಷಣವೇ ಅವರ ಬೆಂಗಳೂರಿನ ಕಾರ್ಯಕ್ರಮಗಳ ಬಗ್ಗೆ ವಿಚಾರಿಸತೊಡಗಿದೆ. ಈ ಮೇಧಾವಿಯ ಆಗಮನ ಅದೇಕೋ ಸಂಕ್ರಾಂತಿಯ ಸಡಗರದಲ್ಲಿದ್ದ ನಗರದ ಪತ್ರಿಕೆಗಳಿಗೆ 'ಸುದ್ದಿ'ಯಾಗಿ ಕಾಣಿಸಲೇ ಇಲ್ಲ. ಯಾರಿಗೂ ಅವರ ಆಗಮನದ ವಿವರಗಳೇ ಗೊತ್ತಿರಲಿಲ್ಲ. ಸರ್ಕಾರಿ ವಾರ್ತಾ ಇಲಾಖೆಯಲ್ಲೂ ಅಷ್ಟೇ. ಆದರೂ ಒಂದು ಕೈ ನೋಡಿದರಾಯಿತು ಎಂದು ಅಶೋಕ ಹೋಟೆಲ್‌ನಲ್ಲಿ ಬುಧವಾರ ಬೆಳಿಗ್ಗೆ ಪ್ರಯತ್ನಿಸಿದೆ. ಅಲ್ಲಿಯ ಸ್ವಾಗತಕಾರ ತಲೆ ಕರೆದುಕೊಂಡು, "ನೋಡಿ, ಅಲ್ಲಿ ಲಾಂಜ್‌ನಲ್ಲಿ ಒಬ್ಬ ಗಡ್ಡಧಾರಿ ಕೂತಿದ್ದಾರೆ. ಅವರೇ ಇದ್ರೂ ಇರಬಹುದು" ಎಂದು ಬೇಸರದಿಂದಲೇ ಉತ್ತರಿಸಿದ. ಉಲ್ಲನ್ ಕೋಟು, ಟೈ ಮತ್ತು ಕ್ಯಾಪ್ ಹಾಕಿದ್ದ ಬಿಳಿ ಗಡ್ಡದ ವ್ಯಕ್ತಿ ಕೈಯಲ್ಲಿ ಇಸ್ತ್ರಿ ಬಟ್ಟೆಗಳ ಪಾಕೆಟ್ ಹಿಡಿದುಕೊಂಡು ಸೋಫಾ ಮೇಲೆ ಕೂತಿದ್ರು. "ತಾವು ಪ್ರೊಫೆಸರ್ ಸಲಾಂರವರಾ..." ಎಂದು ಪರಿಚಯ ಕೇಳಿದೆ. "ಜೀ ಹ್ವಾಂ ಬೈಠೋ ಭೈ" ಎಂದು ಪಕ್ಕದಲ್ಲಿ ಕೂಡಲು ಸನ್ನೆ ಮಾಡಿದರು.

**ಭಾರತದ ಉಪಖಂಡದ ಮುಸ್ಲಿಮನೊಬ್ಬ ವಿಜ್ಞಾನಕ್ಕಾಗಿ ೧೯೭೯ರ ನೊಬೆಲ್ ಬಹುಮಾನ ಪಡೆದ. ಅತ ಅಬ್ದುಸ್ ಸಲಾಂ. ಇಡೀ ಜಗತ್ತಿನಲ್ಲೇ ವಿಜ್ಞಾನಕ್ಕಾಗಿ ನೊಬೆಲ್ ಬಹುಮಾನ ಪಡೆದ ಮೊಟ್ಟ ಮೊದಲ ಮುಸ್ಲಿಂ ಈತ. ಇದು ಹಿಂದು, ಮುಸ್ಲಿಂ, ಕ್ರಿಶ್ಚಿಯನ್-ಎಲ್ಲರಿಗೆ ಹೆಮ್ಮೆ ಹುಟ್ಟಿಸುವ ಸಂಗತಿ. ಈ ಸರಳ, ಧಾರ್ಮಿಕ ಮನುಷ್ಯ ಬಡರಾಷ್ಟ್ರಗಳ ವೈಜ್ಞಾನಿಕ ಚಿಂತನೆಗಾಗಿ ನಡೆಸುತ್ತಿರುವ ಹೋರಾಟ ಕೂಡ ಧೀರ ಹೋರಾಟ.**

ನೊಬೆಲ್ ಬಹುಮಾನಿತ ವಿಜ್ಞಾನಿಯ ಆತ್ಮೀಯತೆಯಿಂದ "ಥ್ರಿಲ್" ಎನಿಸಿದರೂ ತೋರಿಸಿಕೊಳ್ಳದೆ ಬಂದ ಉದ್ದೇಶವನ್ನು ತಿಳಿಸಿ ಸಂದರ್ಶನಕ್ಕಾಗಿ ಸಮಯ ಕೋರಿದೆ. ಆಗ ಪಕ್ಕದಲ್ಲಿ ಸೂಟು ಧರಿಸಿ ಕುಳಿತಿದ್ದ ವ್ಯಕ್ತಿಯನ್ನು ವಿಚಾರಿಸುತ್ತ ಜೇಬಿನಲ್ಲಿದ್ದ ಪುಟ್ಟ ಡೈರಿ ತೆಗೆದು ನೋಡಿಕೊಂಡರು. "ನಾನೀಗಾಗಲೇ ಪತ್ರಿಕೆಯವರಿಗೆ ಸಾಯಂಕಾಲ ಟಾಟಾ ಇನ್ಸಿಟ್ಯೂಟಿನಲ್ಲಿ ಬಂದು ನೋಡೋಕೆ ಹೇಳಿದೀನಿ. ನೀವೂ ಅಲ್ಲಿಗೆ ಬಂದುಬಿಟ್ರೆ ನೋಡೋಣ" ಅಂದ್ರು. ನಾನು "ಬರೀ ಹತ್ತು ನಿಮಿಷ ಕೊಟ್ರೂ ಸಾಕು ಪ್ರೊಫೆಸರ್" ಎಂದು ಮತ್ತೆ ಕೇಳಿದೆ. "ಹಾಗಾದ್ರೆ ಸಂದರ್ಶನ ಅಂತ ಸ್ಪೆಶಲ್ ಆಗಿ ಏಕೆ ಬರೋದು? ಇವಾಗಲೇ ಮಾತ್ನಾಡಿ ಧಾರಾಳವಾಗಿ..." ಎಂದು ಸಲಾಂ ಸಾಹೇಬರು ಶುರು ಮಾಡೇ ಬಿಟ್ಟರು.

---

* ಜನವರಿ 25, 1981ರ "ಲಂಕೇಶ್ ಪತ್ರಿಕೆ"ಯಿಂದ.

# ಸಲಾಂ ಪ್ರತಿಭೆಯ ಹತ್ತು ಮುಖಗಳು

ಸಲಾಂ ಜತೆಗಿದ್ದ ಸೂಟುಧಾರಿ ಮುಂಬೈ ಅಣುಶಕ್ತಿ ಕೇಂದ್ರದ ವಿಜ್ಞಾನಿ ಅವರ ಜತೆ ಸಂಪರ್ಕಾಧಿಕಾರಿಯಾಗಿ ಬಂದಿದ್ದರು. ಸಲಾಂ ಬಗ್ಗೆ ಹೆಚ್ಚಿನ ವಿವರಗಳನ್ನು ಸಂಕ್ಷಿಪ್ತವಾಗಿ ತಿಳಿಸಿದರು: ಪಶ್ಚಿಮ ಪಂಜಾಬಿನಲ್ಲಿ ಜನಿಸಿದ ಅಬ್ದುಸ್ ಸಲಾಂಗೆ ಜನವರಿ 26ಕ್ಕೆ 55 ವರ್ಷ ತುಂಬುತ್ತದೆ. ಲಾಹೋರ್‌ನಲ್ಲಿ ಎಂ. ಎ. ಮಾಡಿ ಕೇಂಬ್ರಿಡ್ಜ್‌ನಲ್ಲಿ ಪಿ.ಎಚ್.ಡಿ. ಪಡೆದು ಕೆಲವು ಕಾಲ ಲಾಹೋರ್ ವಿಶ್ವವಿದ್ಯಾಲಯದಲ್ಲಿ ಗಣಿತಶಾಸ್ತ್ರ ಪ್ರೊಫೆಸರ್ ಆಗಿದ್ದರು. 1957ರಿಂದ ಲಂಡನ್ ಇಂಪೀರಿಯಲ್ ಕಾಲೇಜ್‌ನಲ್ಲಿ ತಾತ್ವಿಕ ಭೌತಶಾಸ್ತ್ರದ ಹುದ್ದೆಯಲ್ಲಿದ್ದಾರೆ. ಇವರ ಪರಿಶ್ರಮದಿಂದಲೇ ವಿಶ್ವಸಂಸ್ಥೆ 1964ರಲ್ಲಿ ಇಟಲಿಯ ಟ್ರಿಯಸ್ಟೆಯಲ್ಲಿ 'ತಾತ್ವಿಕ ಭೌತಶಾಸ್ತ್ರದ ಅಂತರಾಷ್ಟ್ರೀಯ ಸಂಸ್ಥೆ'ಯನ್ನು ಸ್ಥಾಪಿಸಿತು. ಆರಂಭದಿಂದಲೂ ಅದರ ನಿರ್ದೇಶಕರಾಗಿ ಸೇವೆ ಸಲ್ಲಿಸಿರುವ ಸಲಾಂ ಪ್ರತಿಪಾದಿಸಿದ 'ದ್ರವ್ಯಕಣ-ಭೌತಶಾಸ್ತ್ರ'ದ ಸಿದ್ಧಾಂತವೊಂದಕ್ಕೆ 1979ರಲ್ಲಿ ನೊಬೆಲ್ ಪ್ರಶಸ್ತಿ ದೊರೆಯಿತು. 5 ಮಕ್ಕಳ ತಂದೆ ಸಲಾಂ ಸಾಹೇಬರು ಸಾಂಪ್ರದಾಯಿಕ ಅಹಮದೀಯ ಪಂಥಕ್ಕೆ ಸೇರಿದವರು. ನೋಬೆಲ್ ಪ್ರಶಸ್ತಿಯಿಂದ ಬಂದ ಎಲ್ಲ 60 ಸಾವಿರ ಡಾಲರು ಹಣವನ್ನು 'ಹಿಂದುಳಿದ ರಾಷ್ಟ್ರಗಳ ವೈಜ್ಞಾನಿಕ ಅಭಿವೃದ್ಧಿ ನಿಧಿ'ಗೆ ಕೊಡುಗೆಯಾಗಿ ನೀಡಿಬಿಟ್ಟರು.

ಇವರ ನೇತೃತ್ವ ಸಂಸ್ಥೆಯ 92 ಸದಸ್ಯ ರಾಷ್ಟ್ರಗಳಲ್ಲಿ 66 ಹಿಂದುಳಿದ ದೇಶಗಳೇ. ಸಂಸ್ಥೆಯ ಗುರಿ ಈ ಅಭಿವೃದ್ಧಿಪರ ರಾಷ್ಟ್ರಗಳ ಪ್ರತಿಭಾವಂತ ಭೌತಶಾಸ್ತ್ರ ವಿಜ್ಞಾನಿಗಳಿಗೆ 12 ತಿಂಗಳು ತರಬೇತಿ ನೀಡಿ ಆಧುನಿಕ ಸಂಶೋಧನೆಗಳನ್ನು ಸ್ವತಂತ್ರವಾಗಿ ಅವರವರ ದೇಶದಲ್ಲೇ ಮುಂದುವರಿಸುವಂತೆ ತಯಾರು ಮಾಡುವುದು. "ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುವ ನೊಬೆಲ್ ವಿಜ್ಞಾನಿಯಾಗಲೀ, ಕಿರಿಯ ಸಂಶೋಧಕನಾಗಲೀ ಸಮಾನ ದಿನಭತ್ಯೆ ಪಡೆಯುತ್ತಾರೆ" ಎಂದು ಸಲಾಂ ಆತ್ಮವಿಶ್ವಾಸದಿಂದ ಹೇಳುತ್ತಾರೆ. ಪರದೇಶಕ್ಕೆ ಹೋಗಿ ಮೂವತ್ತು ವರ್ಷಗಳಾಗುತ್ತಾ ಬಂದರೂ ಪಾಕಿಸ್ತಾನದ ನಾಗರೀಕತ್ವವನ್ನು ಬಿಟ್ಟು ಕೊಟ್ಟಿಲ್ಲ. ಈಗ ಸ್ವದೇಶದಲ್ಲೊಂದು 'ಮೂಲಭೂತ ವಿಜ್ಞಾನ ಸಂಶೋಧನಾ ಕೇಂದ್ರ'ದ ಸ್ಥಾಪನೆಗೂ ನೆರವಾಗುತ್ತಿದ್ದಾರೆ.

ಸಂಬಂಧ ಅಂದರೆ...

"ಭಾರತದಲ್ಲಿ ತಮ್ಮ ಸಂಬಂಧಿಗಳೇನಾದರೂ ಇದ್ದಾರೆಯೇ ?"

"ಈ ದೇಶದಲ್ಲಿ ಸಂಬಂಧ ಅಂದರೆ ಜಾತಿ ಸಂಬಂಧ ಅಂತಾನೆ ಅರ್ಥ ಅಲ್ವ ? ನಾನು ಪಂಜಾಬ್‌ನಲ್ಲಿ ಹುಟ್ಟಿ ಬೆಳೆದವನಾದ್ದರಿಂದ ಇಂಡಿಯಾದಲ್ಲಿ ಹಲವಾರು ಸ್ಥಳಗಳಲ್ಲಿ ನನಗೆ ನೆಂಟರೂ, ಸ್ನೇಹಿತರೂ ಇದ್ದಾರೆ."

"ತಾವೀಗಾಗಲೇ ಇಲ್ಲಿ ಹಲವಾರು ವೈಜ್ಞಾನಿಕ ಸಂಸ್ಥೆಗಳಿಗೆ ಭೇಟಿ ಕೊಟ್ಟಿರೋದರಿಂದ, ಇಲ್ಲಿನ ಸಂಶೋಧನೆಯ ಮಟ್ಟದ ಬಗ್ಗೆ ಏನನ್ನಿಸುತ್ತೆ ?"

"ಭಾರತದ ವಿಜ್ಞಾನಿಗಳು ಸಾಧಿಸಿರುವ ಪ್ರಗತಿ ಅಗಾಧವಾದದ್ದು. ಅಭಿವೃದ್ಧಿಪರ ರಾಷ್ಟ್ರಗಳಲ್ಲೇ ಅತ್ಯಂತ ಸುಸಜ್ಜಿತವಾದ ಸಂಶೋಧನಾ ವ್ಯವಸ್ಥೆ ಭಾರತದ್ದೇ ಎಂದು ನಾನೀಗಾಗಲೇ ಹಲವಾರು ಕಡೆ ಹೇಳಿರೋದನ್ನ ಗಮನಿಸಿರಬಹುದು."

"ಭಾರತದ ಯುವಕ ವಿಜ್ಞಾನಿಗಳ ಬಗ್ಗೆ ಏನಂತೀರಾ ?" ಈ ಪ್ರಶ್ನೆಗೆ ಉತ್ತರಿಸುವುದಕ್ಕೆ ಮೊದಲು "ಅರೇ ಭೈ ನೀವೂ ವಿಜ್ಞಾನದಲ್ಲಿ ಸಂಶೋಧನೆ ಕೈಗೊಂಡಿದ್ದೀರಾ ?" ಎಂದು ವಿಚಾರಿಸಿದರು. ಸಸ್ಯಶಾಸ್ತ್ರದಲ್ಲಿ ಸಂಶೋಧನೆ ಮಾಡಿರುವುದಾಗಿ ವಿವರಿಸಿದೆ.

"ಅಚ್ಚಾ, ನಿಮಗೆಲ್ಲ ಸೂಕ್ತವಾದ ಸವಲತ್ತು ಕೊಟ್ಟರೆ ಪ್ರಗತಿ ಸಾಧಿಸಬಲ್ಲಿರಿ ಎಂದು ನನಗ್ಗೊತ್ತು. ಆದರೆ ಇತರೇ ಹಿಂದುಳಿದ ದೇಶಗಳಂತೆ ಇಲ್ಲೀನೂ ಸಹ ಯುವ ವಿಜ್ಞಾನಿಗಳು ಒಂದು ತರದ 'ವೈಜ್ಞಾನಿಕ ಪ್ರತ್ಯೇಕತೆ' ಅನುಭವಿಸ್ತಿರೋದು ನನಗೆ ಬೇಸರವನ್ನುಂಟುಮಾಡುತ್ತೆ. ಡಾಕ್ಟರೇಟ್ ಪಡೆದ ಮೇಲೆ ಸಾಕಷ್ಟು ಪ್ರೋತ್ಸಾಹ ಇಲ್ಲದೆ ಅಂತರ ರಾಷ್ಟ್ರೀಯ ಮಟ್ಟಕ್ಕಿಂತ ತುಂಬ ಹಿಂದೆ ಬಿದ್ದಿದ್ದಾರೆ."

### ಬಡಜನರ ಮಧ್ಯೆ

"ಆದರೆ ನಮ್ಮ ದೇಶದ ಒಟ್ಟಾರೆ ಆರ್ಥಿಕ ಸ್ಥಿತಿ ಗಮನದಲ್ಲಿಟ್ಟು ಕೊಂಡೇ ವಿಜ್ಞಾನಿಯಾದವನು ತನ್ನ ಬೇಡಿಕೆಗಳನ್ನು ನಿರ್ಧರಿಸಬೇಕಲ್ವೆ? ಅಲ್ಲದೆ ದೇಶದ ಬಡಜನರ ಮಧ್ಯೆ ವಿಜ್ಞಾನಿಗಳು ತಾವೇ ಒಂದು 'ಶ್ರೇಷ್ಠ' ವರ್ಗ ಅಂತ ಭಾವಿಸಿಕೊಳ್ಳೋದು ತಪ್ಪಾಗಲ್ವೆ?"

"ಆದರೆ ನಾನು ಹೇಳೋದು ದೇಶಕ್ಕೆ ತೊಂದರೆ ಗಳಿವೆ ಅನ್ನೋ ನೆಪದಲ್ಲಿ ಪ್ರತಿಭೆಯನ್ನು ನಾಶ ಮಾಡ ಬಾರದು ಎಂಬ ಅರ್ಥದಲ್ಲಿ"

"ನಮ್ಮ ದೇಶದಲ್ಲಿ ಕೆಲವು ಕಡೆ ಉಪಯುಕ್ತ ವಿಜ್ಞಾನದ (Applied Science) ಸಂಶೋಧಕರಿಗೂ. ಮೂಲಭೂತ ವಿಜ್ಞಾನದ (Fundamental Science) ಸಂಶೋಧಕರಿಗೂ ತಮ್ಮದೇ ಶ್ರೇಷ್ಠವಾದದ್ದು ಅನ್ನೋ ಪೈಪೋಟಿಯಿದೆ. ವಿಜ್ಞಾನಿಗಳ ಈ ಸಂಘರ್ಷ ಸರಿಯೆ?"

"ಭಾರತದಂತಹ ಬಡರಾಷ್ಟ್ರಕ್ಕೆ ಅವಶ್ಯಕತೆ ಪೂರೈ ಸುವ ಸಂಶೋಧನೆಯೇ ಅಗತ್ಯವಾಗಿದ್ದರೂ ಸಹ, ಆ ಕ್ಷೇತ್ರದಲ್ಲಿ ಈಗಾಗಲೇ ಹಿರಿಯ ಮಟ್ಟದ ಪ್ರಗತಿ ಸಾಧಿ ಸಿರೋದರಿಂದ ಮೂಲಭೂತ ವಿಜ್ಞಾನದ ತತ್ವಗಳ ಬಗ್ಗೆನೂ ಗಮನ ಕೊಡೋದು 'ಲಕ್ಸುರಿ' ಅಂತೇನೂ ನಾನು ಭಾವಿಸೋದಿಲ್ಲ."

"ವಿಜ್ಞಾನಿಯಾಗಿದ್ದರೂ ತಮಗೆ ದೇವರು, ಧರ್ಮ ಇದರಲ್ಲೆಲ್ಲ ನಂಬಿಕೆಯಿದೆಯೇ? ಇಲ್ಲ, ತಾವೊಬ್ಬ ವಿಚಾರವಾದಿಯೇ?"

"ಮೊದಲು ನನಗೆ ಈ 'ವಿಚಾರವಾದ' ಅಂದ್ರೇ ನೂಂತ ಹೇಳ್ತೀರಾ?"

"ಯಾವುದೇ ತತ್ವ ಅಥವಾ ಅಭಿಪ್ರಾಯವನ್ನು ಸೂಕ್ತ ಆಧಾರಗಳೊಂದಿಗೆ ದೃಢಪಡಿಸಿಕೊಂಡು ಒಪ್ಪಿ ಕೊಳ್ಳೋದು..."

"ಹಾಗೆಂದ ಮೇಲೆ ನಾನು ನಂಬಿರೋ ಧರ್ಮ ದಲ್ಲಿಲ್ಲದೇ ಇರೋ 'ವಿಚಾರವಾದ' ಒಂದಿದೆ ಅಂತ ನನಗನಿಸಿಲ್ಲ. ಅವೈಚಾರಿಕವಾದದ್ದು ಧರ್ಮ ಅನ್ನಿಸಿ ಕೊಳ್ಳೋಕೆ ಸಾಧ್ಯವೂ ಇಲ್ಲ." ಇಷ್ಟು ಹೇಳೋದರಲ್ಲೇ ಅವರ ಅತಿಥೇಯರೆಲ್ಲ ಕರೆದುಕೊಂಡು ಹೋಗೋಕೆ ಬಂದೇಬಿಟ್ಟರು. "ದೇಖೋ ಭೈ, ಇವರೆಲ್ಲ ಬಂದೇ ಬಿಟ್ಟ ರು. ಸಾಯಂಕಾಲ ಮತ್ತೆ ಭೇಟಿ ಮಾಡೋಣ... ಖಂಡಿ ತವಾಗಿಯೂ ಮಾತಾಡ್ತೇನೆ" ಎಂದು ಮೇಲಕ್ಕೆದ್ದರು.

### ಖಂಡಿಸಬೇಕಲ್ವೆ?

ಸಾಯಂಕಾಲ ಟಾಟಾ ಇನ್ಸಿಟ್ಯೂಟಿಗೆ ಸಂಪಾದ ಕರೂ ಸಹ ಜತೆಯಲ್ಲಿ ಬಂದರು. ಅಲ್ಲಿ ವಿಜ್ಞಾನಿಗಳ ನ್ನುದ್ದೇಶಿಸಿ ಮಾತನಾಡಿದ ಸಲಾಂ ಸಭೆಯ ನಂತರ ಅಲ್ಲಿ ಹಾಜರಿದ್ದ ತಮ್ಮ ಹಳೇ ಗುರು ಪ್ರೊ. ಚಾಂಡಿಯವರನ್ನು ವೇದಿಕೆ ಮೇಲೆ ಕರೆತಂದು ಭಾವಚಿತ್ರ ತೆಗೆಸಿಕೊಂಡರು.

ತಮ್ಮ ಸರದಿ ಬಂದ ಕೂಡಲೇ ಬೆಳಿಗ್ಗೆ ಅರ್ಧಕ್ಕೆ ನಿಲ್ಲಿಸಿದ ಸಂಭಾಷಣೆ ಮುಂದುವರಿಸಿದೆ:

"ತಾವು ಧರ್ಮದ ಬಗ್ಗೆ ಮಾತನಾಡುತ್ತ ಅವೈಚಾ ರಿಕವಾದದ್ದೆಲ್ಲ ಧರ್ಮವೇ ಅಲ್ಲ ಅಂತ ಹೇಳಿದ್ರಿ. ಆದರೆ ಧರ್ಮದ ಹೆಸರಿನಲ್ಲಿ ನಡೆಯೋ ಕಂದಾಚಾರಗಳನ್ನಾ ದರೂ ಖಂಡಿಸಬೇಕಲ್ವೆ?"

"ಖಂಡಿತವಾಗಿಯೂ! ನೋಡಿ, ಎಲ್ಲ ಧರ್ಮ ಗಳೂ ನೀನು ಬೇರೆಯವರಿಗೆ ಏನನ್ನ ಮಾಡ್ತಿಯೋ ಅದನ್ನೇ ನೀನೂ ಪಡೆಯೋದು' ಅಂತ ಹೇಳೋದು ಸರಿಯಲ್ವ? ಅದರಲ್ಲೇನಾದರೂ ಅವೈಚಾರಿಕತೆ ಇದೆ ಯೇ? ನನ್ನ ಪ್ರಕಾರ ಧರ್ಮ ಅಂದರೆ ನಮ್ಮ ಸಾಮಾ ಜಿಕ ನಡವಳಿಕೆಗೆಲ್ಲ ಕಂಟ್ರೋಲ್ ಮಾಡೋ ವ್ಯವಸ್ಥೆ ಅಂತ. ದೇವರ ಬಗ್ಗೆ ನಾನೀಗೇನೂ ಹೇಳೋಲ್ಲ."

### 'ಶಕ್ತಿ' ದೇವರೆ?

ಧರ್ಮದ ಬಗ್ಗೆ ನಡೀತಿದ್ದ ಮಾತು ಕೇಳಿಸಿಕೊಂಡು ಅಲ್ಲಿ ಕುಳಿತಿದ್ದ ಇಂಗ್ಲಿಷ್ ವಾರ ಪತ್ರಿಕೆಯೊಂದರ ವರ ದಿಗಾರ್ತಿ ಮಧ್ಯೆ ಪ್ರವೇಶಿಸಿ "ತಾವು ಭೌತಶಾಸ್ತ್ರದಲ್ಲಿ ಹೇಳೋ 'ಶಕ್ತಿ' (Energy) ದೇವರೇ ಅಲ್ಲವೆ?" ಎಂದು ಕೇಳಿದರು.

ಆಗ ಸಲಾಂ ತಲೆಯಾಡಿಸುತ್ತ, "ಇಲ್ಲ, ಇಲ್ಲ. ನಾನು ಹೇಳೋ 'ಶಕ್ತಿ'ಯನ್ನು ಪ್ರಯೋಗ ಮಾಡಿ ತೋರಿಸಬಹುದು" ಎಂದು ತಟ್ಟನೆ ಉತ್ತರಿಸಿದರು.

"ಹಿಂದುಳಿದ ರಾಷ್ಟ್ರಗಳ ವಿಜ್ಞಾನಿಗಳಿಗೆ ಪ್ರೋತ್ಸಾಹ ಕೊಡೋದಕ್ಕಾಗಿ ಭೌತಶಾಸ್ತ್ರದಲ್ಲಿ ತಾವು ಸ್ಥಾಪಿಸಿರೋವಂತಹ ಸಂಸ್ಥೆ ಬೇರೆ ಬೇರೆ ವಿಷಯಗಳಲ್ಲೂ ಸ್ಥಾಪಿಸುವವರು ಅಗತ್ಯವಲ್ಲವೆ ?

"ಹೌದು. ನಿಮ್ಮಲ್ಲೆ ಡಾ| ಸಿ. ವಿ. ರಾಮನ್ ಇರಲಿಲ್ವೆ ? ಈಗಲೂ ಹರಗೋವಿಂದ್ ಖೊರಾನಾ ಇದ್ದಾರೆ. ಅವರೂ ಈ ದಿಸೆಯಲ್ಲಿ ಯೋಚಿಸಬಹುದು. (..."ಖೊರಾನಾ ಕೂಡ ಪಂಜಾಬಿನವರೇ ಗೊತ್ತ..." ಎಂದು ಹೆಮ್ಮೆಯಿಂದ ಹೇಳಿಕೊಂಡರು).

ಅದುವರೆಗೂ ಸುಮ್ಮನಿದ್ದ ಸಂಪಾದಕರು ಪ್ರಶ್ನೆ ಹಾಕಿದರು: "ಒಂದೊಂದು ಜನಾಂಗದಿಂದ ಸ್ಫೂರ್ತಿ ಪಡೆದು ಒಬ್ಬೊಬ್ಬ ಯುಗಪುರುಷ ಹುಟ್ಟಿ ಬಂದಿರೋದನ್ನ ಇತಿಹಾಸದಲ್ಲಿ ಕಂಡಿದ್ದೇವೆ. ಹಾಗೇನೆ ನಿಮಗೆ ನೊಬೆಲ್ ಪ್ರಶಸ್ತಿ ಬರೋ ಸಂದರ್ಭದಲ್ಲೇ ಮಧ್ಯ-ಪೂರ್ವ ಏಶಿಯಾದಲ್ಲಿ ಇಸ್ಲಾಂ ಪುನರುತ್ಥಾನ ಆಗ್ತಿರೋದು ಮುಸ್ಲಿಂ ಯುವಕರಿಗೆಲ್ಲ ಹೊಸ ಕೆಚ್ಚು ಮೂಡಿಸೋದಿಲ್ವೆ ?"

(ಈ ಪ್ರಶ್ನೆಗೆ ಸಲಾಂ ಉತ್ತರಿಸೋದಕ್ಕಿಂತ ಮುಂಚೆ ಅಲ್ಲಿದ್ದ ಅವರ ಸಂಪರ್ಕಾಧಿಕಾರಿ, ಸಂಪಾದಕರನ್ನುದ್ದೇಶಿಸಿ "ಇದು ತುಂಬ ಸೂಕ್ಷ್ಮವಾದ ಪ್ರಶ್ನೆ. ಆದ್ದರಿಂದ ದಯವಿಟ್ಟು ಅವರೇನೇ ಉತ್ತರಿಸಿದರೂ ಅಪಾರ್ಥ ಆಗದಂತೆ ಪ್ರಕಟಿಸಿ" ಎಂದು ವಿನಂತಿಸಿದರು. "ನೀವೇನೂ ಯೋಚ್ನೆ ಮಾಡಬೇಡಿ. ನಾವೂ ಅದನ್ನ ಸೂಕ್ಷ್ಮವಾಗಿಯೇ ಪರಿಗಣಿಸುತ್ತೇವೆ..." ಎಂದು ಭರವಸೆ ಕೊಟ್ಟರು ! )

"ಅಂದರೆ ಇಸ್ಲಾಂ ಪುನರುತ್ಥಾನ ಆಗ್ತಿರೋದರಿಂದಲೇ ನನಗೆ ಬಹುಮಾನ ಬಂತು ಅಂತೀರಾ ? ಹಾಗೇನಿಲ್ಲ. ನನ್ನಿಂದ ಮುಸ್ಲಿಂ ಯುವಕರಿಗೆ ಸ್ಫೂರ್ತಿ ಸಿಕ್ಕಿದ್ದರೆ ನನಗೂ ಸಂತೋಷ ಅಷ್ಟೆ."

"ಕೊನೇ ಪ್ರಶ್ನೆ. ವಿಜಾನಿಯಾದವನಿಗೆ ಸಾಹಿತ್ಯ, ಕಲೆ, ಸಂಸ್ಕೃತಿಯ ಪರಿಜ್ಞಾನ ಇರೋದು ಅಗತ್ಯ ಅಂತ ಭಾವಿಸ್ತೀರಾ" ?

"ಓಹೋ ನಾನು ಕಂಡಿರೋ ಹಾಗೆ ವಿಜ್ಞಾನಿಗಳೇ ಮಾನವಿತ ಶಾಸ್ತ್ರಜ್ಞರಿಗಿಂತ ಹೆಚ್ಚು ವಿಶಾಲವಾದ ಅಭಿರುಚಿ, ದೃಷ್ಟಿಕೋನ ಬೆಳೆಸಿಕೊಂಡಿರೋದು."

ಇದನ್ನೂ ಸಂಪಾದಕರು ಅಲ್ಲಗಳೆಯುತ್ತ "ಹಾಗಾದರೆ ನೀವೂ ಸಿ. ಪಿ. ಸ್ನೋ ವಿಚಾರಗಳನ್ನು ಪ್ರತಿಪಾದಿಸ್ತೀರಿಂತೆ ಕಾಣುತ್ತೆ..." ಆಗ ಸಲಾಂ "ನನಗೆ ಸ್ನೋ ಜತೆಗೆ ವೈಯಕ್ತಿಕ ಸ್ನೇಹ ಕೂಡ ಇತ್ತು. ಆದರೂ ನನಗೆ ಈ ವಿಚಾರದಲ್ಲಿ ಬಿಗಿಯಾದ ಧೋರಣೆಯೇನೂ ಇಲ್ಲ" ಎಂದು ಉತ್ತರಿಸಿ ಕೈ ಕುಲುಕಿದರು. "ನಿಮ್ಮ ಸಂಶೋಧನೆಗಳು ಮಾನವ ಜನಾಂಗದಲ್ಲಿ ಪರಸ್ಪರ ಪ್ರೇಮ, ವಿಶ್ವಾಸ ಹೆಚ್ಚಿಸಲಿ" ಎಂದು ಸಂಪಾದಕರು ಹಾರೈಸಿದರು. ಅಬ್ದುಸ್ ಸಲಾಂಗೆ 'ಸಲಾಂ' ಹೇಳಿ ಹೊರ ಬಂದಾಗ ಸಂಜೆಯಾಗಿತ್ತು. ಸಂಕ್ರಾಂತಿಯಂದು ನಡೆದ ಈ ಭೇಟಿ ನಮಗೆಲ್ಲ ಸಂತೃಪ್ತಿ ನೀಡಿತ್ತು.

—ರವೀಂದ್ರ ರೇಷ್ಮೆ


ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

# ಮೈತ್ರಿ ಸಂದೇಶ

"......ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು ....." —ಉದಯವಾಣಿ.

"......ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ ....." —ನವಭಾರತ

ಪುಟಗಳು: **48** ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ

ಬರೆಯಿರಿ: The Editor, YUGARASHMI, Kannada Quarterly, 10-23/1008, Ansari Road, Bunder, Mangalore-575 001.

# ಓರ್ವ ವಿಜ್ಞಾನಿಯ ಭಾರತ ಸಂದರ್ಶನ

★ ಟಿ. ಕೆ. ಅಬ್ದುಲ್ ಲತೀಫ್



ಮದರಾಸಿನ ಅಡಯಾರ್‌ನಲ್ಲಿ 'ಇನ್‌ಸ್ಟಿಟ್ಯೂಟ್ ಆಫ್ ಮ್ಯಾತಮೆಟಿಕಲ್ ಸಯನ್ಸೆಸ್'ನ ಮುಂಭಾಗದಲ್ಲಿರುವ ಹೂದೋಟದಲ್ಲಿ ವಿಜ್ಞಾನಿಗಳ ಗುಂಪೊಂದು ಸಮ್ಮೇಳಿಸಿದೆ. ಅವರೆಲ್ಲರ ಗಮನ ಒಬ್ಬ ವ್ಯಕ್ತಿಯ ಮೇಲೆ ಕೇಂದ್ರೀಕರಿಸಿದೆ; ಅವರೇ ನೋಬೆಲ್ ಪ್ರಶಸ್ತಿ ವಿಜೇತ ಭೌತಶಾಸ್ತ್ರ ವಿಜ್ಞಾನಿ ಪ್ರೊಫೆಸರ್ ಅಬ್ದುಸ್ಸಲಾಂ !

ಅರ್ಧ ಗಂಟೆ ಕಾಲ ನಡೆದ 'ಗೆಟ್ ಟುಗೆದರ್'ಗೆ ವಿರಾಮ ಹಾಕುತ್ತಾ ಇನ್‌ಸ್ಟಿಟ್ಯೂಟ್ ಡೈರೆಕ್ಟರ್ ಡಾ। ಅಲ್ಲಾಡಿ ರಾಮಕೃಷ್ಣನ್ ಹೇಳಿದರು: "ಈ ಇನ್‌ಸ್ಟಿಟ್ಯೂಟಿಗೆ ಅತ್ಯಧಿಕ ಪ್ರಚೋದನೆ ನೀಡಿದ ವ್ಯಕ್ತಿ ಈಗ ಇಲ್ಲಿ ಸನ್ನಿಹಿತರಾಗಿರುವುದು ನಮ್ಮನ್ನು ಆಹ್ಲಾದಭರಿತರನ್ನಾಗಿ ಮಾಡಿದೆ. ಅವರೊಡನಿರುವ ಗೌರವಾರ್ಥ ನಮ್ಮ ಈ ಸಲದ ವಾರ್ಷಿಕ ಸೆಮಿನಾರ್ 'ಮ್ಯಾಕ್ಸ್ ಪ್ಲಾಂಕ್‌ನಿಂದ ಅಬ್ದುಸ್ಸಲಾಂ' ವರೆಗಿನ ಆಧುನಿಕ ಭೌತ ವಿಜ್ಞಾನಿಗಳ ಕೊಡುಗೆಗಳ ಕುರಿತಾಗಿರಬಹುದು. ಪ್ರೊಫೆಸರ್‌ರವರ ಈ ಸಂದರ್ಶನದ ನೆನಪಿಗಾಗಿ ಮೂರು ಸಸಿಗಳನ್ನು ಇನ್‌ಸ್ಟಿಟ್ಯೂಟಿಗೆ ಕೊಡಬೇಕೆಂದು ನಾನು ಅವರೊಡನೆ ಅಪೇಕ್ಷಿಸುತ್ತೇನೆ." ('ಮ್ಯಾತ್‌ಸಯನ್ಸ್' ಸಂಸ್ಥೆಯನ್ನು ಸ್ಥಾಪಿಸಲು ಅತ್ಯಂತ ಪರಿಶ್ರಮಿಸಿದ ಒಬ್ಬ ವ್ಯಕ್ತಿಯಾಗಿದ್ದಾರೆ ಪ್ರೊ. ಅಬ್ದುಸ್ಸಲಾಂ. 19 ವರ್ಷಗಳ ಮೊದಲು ಅವರೇ ಅದನ್ನು ಉದ್ಘಾಟಿಸಿದರು. ಪ್ರೊ. ಸಲಾಮರ ಭಾವಚಿತ್ರ ಇನ್‌ಸ್ಟಿಟ್ಯೂಟಿನಲ್ಲಿ ಅನಾವರಣ ಮಾಡಲಾಗಿದೆ.)

* * *

ಹಲವರಿಗೆ ಅವರೊಬ್ಬ 'ಗಡ್ಡಧಾರಿ ಪ್ರೊಫೆಸರ್' ಆಗಿದ್ದರು! ಕೆಲವು ಭಾರತೀಯ ಪತ್ರಿಕೆಗಳು ಅವರನ್ನು ಹಾಗೆ ಕರೆದಿವೆ. ಗಡ್ಡದಲ್ಲಿ ಮಾತ್ರ ಸೀಮಿತವಲ್ಲ ಪ್ರೊ. ಸಲಾಮರ ದೈವವಿಶ್ವಾಸ. ಬೇರಾವ ವಿಜ್ಞಾನಿಯಲ್ಲೂ ಗೋಚರವಾಗದಂತಹ ದೇವನೊಡನಿರುವ ಅತ್ಯಂತ ಭಕ್ತಿ ವಿಶ್ವಾಸ ಅವರಲ್ಲಿ ಕಾಣಬಹುದಾಗಿದೆ.

ಹೆಚ್ಚೇಕೆ, ತನ್ನ ಸಂಶೋಧನೆಗಳು ಕೂಡ ತನ್ನ ಅಂತರಂಗದ ಆಧ್ಯಾತ್ಮಿಕ ಪ್ರೇರಣೆಯ ಬಹಿರ್ ಸ್ಫುರಣಗಳಾಗಿ ಮಾತ್ರವೇ ಅವರಿಗೆ ಕಾಣಲು ಸಾಧ್ಯ!

ಲಂಡನಿನ ಇಂಪೀರಿಯಲ್ ಕಾಲೇಜಿನಲ್ಲಿ ಕ್ಲಾಸ್ ಪ್ರಾರಂಭಿಸುವಾಗಲೆಲ್ಲಾ ಅವರು ಪವಿತ್ರ ಖುರ್‌ಆನಿನ ವಾಕ್ಯಗಳನ್ನು ಉಚ್ಚರಿಸುವಂತೆಯೇ, ನೋಬೆಲ್ ಪ್ರಶಸ್ತಿ ಪಡೆದು ಭಾಷಣ ಆರಂಭಿಸುವಾಗಲೂ ಅವರು ಖುರ್‌ಆನ್ ವಚನಗಳನ್ನು ಪಠಿಸಿದರು!

ಪ್ರೊ. ಸಲಾಮರ ಸಂಶೋಧನೆ, ಪ್ರಪಂಚದ ಮೂಲ ಶಕ್ತಿಗಳ ಏಕೀಭವನವಾಗಿದೆ. ಜನವರಿ 23ರಂದು ನವದೆಹಲಿಯಲ್ಲಿ ಆರನೆಯ 'ಝುಹೀರ್ ಸಯನ್ಸ್ ಫೌಂಡೇಶನ್ ಭಾಷಣ' ಮಾಡುತ್ತಾ ಅವರು ಹೇಳಿದರು: "ಮೂಲ ಶಕ್ತಿಗಳ ಏಕೀಕರಣ ಸಾಬೀತುಗೊಳಿಸಬೇಕೆಂಬ ಐನ್‌ಸ್ಟೀನರ ಕನಸು ಕೆಲವೇ ದಶಕಗಳೊಳಗೆ ಸಾಕ್ಷಾತ್ಕರಿಸಲ್ಪಡುವುದೆಂದು ನನಗೆ ಭರವಸೆಯಿದೆ"

ನೋಬೆಲ್ ಪ್ರಶಸ್ತಿ ಗಳಿಸಿದ ಕೂಡಲೇ ಪಾಕಿಸ್ತಾನ ಅಧ್ಯಕ್ಷ ಜ। ಮುಹಮ್ಮದ್ ಜಿಯಾವುಲ್‌ಹಕ್ ನೀಡಿದ ಒಂದು ಸತ್ಕಾರ ಸಮಾರಂಭದಲ್ಲೂ ಅವರು ಈ ವಿಚಾರ ಹೇಳಿದ್ದರು: "ಮುಂದಿನ ಐವತ್ತು ವರ್ಷಗಳೊಳಗೆ ಮೂಲ ಶಕ್ತಿ ಒಂದೇ ಇರುವುದೆಂದು ಸಾಬೀತುಗೊಳ್ಳುವುದು." ಪ್ರೊಫೆಸರ್ ಹಾಗೆ ಅಭಿಪ್ರಾಯಪಡಲು ಕಾರಣವೇನೆಂದು ಕೇಳಿದರೆ, ಅವರು ಹೇಳುವರು:

ನನ್ನಲ್ಲಿರುವ ಏಕದೇವ ವಿಶ್ವಾಸ ನನ್ನನ್ನು ಹಾಗೆ ಚಿಂತನೆ ಮಾಡಲು ಪ್ರೇರೇಪಿಸುತ್ತದೆ.

* * *

ಪ್ರೊಫೆಸರ್ ಅಬ್ದುಸ್ಸಲಾಂ ತೃತೀಯ ಜಗತ್ತಿನ ವಕ್ತಾರ ಕೂಡ ಆಗಿದ್ದಾರೆ. ಈ ರಾಜ್ಯಗಳು ವಿಜ್ಞಾನ ದಲ್ಲಿ ಪ್ರಗತಿ ಗಳಿಸಬೇಕೆಂದು ಅವರು ಆತ್ಮಾರ್ಥವಾಗಿ ಇಚ್ಛಿಸುತ್ತಾರೆ. ಮೂರು ವಾರಗಳ ಭಾರತ ಸಂದರ್ಶನ ದಲ್ಲಿ ಅವರು ಹಲವೆಡೆಗಳಲ್ಲಿ ಈ ವಿಚಾರದ ಬಗ್ಗೆ ಒತ್ತಿ ಹೇಳಿದರು.

ವರ್ಧಮಾನ ರಾಷ್ಟ್ರಗಳ ಯುವ ವಿಜ್ಞಾನಿಗಳನ್ನು ಉದ್ದೇಶಿಸಿ 1964ರಲ್ಲಿ ಇಟೆಲಿಯ ಟ್ರಿಯೆಸ್ಟಿಯಲ್ಲಿ 'ಇಂಟರ್‌ನ್ಯಾಶನಲ್ ಸೆಂಟರ್ ಫೋರ್ ಥಿಯರಿಟಿಕಲ್ ಫಿಸಿಕ್ಸ್' ಸಂಸ್ಥೆಯನ್ನು ಅವರು ಸ್ಥಾಪಿಸಿದರು. ಸೋವಿಯೆತ್ ಯೂನಿಯನ್, ಅಮೇರಿಕ, ಬ್ರಿಟನ್ ಮೊದಲಾದ ರಾಜ್ಯಗಳು, ಮಾತ್ರವಲ್ಲ ವಿಶ್ವಸಂಸ್ಥೆಯ ಘಟಕವಾದ 'ಇಂಟರ್‌ನ್ಯಾಶನಲ್ ಆಟಮಿಕ್ ಎನರ್ಜಿ ಕಮಿಷನ್' ಸಹ ಇಂತಹ ಒಂದು ಸಂಸ್ಥೆ ಜನ್ಮ ತಾಳುವುದನ್ನು ವಿರೋಧಿಸಿತ್ತೆಂದು ಪ್ರೊ. ಅಬ್ದುಸ್ಸಲಾಂ ಕಲ್ಕತ್ತಾದ 'ಸಾಹಾ ಇನ್‌ಸ್ಟಿಟ್ಯೂಟ್ ಓಫ್ ನ್ಯೂಕ್ಲಿಯರ್ ಫಿಸಿಕ್ಸ್' ನಲ್ಲಿ ಮಾಡಿದ ಭಾಷಣದಲ್ಲಿ ಹೇಳಿದರು. "ಅವರ ವಿರೋಧ ಸ್ವಾಭಾವಿಕ ಮಾತ್ರವಾಗಿತ್ತು." ಆದರೆ ಇಟೆಲಿ ಸರಕಾರದ ಬಹಳ ಅನುಭಾವಪೂರ್ವಕವಾದ ನೀತಿ ಈ ಸಂಸ್ಥೆಯ ಪ್ರಗತಿಗೆ ಕಾರಣ. ಅಲ್ಲಿ ತರಬೇತಿ ಪಡೆದ ವಿಜ್ಞಾನಿಗಳು ಇಂದು ಹಲವು ವರ್ಧಮಾನ ರಾಷ್ಟ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಪ್ರೊ. ಅಬ್ದುಸ್ಸಲಾಂ ಈಗ ಇಟೆಲಿಯಲ್ಲೇ ಬೇರೊಂದು ಸಂಶೋಧನ ಇನ್‌ಸ್ಟಿಟ್ಯೂಟ್ ಸ್ಥಾಪಿಸುವ ತಯಾರಿಯಲ್ಲಿದ್ದಾರೆ—'ಇಂಟರ್‌ನ್ಯಾಶನಲ್ ಸೆಂಟರ್ ಫೋರ್ ಎಕ್ಸ್‌ಪರಿಮೆಂಟಲ್ ಸೋಲಿಡ್ ಸ್ಟೇಟ್ ಫಿಸಿಕ್ಸ್' ಎಂಬ ಹೆಸರಿನಿಂದ ಅದು ಕರೆಯಲ್ಪಡಬಹುದು.

ಭಾರತದಲ್ಲಿ ವೈಜ್ಞಾನಿಕ ಸಂಶೋಧನೆ ಆಶಾದಾಯಕವಾಗಿದ್ದರೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅದು ಉನ್ನತಿ ಗಳಿಸಿಲ್ಲ. ಇಟೆಲಿಯಲ್ಲಿರುವಂತಹ ಸಂಶೋಧನ ಕೇಂದ್ರಗಳು ಭಾರತದಲ್ಲೂ ತಲೆಯೆತ್ತಬೇಕಾದುದು ಅತ್ಯಾವಶ್ಯಕವೆಂದು ನವದೆಹಲಿಯಲ್ಲಿ ನ್ಯಾಶನಲ್ ಸೈನ್ಸ್ ಅಕಾಡೆಮಿಯ ಸಭೆಯಲ್ಲಿ ಅವರು ಹೇಳಿದರು.

ಮೂಲ ಶಕ್ತಿಗಳ ಕುರಿತು ಸಂಶೋಧನೆಗಳು ಇಟೆಲಿಯಂತೆ ಭಾರತದಲ್ಲೂ ನಡೆಯುತ್ತಿದೆ. ತನ್ನ ಸ್ನೇಹಿತ ಒರಿಸ್ಸಾದ ಪ್ರೊಫೆಸರ್ ಯೋಗೇಶ್ ಸಿ. ಪಥಿ ಇದಕ್ಕೆ ನೇತೃತ್ವ ನೀಡುತ್ತಿರುವರೆಂದು ಪ್ರೊಫೆಸರ್ ಹೇಳಿದರು.

ಅಣ್ವಾಯುಧ ವ್ಯಾಪಕತೆಯಲ್ಲಿ ಪ್ರೊ. ಅಬ್ದುಸ್ಸಲಾಮರಿಗೆ ಕಳವಳವಿದೆ.* ಈಗ ಲೋಕದಲ್ಲಿರುವ ಅಣ್ವಸ್ತ್ರಗಳೇ ಲೋಕದ ಜನಸಂಖ್ಯೆಯ ಎಂಟರಷ್ಟನ್ನು ನಾಶ ಪಡಿಸಲು ಪರ್ಯಾಪ್ತವೆಂದು ಅವರು ಹೇಳಿದರು.

ಆದರೂ ಕೆಲವು ಕಡೆಗಳಲ್ಲಿ ಅಣ್ವಸ್ತ್ರಗಳಿಗೆ ವಿರುದ್ಧವಾಗಿ ಹೊಸ ಚಳವಳಿಗಳು ಪ್ರಾರಂಭವಾಗಿವೆ—ಬ್ರಿಟನಿನಲ್ಲಿ ಇ. ಪಿ. ತೋಂಪ್ಸನ್‌ರವರ ನಾಯಕತ್ವದಲ್ಲಿ 'ಏಕಪಕ್ಷೀಯ ನಿರಾಯುಧೀಕರಣ' (Unilateral Nuclear Disarmament) ಬೇಕೆಂದು ಅಗತ್ಯಪಡಿಸಿಕೊಂಡು ಆಂದೋಳನಗಳು ನಡೆಯುತ್ತವೆ.

ಇಂದಿನ ಊರ್ಜ ಸಮಸ್ಯೆಗೆ ಒಂದು ದಿಢೀರ್ ಪರಿಹಾರ ಕಂಡುಕೊಳ್ಳಲು ಸಾಧ್ಯವೆಂದು ಅಬ್ದುಸ್ಸಲಾಂ ಭಾವಿಸುವುದಿಲ್ಲ. (1979ರಲ್ಲಿ ಇಂಡಿಯನ್ ಸಯನ್ಸ್ ಕಾಂಗ್ರೆಸ್ ಬದಲಿ ಶಕ್ತಿಗಳ ಅನ್ವೇಷಣೆ ಮಾಡಲಿಕ್ಕೆ ಜಗತ್ತಿನ ವಿಜ್ಞಾನಿಗಳನ್ನು ಕೇಳಿಕೊಂಡಿತ್ತು.) ತೈಲ ಬಾವಿಗಳು ಹೆಚ್ಚೆಂದರೆ ಐವತ್ತು ವರ್ಷ ಕಾಲ ಬತ್ತಿಹೋಗದೆ ಬಾಕಿಯುಳಿಯಬಹುದು. ಅಷ್ಟರೊಳಗೆ ಹೊಸ ಊರ್ಜಗಳನ್ನು ಕಂಡುಹಿಡಿಯಬಹುದೆಂದು ಪ್ರೊ. ಹೇಳುತ್ತಾರೆ.

* * *

ಪ್ರೊ. ಅಬ್ದುಸ್ಸಲಾಮರ ಮೂರು ವಾರಗಳ ಭಾರತ ಸಂದರ್ಶನ ಭಾರತದ ಭೌತ ವಿಜ್ಞಾನಿಗಳಿಗೆ ಬಹಳ ಉತ್ತೇಜನ ನೀಡಿದೆ. 'ಪಾರ್ಟಿಕ್ಲ್ ಫಿಸಿಕ್ಸ್'ನ ಕುರಿತು ಅವರಿಗದು ಗಹನವಾಗಿ ಅಧ್ಯಯನ ಮಾಡುವ ಒಂದು ಅವಕಾಶವಾಗಿತ್ತು. ಬೊಂಬಾಯಿಯಲ್ಲಿ

---

* ಅಣ್ವಸ್ತ್ರ ತಯಾರಿಸುವುದು ಬರೇ ಹುಚ್ಚುತನವೆಂದು ಪ್ರೊ. ಸಲಾಮರ ಅಭಿಮತವಾಗಿದೆ. 1972ರಲ್ಲಿ ಪಾಕಿಸ್ತಾನ ಪ್ರಧಾನಿ ಝುಡ್. ಎ. ಭುಟ್ಟೋ ಅಣುಬಾಂಬ್ ತಯಾರಿಸುವ ವಿಚಾರದಲ್ಲಿ ಅಲ್ಲಿನ ವಿಜ್ಞಾನಿಗಳ ಒಂದು ಸಭೆಯನ್ನು ಮುಲ್ತಾನಿನಲ್ಲಿ ಕರೆದು ಸಮಾಲೋಚನೆ ನಡೆಸಿದಾಗ, ಅಣುಬಾಂಬ್ ತಯಾರಿಸುವುದಕ್ಕೆ ವಿರೋಧವನ್ನು ಸೂಚಿಸಿದವರು ಪ್ರೊ. ಅಬ್ದುಸಲಾಂ ಒಬ್ಬ ಮಾತ್ರ. —ಸಂಪಾದಕ.

ಹೋಮಿ ಬಾಬಾ ಸಭಾಂಗಣದಲ್ಲೂ ಕಾಲ್ಪಾಕ್ಕಂ ಫಿಸಿಕ್ಸ್ ರಿಯಾಕ್ಟರ್ ಸೆಂಟರ್‌ನಲ್ಲೂ ಕಲ್ಕತ್ತಾದ ಗಾರಿಯಬ್ಲ್ ಎನರ್ಜಿ ಸೈಕ್ಲೋಟ್ರೋನ್ ಸೆಂಟರ್‌ನಲ್ಲೂ ಅದರ ಪ್ರತಿಧ್ವನಿಯೆದ್ದಿತ್ತು.

ಅಬ್ದುಸ್ಸಲಾಮರಿಗೆ ತನ್ನ '81ರ ಭಾರತ ಸಂದರ್ಶನ ಹಲ ವಿಧದಲ್ಲಿ ಸ್ಮರಣಾರ್ಹವಾಗಿದೆ. ಕಲ್ಕತ್ತಾದಲ್ಲಿ ಎಂಭತ್ತೆಂಟು ವರ್ಷ ದಾಟಿ ರೋಗಶಯ್ಯೆಯಲ್ಲಿ ಕಳೆಯುವ ತನ್ನ ಅಧ್ಯಾಪಕ ಅನಿಲೇಂದ್ರನಾಥ್ ಗಂಗೋಪಾಧ್ಯಾಯರನ್ನು ಅವರು ಎರಡು ಬಾರಿ ಭೇಟಿಯಾದರು,

ತನಗೆ ಸಿಕ್ಕಿದ ನೋಬೆಲ್ ಸ್ವರ್ಣಪದಕವನ್ನು ತೋರಿಸುತ್ತಾ ಸಲಾಂ ಹೇಳಿದರು: "ನೋಡಿರಿ, ಇದು ನನಗೆ ಸಿಕ್ಕಿರುವುದು." ಭಾವೋದ್ವೇಗದ ವಾತಾವರಣದಲ್ಲಿ ಆ ಅಧ್ಯಾಪಕ ಪದಕವನ್ನು ನೋಡಿ ವಾಪಾಸು ಕೊಟ್ಟರು, ಆಶೀರ್ವಾದ ಸಮೇತ. (ಅನಂತರ ಕಲ್ಕತ್ತಾ ವಿಶ್ವವಿದ್ಯಾಲಯದ 'ಸಾರಬಾಧಿಕಾರಿ ಸ್ವರ್ಣಪದಕ'— ಇದು ಮೊದಲು ಪ್ರೊಫೆಸರ್ ಖೊರಾನಾರಿಗೆ ಮಾತ್ರವೇ ಲಭಿಸಿತ್ತು — ಅಬ್ದುಸ್ಸಲಾಮರಿಗೆ ನೀಡಲ್ಪಟ್ಟಾಗ ಈ ಪ್ರೊಫೆಸರರ ಕುರಿತು ಶ್ಲಾಘನೆಯನ್ನೂ ಸಹ ಸನ್ಮಾನ ಪತ್ರಿಕೆಯಲ್ಲಿ ಸೇರಿಸಲಾಗಿತ್ತು. ಅಲ್ಲದೆ 3000 ರೂಪಾಯಿಗಳನ್ನು ಸಹ ಅವರಿಗೆ ನೀಡಲಾಯಿತು.)

ಜನವರಿ 26ರಂದು ಭಾರತದಲ್ಲಿ ಇದ್ದುದರಿಂದ ಅವರಿಗೆ ಅನೇಕ ವರ್ಷಗಳ ನಂತರ ಭಾರತದಲ್ಲಿ ಒಂದು ಜನ್ಮದಿನ ಆಚರಿಸಲು ಸಾಧ್ಯವಾಯಿತು.

ಪ್ರೊ. ಅಬ್ದುಸ್ಸಲಾಂ ಪಾಕಿಸ್ತಾನದಲ್ಲಿ ಅಧ್ಯಕ್ಷರ ವೈಜ್ಞಾನಿಕ ಉಪದೇಶಕರಾಗಿದ್ದಾಗ ಭಾರತದಲ್ಲಿ ದುಡಿಯಲಿಕ್ಕಾಗಿ ಅವರನ್ನು ಟಾಟಾ ಇನ್‌ಸ್ಟಿಟ್ಯೂಟ್ ಓಫ್ ಫಂಡಮೆಂಟಲ್ ರೀಸರ್ಚ್ ಆಮಂತ್ರಿಸಿತ್ತು. ಭಾರತದ ಸಂಶೋಧನ ಸಂಸ್ಥೆಗಳು ಈಗಲೂ ಸಹ ಅವರನ್ನು ಆಹ್ವಾನಿಸಿರಲೂ ಬಹುದು. ಆದರೆ ಅದು ಅವರಿಗೆ ಎಷ್ಟರ ಮಟ್ಟಿಗೆ ಅನುಕೂಲಕರವೆಂದು ಹೇಳಲಿಕ್ಕಾಗದು.

ಈ ಸಂದರ್ಶನದ ಆದಿಯಲ್ಲಿ ಆರ್. ಡಿ. ಬಿರ್ಲಾ ಪ್ರಶಸ್ತಿ ಸ್ವೀಕರಿಸಿದ ಪ್ರೊಫೆಸರ್ ಸಲಾಂ ಇತರ ಹಲವು ಬಹುಮಾನಗಳೊಂದಿಗೆ ಭಾರತದಿಂದ ನಿರ್ಗಮಿಸಿದರು; ಮೂರು ವಾರಗಳ ಭಾರತ ಸಂದರ್ಶನದ ಸ್ಮರಣೆಗಳೂ ಅವರೊಂದಿಗಿವೆ.

—("ಚಂದ್ರಿಕ", ಕಲ್ಲಿಕೋಟೆ: 31–1–1981)


# ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

ಗ್ರಂಥಕರ್ತ: ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್

ಪುಟ: 60 ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ

ಬರೆಯಿರಿ: The Editor, YUGARASHMI Kannada Quarterly,
10-23/1008, Ansari Road, Bunder, Mangalore–575001.

# ವೈಜ್ಞಾನಿಕ ಪ್ರಗತಿಯಲ್ಲಿ ಮುಸ್ಲಿಮರ ಪಾತ್ರ*

—ಪ್ರೊಫೆಸರ್ ಅಬ್ದುಸ್ಸಲಾಂ.

**ವೈಜ್ಞಾನಿಕ ಪ್ರಗತಿಗೆ ಮುಸ್ಲಿಮರು ನೀಡಿದ ಕೊಡುಗೆಗಳು ಯಾರನ್ನು ಆಶ್ಚರ್ಯಚಕಿತಗೊಳಿಸಲಾರವು? ಮುಸ್ಲಿಮರು ವಿಜ್ಞಾನದ ನಾಯಕರಾಗಿದ್ದರು. ಆದರೆ ಆ ನಾಯಕರ ಇಂದಿನ ಅನುಗಾಮಿಗಳು.........**

ವೈಜ್ಞಾನಿಕ ಪ್ರಜ್ಞೆಯುಳ್ಳ ಒಂದು ಸಮುದಾಯವಾಗಿ ಬಾಳಬೇಕಾದವರಾಗಿದ್ದಾರೆ ಮುಸ್ಲಿಮರು. ಲೋಕದ ಎಲ್ಲಿಯೇ ಇರುವ ಮುಸ್ಲಿಂ ವಿಜ್ಞಾನಿಗಳು ಭಿನ್ನತೆಗಳನ್ನೆಲ್ಲಾ ಮರೆತು ವಿಜ್ಞಾನ ರಂಗದಲ್ಲಿ ಸಹಕಾರ ಮನೋಭಾವದಿಂದ ಒಟ್ಟಿಗೆ ಮುನ್ನಡೆಯಲು ಶ್ರಮಿಸಬೇಕಾದುದು ಅನಿವಾರ್ಯ. ವೈಜ್ಞಾನಿಕ ಸಂಶೋಧನ ಕ್ಷೇತ್ರದಲ್ಲಿ ಹೆಚ್ಚೆಚ್ಚು ಆಸಕ್ತಿ ತೋರಿಸಲು ಮುಸ್ಲಿಂ ಯುವಕರೂ ವಿಜ್ಞಾನ ವಿದ್ಯಾರ್ಥಿಗಳಿಗೆ ಸಕಲ ಪ್ರೋತ್ಸಾಹಗಳನ್ನು ನೀಡಲಿಕ್ಕೆ ಸಮುದಾಯ ನಾಯಕರೂ ಸನ್ನದ್ಧರಾಗಬೇಕಾಗಿದೆ.

ಇಸ್ಲಾಮಿನ ಆವಿರ್ಭಾವ ಕಾಲ ಮೊದಲ್ಗೊಂಡು ಮುಸ್ಲಿಮರು ವಿಜ್ಞಾನ ರಂಗದಲ್ಲಿ ಮಹತ್ತಾದ ಕೊಡುಗೆಗಳನ್ನು ಅರ್ಪಿಸಿದ್ದಾರೆ. ಆ ಕಾಲಘಟ್ಟದಲ್ಲಿ ಮುಸ್ಲಿಮರು ವಿಜ್ಞಾನದ ನಾಯಕರಾಗಿದ್ದರು. ಒಬ್ಬ ಪ್ರಸಿದ್ಧ ವೈಜ್ಞಾನಿಕ ಇತಿಹಾಸಗಾರನು ಬರೆದ ಗ್ರಂಥದಲ್ಲಿ ಮುಸ್ಲಿಂ ವಿಜ್ಞಾನಿಗಳು ನೀಡಿದ ಕೊಡುಗೆಗಳನ್ನು ಓದಿ ನಾನು ಚಕಿತಗೊಂಡೆನು. ವಿಜ್ಞಾನ ಕ್ಷೇತ್ರದಲ್ಲಿ ಇಷ್ಟರ ಮಟ್ಟಿಗೆ ಉಚ್ಛ ಸ್ಥಾನದಲ್ಲಿದ್ದವರ ಬೃಹತ್ ತಲೆಮಾರು ವಿಜ್ಞಾನವನ್ನು ಇಷ್ಟರ ಮಟ್ಟಿಗೆ ಅವಗಣಿಸಿದ್ದು ಅತ್ಯಂತ ಖೇದಕರವಾಗಿದೆ. ಐದು ಸಂಪುಟಗಳಲ್ಲಿ ಬರೆಯಲಾದ ಪ್ರಸ್ತುತ ಇತಿಹಾಸ ಗ್ರಂಥದ ಪ್ರತಿಯೊಂದು ಸಂಪುಟದಲ್ಲಿ 50 ವರ್ಷಗಳ ಚಾರಿತ್ರಿಕ ಕಾಲಘಟ್ಟವನ್ನು ವಿಂಗಡಿಸಿ, ಪ್ರತಿಯೊಂದು ಕಾಲಘಟ್ಟದ ಅತಿ ಪ್ರಶಸ್ತ ವೈಜ್ಞಾನಿಕ ನಾಯಕನ ಕುರಿತು ವಿವರಿಸಲಾಗಿದೆ. ಪ್ಲಾಟೋ, ಅರಿಸ್ಟೋಟಲ್, ಆರ್ಕಿಮಿಡೀಸ್, ಗಾಲನ್ ಮೊದಲಾದವರು ಅದರಲ್ಲಿ ಸೇರುತ್ತಾರೆ. ನಂತರ ಕ್ರಿಸ್ತಶಕ 750 ರಿಂದ 1100 ವರೆಗಿನ ಕಾಲಘಟ್ಟವನ್ನು ಏಳು ವಿಭಾಗಗಳನ್ನಾಗಿ ಮಾಡಲಾಗಿದೆ. ಈ ಕಾಲದಲ್ಲಿ ಅನೇಕ ಮುಸ್ಲಿಂ ವಿಜ್ಞಾನಿಗಳ ಹೆಸರುಗಳನ್ನು ಕಾಣಬಹುದು. ಜಾಬಿರ್, ಖ್ವಾರಿಸ್ಮಿ, ರಾಸಿ, ಮಸ್‌ವೂದ್, ಅಲ್‌ಬರೂನಿ, ಇಬ್ನುಸೀನಾ, ಇಬ್ನುಹಿಶಾಂ, ಉಮರ್‌ಖಯ್ಯಾಂ ಮೊದಲಾದವರು ಇದರಲ್ಲಿ ಸೇರುತ್ತಾರೆ. 1350ರ ನಂತರ ವಿಜ್ಞಾನಿಗಳ ಪಟ್ಟಿಯಲ್ಲಿ ಮುಸ್ಲಿಮರ ಹೆಸರೇ ಗೋಚರಿಸುವುದಿಲ್ಲ.

ನಾನು ಪರ್ಯಟನೆ ನಡೆಸಿದ ಮುಸ್ಲಿಂ ರಾಷ್ಟ್ರಗಳಲ್ಲಿ ವಿಜ್ಞಾನಿಗಳು ಬಹಳ ವಿರಳವೆಂಬ ವಿಚಾರ ನನ್ನನ್ನು ಬಹಳ ನೋಯಿಸಿದೆ. ಮೊರೊಕ್ಕೊ, ಟುನಿಷ್ಯಾ, ಲಿಬಿಯಾ ಮೊದಲಾದ ರಾಜ್ಯಗಳಲ್ಲಿ ಉಚ್ಛ ಮಟ್ಟದ ವಿಜ್ಞಾನಿಗಳನ್ನು ಕಾಣಲಿಕ್ಕೆ ಸಾಧ್ಯವಾಗಲಿಲ್ಲ.

ವೈಜ್ಞಾನಿಕ ಸಂಶೋಧನ ಕ್ಷೇತ್ರದಲ್ಲಿ ಒಂದು ಸಮುದಾಯವೆಂಬ ನೆಲೆಯಲ್ಲಿ ಯಹೂದರು ಮುಂಚೂಣಿಯಲ್ಲಿದ್ದಾರೆ. ನೋಬೆಲ್ ಬಹುಮಾನ ಗಳಿಸಿದ ವಿಜ್ಞಾನಿಗಳಲ್ಲಿ ಶೇಕಡಾ 38ರಷ್ಟು ಅವರೇ ಆಗಿದ್ದಾರೆ. ನೋಬೆಲ್ ಪ್ರಶಸ್ತಿ ಪ್ರದಾನ ಮಾಡಿದ ನಂತರ ಒಂದು ಟೆಲಿವಿಶನ್ ಕಾರ್ಯಕ್ರಮದಲ್ಲಿ ನನ್ನೊಡನೆ ಕೇಳಲಾದ ಒಂದು ಪ್ರಶ್ನೆ ಕಳೆದ 80 ವರ್ಷಗಳೆಡೆಯಲ್ಲಿ ಒಬ್ಬನೇ ಒಬ್ಬ ಮುಸ್ಲಿಂ ವಿಜ್ಞಾನಿಗೆ ಈ ಬಹುಮಾನ ಗಳಿಸಲು ಅಸಾಧ್ಯವಾದುದು ಏಕೆಂದಾಗಿತ್ತು. ಯಹೂದಿ ಯುವಜನರಿಗೆ ಕುಟುಂಬದಲ್ಲೂ ವಿದ್ಯಾಲಯದಲ್ಲೂ ನೀಡಲ್ಪಡುವ ಒಂದು ಪಾಠ ವಿಜ್ಞಾನ ರಂಗದಲ್ಲಿ ವ್ಯಕ್ತಿತ್ವ ಸೃಷ್ಟಿಸುವುದಿಲ್ಲವಾದರೆ ಆ ಅಲ್ಪಸಂಖ್ಯಾತ ಸಮುದಾ

---

* ಬೆಂಗಳೂರಿನಲ್ಲಿ ಅಲ್ ಅಮೀನ್ ಶಿಕ್ಷಣ ಸಂಸ್ಥೆ ಜನವರಿ 14ರಂದು ಪ್ರೊ. ಅಬ್ದುಸ್ಸಲಾಮರ ಗೌರವಾರ್ಥ ನೀಡಿದ ಸನ್ಮಾನ ಸಮಾರಂಭದಲ್ಲಿ ಮಾಡಿದ ಭಾಷಣದಿಂದ,

ಯದ ನೆಲೆನಿಲ್ಲುವಿಕೆ ಅಸಾಧ್ಯವಾಗುವುದೆಂದು ನೋಬೆಲ್ ಬಹುಮಾನ ಪಡೆದ ಒಬ್ಬ ಯಹೂದಿ ವಿಜ್ಞಾನಿ ಟೆಲಿವಿಶನ್ ಕಾರ್ಯಕ್ರಮದಲ್ಲಿ ಹೇಳಿದರು. ಒಬ್ಬ ಧನಾಢ್ಯ ಯಹೂದಿ ತನ್ನ ಸಮುದಾಯದ ಅತ್ಯಂತ ದರಿದ್ರನಾದ ವಿಜ್ಞಾನ ವಿದ್ಯಾರ್ಥಿಯನ್ನು ತನ್ನ ಪುತ್ರಿಯ ವರನಾಗಿ ಆರಿಸಿಕೊಂಡು ಅವನ ಸಂಶೋಧನ ಶ್ರಮಗಳಿಗಾಗಿ ತನ್ನ ಧನವನ್ನು ಸಂಪೂರ್ಣ ವ್ಯಯಿಸಲು ಸಿದ್ಧನಾಗುತ್ತಾನೆ. ಮುಸ್ಲಿಮರಿಗೆ ಇದು ಮಾದರಿಯಾಗಬೇಕಾಗಿದೆ.

ಉಲಮಾಗಳು ಪ್ರವಾದಿಗಳ ಪರಂಪರೆಯಲ್ಲಿ ಒಳಗೊಂಡವರೆಂದು ಮುಹಮ್ಮದ್ ಪೈಗಂಬರ್(ಸ) ನುಡಿದಿರುವರು. 'ಇಲ್ಮ್' ಎಂಬ ಪದಕ್ಕೆ ಧಾರ್ಮಿಕ ಜ್ಞಾನ ಎಂದು ಸಾಮಾನ್ಯವಾಗಿ ಅರ್ಥ ಕೊಡಲಾಗುವುದಾದರೂ 'ಸಯನ್ಸ್' ಸಹ ಅದರಲ್ಲಿ ಸೇರುತ್ತದೆ. ಸಯನ್ಸ್‌ಗೆ 'ಇಲ್ಮ್' ಎಂದಲ್ಲದೆ ಅರಬಿ ಭಾಷೆಯಲ್ಲಿ ಬೇರೆ ಪದವಿಲ್ಲವೆಂದು ಅಲ್‌ಫತ್ತನ್ ಯುನಿವರ್ಸಿಟಿಯ ರೆಕ್ಟರ್ ಪ್ರೊಫೆಸರ್ ಅಲ್‌ಮುನ್ತಸರ್ ನನ್ನೊಡನೆ ಒಮ್ಮೆ ಹೇಳಿದ್ದರು. ಒಟ್ಟಿನಲ್ಲಿ ವಿಜ್ಞಾನವನ್ನು ವೃದ್ಧಿಗೊಳಿಸುವ ಪರಿಶ್ರಮ ಮೂಲಕ ಮುಸ್ಲಿಮರು ಪ್ರವಾದಿಗಳ ವಾರಸುದಾರರಾಗಬೇಕೆಂಬುದಾಗಿದೆ ನನ್ನ ವಿಜ್ಞಾಪನೆ.

“ಪರಮ ಕಾರುಣಿಕನ ಸೃಷ್ಟಿಯಲ್ಲಿ ನೀನು ಯಾವ ಕ್ರಮಭಂಗವನ್ನೂ ಕಾಣಲಿಕ್ಕಿಲ್ಲ. ಪದೇ ಪದೇ ನಿನ್ನ ದೃಷ್ಟಿ ಹರಿಸು. ಮತ್ತೂ ನಿನ್ನ ದೃಷ್ಟಿ ಹರಿಸು. ಆದರೆ ನಿನ್ನ ದೃಷ್ಟಿ ಆಯಾಸಗೊಂಡು ನಿನ್ನ ಕಡೆಗೆಯೇ ಹಿಂತಿರುಗುವುದು.” ನೋಬೆಲ್ ಬಹುಮಾನ ಸ್ವೀಕರಿಸಿದ ಬಳಿಕ ಸ್ವೀಡನ್ ರಾಜ ನೀಡಿದ ಸತ್ಕಾರದಲ್ಲಿ ಭಾಷಣ ಮಾಡಲು ನನ್ನೊಡನೆ ಕೋರಿದಾಗ ನಾನು ಈ ಪವಿತ್ರ ವಚನಗಳನ್ನು ಪಠಿಸಿದೆನು. ಅಲ್ಲಾಹನ ಸೃಷ್ಟಿಯಲ್ಲಿ ಯಾವ ಕ್ರಮಭಂಗವನ್ನಾಗಲಿ ವಿರೋಧಾಭಾಸವನ್ನಾಗಲಿ ಕಾಣಲಸಾಧ್ಯ. ಭದ್ರತೆ ಮತ್ತು ಐಕ್ಯವನ್ನು ಕಾಣಬಹುದು. ನಾನು ಮತ್ತು ನನ್ನ ಸಹಚರರು ಏಕದೇವನಲ್ಲಿ ವಿಶ್ವಾಸವುಳ್ಳವರಾಗಿದ್ದೇವೆ. ಆ ಶಕ್ತಿಯ ಏಕತ್ವವನ್ನು ಕಂಡುಹಿಡಿಯುವುದು ನಮ್ಮ ಸಂಶೋಧನೆಯ ಗುರಿ. ಇದರಲ್ಲಿ ಪರಿಪೂರ್ಣ ವಿಜಯ ಸಿದ್ಧಿಸುವುದೆಂದು ನಮಗೆ ಭರವಸೆಯಿದೆ.

ಪ್ರಪಂಚ ಶಕ್ತಿಗಳ ಸಂಯೋಜನೆಯನ್ನು ಕಂಡುಹಿಡಿಯುವ ಐನ್‌ಸ್ಟೀನರ ಪ್ರಯತ್ನದ ಮುಂದರಿಕೆಯಾಗಿದೆ ನನ್ನ ಮತ್ತು ಸಹಚರರ ಪರಿಶ್ರಮ. ಪ್ರಪಂಚ ರಹಸ್ಯಗಳ ಕುರಿತಾದ ಸಂಶೋಧನೆಗಳಿಗೆ ಒಂದು ಮಿತಿಯನ್ನು ಕಾಣಲಸಾಧ್ಯ. ಪ್ರಕೃತಿ ವಸ್ತುಗಳ ಆಶ್ಚರ್ಯಕರವಾದ ಸಂಯೋಜನೆಯನ್ನು ಕಂಡು ಮನುಷ್ಯನು ದಿಙ್ಮೂಢನಾಗುತ್ತಾನೆ.

ಅಣುಬಾಂಬುಗಳ ನಾಶಕಾರಕ ಶಕ್ತಿಗಳ ಮುಂದೆ ಧಾರ್ಮಿಕಶಕ್ತಿಯಲ್ಲದೆ ಬೇರೆ ಯಾವ ಉಪಾಯವನ್ನಾಗಲಿ ವಿಜ್ಞಾನಿಗಳು ಇಷ್ಟರತನಕ ಕಂಡುಹಿಡಿದಿಲ್ಲ. ಸದ್ಯೋಭವಿಷ್ಯದಲ್ಲಿ ಕಂಡುಹಿಡಿಯಲಾಗುವುದೆಂಬ ಪ್ರತೀಕ್ಷೆಯಾಗಲಿ ಇಲ್ಲ. ಎಲ್ಲಾ ವಿಜ್ಞಾನಿಗಳೂ ಅವರವರ ಹಲವು ವಿಶ್ವಾಸಗಳ ಆಧಾರದಲ್ಲಿ ಎಲ್ಲಾ ಸಂಶೋಧನೆಗಳನ್ನು ನಡೆಸುತ್ತಾರೆ. ಕೆಲವು ವಿಜ್ಞಾನಿಗಳ ಸಂಬಂಧಿಸಿ ಆ ವಿಶ್ವಾಸಗಳು 'ಡೋಗ್ಮ'ಗಳೇ ಆಗಿವೆ. ಮತದ ಮತ್ತು ವಿಜ್ಞಾನದ ಮಂಡಲಗಳು ಸಂಪೂರ್ಣ ವ್ಯತ್ಯಸ್ತಗಳಾಗಿವೆ. ಮತದಲ್ಲಿ ವಿಶ್ವಾಸವಿರಿಸುವುದರಿಂದ ವಿಜ್ಞಾನವನ್ನು ತಿರಸ್ಕರಿಸಬೇಕೆಂದಾಗಲಿ, ಒಂದು ವೈಜ್ಞಾನಿಕ ತತ್ವವನ್ನು ಸ್ವೀಕರಿಸುವುದರಿಂದ ಮತವನ್ನು ತ್ಯಜಿಸಬೇಕೆಂದಾಗಲಿ ಇಲ್ಲ. ಮತವನ್ನು ಹಲವಿಧದಲ್ಲಿ ದುರುಪಯೋಗಪಡಿಸಬಹುದಾಗಿದೆ ದುರುಪಯೋಗಪಡಿಸುತ್ತಲೂ ಇದ್ದಾರೆ. ನನ್ನೊಡನೆ ಇತರರು ಹೇಗೆ ವರ್ತಿಸಬೇಕೆಂದು ನಾನು ಇಚ್ಛಿಸುತ್ತೇನೋ ಅದೇ ಪ್ರಕಾರ ನಾನು ಇತರರೊಡನೆ ವರ್ತಿಸಬೇಕೆಂದು ಮತ ಬೋಧಿಸುತ್ತದೆ. ಈ ಧಾರ್ಮಿಕ ತತ್ವದಲ್ಲಿ ವಿಜ್ಞಾನಕ್ಕೆ ಏನು ವಿರೋಧಿಸಲಿಕ್ಕಿದೆ? ಧಾರ್ಮಿಕ ತತ್ವಗಳು ಸಹ ವೈಜ್ಞಾನಿಕ ತತ್ವಗಳ ಹಾಗೇ ನಿಯಮಗಳೇ ಆಗಿವೆ. ನಾನು ಕೆಲವು ತತ್ವಗಳಲ್ಲಿ ವಿಶ್ವಾಸವುಳ್ಳನಾಗಿದ್ದೇನೆ. ಅದು ಸರಿಯಲ್ಲವೆಂದು ಬೇರೆ ಕೆಲವರಿಗೆ ಅಭಿಪ್ರಾಯವಿರಬಹುದು. ದೇವನ ಕುರಿತು ಹಲವರು ಹಲವಿಧದಲ್ಲಿ ನಂಬುತ್ತಾರೆ. ಐನ್‌ಸ್ಟೀನ್ ದೈವವಿಶ್ವಾಸಿಯಾಗಿದ್ದರು. ಧಾರ್ಮಿಕ ನಿಯಮಗಳನ್ನು ನಿಯಂತ್ರಿಸುವ ಒಂದು ಅಪಾರ ಶಕ್ತಿಯಾಗಿತ್ತು ಐನ್‌ಸ್ಟೀನ್‌ರ ದೃಷ್ಟಿಯಲ್ಲಿ ದೈವ.

(ಪ್ರೊಫೆಸರ್ ಅಬ್ದುಸ್ಸಲಾಂ ಅಹ್ಮದಿಯಾ ವಿಶ್ವಾಸಿಯಾಗಿದ್ದಾರೆ).

—“ಲೀಗ್ ಟೈಂಸ್”,
ಕಲ್ಲಿಕೋಟೆ : 31-1-1981

# ಅಹ್ಮದಿಯಾ ಜಮಾಅತ್ ಮತ್ತು ಜಮಾತೆ ಇಸ್ಲಾಮಿ

★ ಎಂ. ಪಿ. ಇಬ್ರಾಹಿಂ

1980 ಜುಲೈ 11ರ 'ಸನ್ಮಾರ್ಗ' ಪತ್ರಿಕೆಯ ಪ್ರಶ್ನೋತ್ತರ ವಿಭಾಗದಲ್ಲಿ ಪ್ರಕಟವಾದ ಒಂದು ಪ್ರಶ್ನೆ ಮತ್ತು ಅದಕ್ಕೆ ಪತ್ರಿಕೆಯು ನೀಡಿದ ಉತ್ತರವು ಈ ರೀತಿ ಇದೆ:

ಪ್ರಶ್ನೆ : ಜಮಾಅತೆ ಇಸ್ಲಾಮೀ ಹಾಗೂ ಅಹ್ಮದಿಯಾ (ಕಾದಿಯಾನಿ)ಗಳಲ್ಲಿ ಇರುವ ಮುಖ್ಯ ವ್ಯತ್ಯಾಸಗಳಾವುವು ?

ಉತ್ತರ : ಅಹ್ಮದಿಯಾಗಳೆಂದರೆ ಪಂಜಾಬಿನ ಖಾದಿಯಾನ್ ಎಂಬಲ್ಲಿ ತಾನು ನಬಿ (ಪ್ರವಾದಿ) ಎಂದು ವಾದಿಸಿದ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿಯವರ ಅನುಯಾಯಿಗಳು. ಅವರು ಮಿರ್ಝಾರನ್ನು ನಬಿಯೆಂದು ಒಪ್ಪದವರನ್ನು ಮುಸ್ಲಿಮರೆಂದು ಪರಿಗಣಿಸುವುದಿಲ್ಲ. ಪ್ರವಾದಿ ಮುಹಮ್ಮದ್(ಸ) ಅಂತ್ಯ ಪ್ರವಾದಿಯೆಂಬುದು ಜಗತ್ತಿನ ಮುಸಲ್ಮಾನರೆಲ್ಲರ ಒಮ್ಮತದ ವಿಶ್ವಾಸ. ಇದು ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ವಚನಗಳಿಂದ ಸಾಬೀತಾಗಿದೆ. ಆದುದರಿಂದಲೇ ಜಾಗತಿಕ ಮುಸ್ಲಿಂ ಧರ್ಮ ಪಂಡಿತರ ವೇದಿಕೆಯಾದ "ರಾಬಿತತುಲ್ ಆಲಮಿಲ್ ಇಸ್ಲಾಮೀ" (World Muslim League) ಮತ್ತು ಅನೇಕ ಮುಸ್ಲಿಂ ರಾಷ್ಟ್ರಗಳ ಸಂವಿಧಾನ ಅಹ್ಮದಿಯಾಗಳನ್ನು ಮುಸ್ಲಿಮೇತರರೆಂದು ಘೋಷಿಸಿದೆ. ಈ ಬಗ್ಗೆ ಶಿಯಾ ಸುನ್ನಿಗಳಾಗಲಿ, ಹನಫಿ, ಶಾಫಿ, ಹಂಬಲಿ, ಮಾಲಿಕಿಗಳಲ್ಲಾಗಲಿ, ಭಾರತೀಯ ಮುಸ್ಲಿಮರ ಸಂಘಟನೆಗಳಾದ ಜಮೀಅತುಲ್ ಉಲಮಾ, ಜಮಾಅತೆ ಇಸ್ಲಾಮೀ, ತಬ್ಲೀಗಿ ಜಮಾಅತ್ ಮುಂತಾದವುಗಳಲ್ಲಾಗಲೀ ಯಾವುದೇ ಭಿನ್ನಾಭಿಪ್ರಾಯವಿಲ್ಲ.

'ಸನ್ಮಾರ್ಗ' ಪತ್ರಿಕೆಯಲ್ಲಿ ಪ್ರಕಟವಾದ ಮೇಲಿನ ಪ್ರಶ್ನೋತ್ತರದ ಕುರಿತು ಏನನ್ನಾದರೂ ಹೇಳುವ ಮೊದಲು ಒಂದು ಪ್ರಧಾನ ವಿಷಯವನ್ನು ವಾಚಕರ ಅವಗಾಹನೆಗೆ ತರುವುದು ಸಂದರ್ಭೋಚಿತವೆಂದು ಭಾವಿಸುತ್ತೇನೆ. 'ಸನ್ಮಾರ್ಗ' ಎಂಬ ಮೌದೂದಿ ಪತ್ರಿಕೆಯು ಆ ಪಂಥದವರ ಇತರ ಭಾಷೆಯ ಪತ್ರಿಕೆಗಳಂತೆಯೇ ಅಹ್ಮದಿಯಾ ಜಮಾಅತಿನ ಮೇಲೆ ಅತಿಯಾದ ವಿದ್ವೇಷವನ್ನು ಹೊಂದಿದೆಯೆಂಬುದು ಆ ಪತ್ರಿಕೆ ಓದುವವರಿಂದ ಗುಪ್ತವಾದ ವಿಚಾರವಲ್ಲ. 'ಸನ್ಮಾರ್ಗ'ವು ಅದರ ಆರಂಭದಿಂದಲೇ ಈ ನೀತಿಯನ್ನು ಅನುಸರಿಸುತ್ತಾ ಬಂದಿದೆ. ಅದರಲ್ಲಿ ನಮಗೇನೂ ಆಕ್ಷೇಪವಿಲ್ಲ. ಅಹ್ಮದಿಯಾ ವಿಶ್ವಾಸ-ಆದರ್ಶಗಳಲ್ಲಿ ಮೌದೂದಿಗಳಿಗೆ ನಂಬಿಕೆಯಿಲ್ಲದ ಕಾರಣ ಅವರ ಅಡಗಿಸಲಾಗದ ಉದ್ವೇಗವು ಅವರನ್ನು ಆ ರೀತಿ ಮಾಡಲು ಪ್ರೇರೇಪಿಸುತ್ತಿರಬಹುದು. ಆದರೆ, ಯಾವ ಅವಸ್ಥೆಯಲ್ಲೂ ಎಂತಹ ಸಂದರ್ಭದಲ್ಲೂ ನ್ಯಾಯವನ್ನು ಕೈಬಿಡಬಾರದೆಂಬ ಪವಿತ್ರ ಖುರ್‌ಆನಿನ ಉಪದೇಶವನ್ನು ಅಹ್ಮದಿಯಾ ಸಂಘಟನೆಗೆದುರಾಗುವ ಸಂದರ್ಭಗಳಲ್ಲಿ ಅವರು ಉಪೇಕ್ಷಿಸಿ ಬಿಡುವುದು ಅತ್ಯಂತ ದುರದೃಷ್ಟಕರ. ಅಹ್ಮದಿಯಾ ಜಮಾಅತ್ ಯಥಾರ್ಥ ಇಸ್ಲಾಂ ಆಗಿದೆ. ಅದರ ಎಲ್ಲಾ ವಿಶ್ವಾಸ, ಅನುಷ್ಠಾನ ಕ್ರಮಗಳೂ ಸತ್ಯಾಧಿಷ್ಠಿತವಾಗಿವೆ. ಸತ್ಯವನ್ನು ಸತ್ಯದಿಂದಲೇ ಎದುರಿಸಲು ಸಾಧ್ಯವಿಲ್ಲ. ಆದುದರಿಂದ ಮೌದೂದಿಗಳು ಈ ರೀತಿಯ ಕಣ್ಣುಮುಚ್ಚಾಲೆ ಆಟ ಆಡುತ್ತಿದ್ದಾರೆ.

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹೇಬರನ್ನೂ ಅಹ್ಮದಿಯಾ ಸಂಘಟನೆಯನ್ನೂ ನೀತಿ ವಿರುದ್ಧವಾಗಿ ಆಕ್ಷೇಪಿಸಿಕೊಂಡು 'ಸನ್ಮಾರ್ಗ'ದಲ್ಲಿ ಇದಕ್ಕೆ ಮೊದಲು ಸಹ ಲೇಖನಗಳು ಪ್ರಕಟವಾಗಿವೆ ನಮ್ಮ ದೃಷ್ಟಿಗೆ ಬಿದ್ದ ಎಲ್ಲಾ ಆಕ್ಷೇಪಗಳಿಗೂ ಸಮಂಜಸವಾದ ಉತ್ತರವನ್ನು ನಾವು "ಯುಗರಶ್ಮಿ"ಯಲ್ಲಿ ಪ್ರಕಟಿಸಿದ್ದೇವೆ. ಆದರೆ ಅತ್ಯಂತ ವಿಸ್ಮಯಕಾರಿ ವಿಷಯವೇನೆಂದರೆ, ಅಹ್ಮದಿಯಾ ಸಂಘಟನೆಗೆದುರಾಗಿ 'ಸನ್ಮಾರ್ಗ'ವು ಬರೆದುದಕ್ಕೆ ನಾವು ನೀಡುವ ಉತ್ತರದ ಕುರಿತಾಗಲಿ ಮೌದೂದಿ ಸಂಘದವರ ಬಗ್ಗೆ

ನಾವು ಪ್ರಕಟಿಸುತ್ತಿರುವ ಲೇಖನಗಳ ಕುರಿತಾಗಲಿ 'ಸನ್ಮಾರ್ಗ' ಪತ್ರಿಕೆಯು ಇದುವರೆಗೂ ಒಂದಕ್ಷರವನ್ನೂ ಉಸಿರಿಲ್ಲ. ಅಹ್ಮದಿಯಾ ಸಂಘಟನೆಯ ವಿಶ್ವಾಸ-ಸಿದ್ಧಾಂತ ಗಳು "ಯುಗರಶ್ಮಿ"ಯಲ್ಲೂ ಇತರ ಅಹ್ಮದಿಯಾ ಪ್ರಕಾ ಶನಗಳಲ್ಲೂ ಪ್ರಕಟವಾಗುತ್ತಿವೆ. 'ಸನ್ಮಾರ್ಗ'ವು ನೇರವೂ ಸರಳವೂ ಆದ ಮಾರ್ಗವನ್ನು ಸ್ವೀಕರಿಸಿ ಸಾಧ್ಯವಾದರೆ ಅಹ್ಮದಿಯಾ ವಿಶ್ವಾಸಗಳಿಗೆ ಖಂಡನಗಳನ್ನು ಬರೆದು ಪ್ರಕಟಿಸಬಹುದಿತ್ತು. ಅಥವಾ ಮೌದೂದಿ ಸಿದ್ಧಾಂತ ಗಳ ನಿರರ್ಥಕತೆಯ ಕುರಿತು ನಾವು ಪ್ರಕಟಿಸುತ್ತಿರುವ ಲೇಖನಗಳಿಗೆ ಸರಿಯಾದ ಉತ್ತರವನ್ನು ಅವರು ಬರೆಯ ಬಹುದಾಗಿತ್ತು. ಆ ರೀತಿ ಅವರು ಮಾಡಿದ್ದರೆ, ಯಾರ ಭಾಗದಲ್ಲಿ ಸತ್ಯವಿದೆಯೆಂದೂ ಯಾವ ಪಂಗಡದವರ ವಿಶ್ವಾಸವು ಯಥಾರ್ಥ ಇಸ್ಲಾಮಿಕ ವಿಶ್ವಾಸವಾಗಿದೆ ಯೆಂದೂ ಓದುಗರಿಗೆ ಗ್ರಹಿಸಿಕೊಳ್ಳಲು ಸಾಧ್ಯವಾಗು ತ್ತಿತ್ತು. ಹಾಗೇನನ್ನೂ ಮಾಡದೆ, ನಮ್ಮ ಲೇಖನಗಳಿಗೆ ನೇರವಾದ ಉತ್ತರವನ್ನೂ ನೀಡದೆ ಆಗೊಂದು ಈಗೊಂದು "ಸಂಗ್ರಹ"ಗಳನ್ನು ಪ್ರಕಟಿಸುತ್ತಲೂ ಪ್ರಶ್ನೋತ್ತರ ರೂಪದಲ್ಲೂ ಅಹ್ಮದಿಯಾ ಸಂಘಟನೆ ಯನ್ನು ಮರೆಯಲ್ಲಿ ನಿಂತು ಆಕ್ಷೇಪಿಸುವ ನೀತಿಯನ್ನು ಇವರು ಕೈಗೊಂಡಿರುವುದರ ಉದ್ದೇಶವೇನೆಂದು ನಮಗೆ ಅರ್ಥವಾಗುವುದಿಲ್ಲ.

"ಜಮಾತೆ ಇಸ್ಲಾಮಿ" ಯವರಿಗೂ ನಮಗೂ ವಿಶ್ವಾಸ ಕಾರ್ಯದಲ್ಲಿ ಹಲವಾರು ವ್ಯತ್ಯಾಸಗಳಿವೆ. ಉದಾಹರಣೆಗಾಗಿ 2000 ವರ್ಷಗಳ ಹಿಂದೆ ಬನೀ ಇಸ್ರಾಯೀಲ್ ಗೋತ್ರದವರಿಗೆ ಪ್ರವಾದಿಯಾಗಿ ನಿಯೋ ಗಿಸಲ್ಪಟ್ಟ ಹಝ್ರತ್ ಈಸಾ(ಅ)ರವರು ಮರಣವಾಗದೆ ಆಕಾಶಕ್ಕೇರಿರುವರೆಂದೂ ಇಂದಿಗೂ ಅವರು ಆಕಾಶ ದಲ್ಲೇ ಜೀವಿಸುತ್ತಿರುವರೆಂದೂ ಕೊನೆಯ ಕಾಲಕ್ಕೆ(?) ಭೂಮಿಗೆ ಇಳಿದು ಬರುವರೆಂದೂ ಮೌದೂದಿಗಳು ನಂಬುತ್ತಾರೆ. ಹಾಗಿದ್ದರೂ ಹಝ್ರತ್ ಮುಹಮ್ಮದ್ ಪೈಗಂಬರರು ಅಂತ್ಯ ಪ್ರವಾದಿಯೆಂದೂ ಅವರ ನಂತರ ಯಾವುದೇ ತರದ ಯಾರೊಬ್ಬ ಪ್ರವಾದಿಯೂ ಬರಲಾರ ರೆಂದೂ ಸಹ ಅವರು ನಂಬುತ್ತಾರೆ. ಪರಸ್ಪರ ವಿರುದ್ಧ ವಾಗಿರುವ ಮೇಲೆ ಹೇಳಿದ ಎರಡು ವಿಶ್ವಾಸಗಳೂ ಮೌದೂದಿಗಳ ಅಂಗೀಕೃತ ವಿಶ್ವಾಸಗಳಾಗಿವೆ ಎಂಬುದ ರಲ್ಲಿ ತರ್ಕವಿಲ್ಲ. ಇದಕ್ಕೆದುರಾಗಿ ಅಹ್ಮದಿಯಾ ಸಂಘ ಟನೆಯ ವಿಶ್ವಾಸವೇನೆಂದರೆ, ಈ ಪ್ರಪಂಚದಲ್ಲಿ ಅವತೀ ರ್ಣರಾದ ಸರ್ವ ಪ್ರವಾದಿಗಳೂ ಅವರವರ ಕರ್ತವ್ಯ ಗಳನ್ನು ನಿರ್ವಹಿಸಿ ಸ್ವರ್ಗಸ್ಥರಾಗಿರುವಂತೆಯೇ ಹಝ್ರತ್ ಈಸಾ (ಯೇಸು ಕ್ರಿಸ್ತರು) ಸಹ ತನಗೆ ಅಲ್ಲಾಹು ನಿರ್ಣ ಯಿಸಿದ ಕರ್ತವ್ಯ ನಿರ್ವಹಣೆಯ ನಂತರ ಈ ಲೋಕ ವನ್ನು ತ್ಯಜಿಸಿ ಅಲ್ಲಾಹನ ಸನ್ನಿಧಿಗೆ ತೆರಳಿರುವರೆಂದೂ ಇನ್ನು ಎಂದೆಂದಿಗೂ ಅವರು ಈ ಲೋಕಕ್ಕೆ ಹಿಂದಿರುಗ ಲಾರರೆಂದೂ ಆಗಿದೆ. ಮುಹಮ್ಮದ್ ಪೈಗಂಬರರ ಅನು ಯಾಯಿಗಳು ಅಧಃಪತನ ಹೊಂದುವಾಗ ನಿಯುಕ್ತರಾಗ ಬೇಕಾದ "ವಾಗ್ದತ್ತ ಮಸೀಹಾ" ಅಥವಾ "ಇಮಾಂ ಮಹದಿ" ಇದೇ ಸಮುದಾಯದಿಂದ ನಿಯುಕ್ತರಾಗ ಬೇಕೆಂದೂ ಅವರು ಪವಿತ್ರ ಇಸ್ಲಾಂ ಧರ್ಮವನ್ನೇ ಪುನ ರುಜ್ಜೀವನಗೊಳಿಸಲು ಅಲ್ಲಾಹನಿಂದ ನಿಯುಕ್ತರಾಗುವ ಮುಹಮ್ಮದ್ ಪೈಗಂಬರರ ಶಿಷ್ಯ ಪ್ರವಾದಿಯೆಂದೂ ಅಹ್ಮದೀಯರಾದ ನಾವು ನಂಬುತ್ತೇವೆ. ಇದೇ ಭವಿಷ್ಯ ವಾಣಿಯ ಪೂರ್ತೀಕರಣವೆಂಬಂತೆ ಹಝ್ರತ್ ಅಹ್ಮದ್ (ಅ)ರವರನ್ನು ಅಲ್ಲಾಹು ಪ್ರವಾದಿಯಾಗಿ ನಿಯೋಗಿಸಿರು ವನು ಎಂದೂ ಈ ರೀತಿಯ ಶಿಷ್ಯ ಪ್ರವಾಧಿಯ ಆಗಮ ನವು ಮುಹಮ್ಮದ್ ಪೈಗಂಬರರ "ಖಾತಮುನ್ನಬಿ ಯ್ಯೀನ್" ಎಂಬ ಪದವಿಗೆ ವಿರುದ್ಧವಲ್ಲವೆಂದೂ ನಾವು ನಂಬುತ್ತೇವೆ. ಅಹ್ಮದೀಯರಿಗೂ ಮೌದೂದಿಗಳಿಗೂ ತಮ್ಮೊಳಗಿರುವ ಮರ್ಮಪ್ರಧಾನವಾದ ಅಭಿಪ್ರಾಯ ವ್ಯತ್ಯಾಸಗಳು ಇವೆಂಬುದನ್ನು 'ಸನ್ಮಾರ್ಗ' ನಿರಾಕರಿಸ ಲಾರದು. ಮೇಲಿನ ವಿವರಣೆಯಲ್ಲಿ ಅಡಕವಾಗಿರುವ ಮೂರು ಪ್ರಾಮುಖ್ಯ ವ್ಯತ್ಯಾಸಗಳನ್ನು ಈ ರೀತಿ ಸಂಗ್ರ ಹಿಸಬಹುದು :

ಒಂದನೆಯದಾಗಿ, ಹಝ್ರತ್ ಈಸಾ(ಅ)ರವರ ಜೀವಿತ ಮತ್ತು ಮರಣದ ಕುರಿತಿರುವ ವಿಶ್ವಾಸ. ಈಸಾ ನಬಿಯವರು ಇಂದಿಗೂ ಮರಣವಾಗದೆ ಆಕಾಶದಲ್ಲಿ ಜೀವಿಸುತ್ತಿರುವರೆಂಬುದು ಮೌದೂದಿಗಳ ವಿಶ್ವಾಸ ವಾದರೆ, ಅವರು ಇತರ ಎಲ್ಲಾ ಪ್ರವಾದಿಗಳಂತೆ ಗತಿಸಿ ರುವರೆಂದೂ ಇನ್ನು ಎಂದಿಗೂ ಈ ಲೋಕಕ್ಕೆ ಮರಳಿ ಬರಲಾರರೆಂಬುದೂ ಅಹ್ಮದೀಯರ ವಿಶ್ವಾಸ.

ಎರಡನೆಯದಾಗಿ, ಮುಹಮ್ಮದ್ ಪೈಗಂಬರರ ನಂತರ ಪ್ರವಾದಿಗಳು ಬರುವರೋ ಇಲ್ಲವೋ ಎಂಬುದರ ಕುರಿತಾದ ವಿಶ್ವಾಸ ವ್ಯತ್ಯಾಸ. ಮುಹಮ್ಮದ್(ಸ) ಎಲ್ಲಾ

ಅರ್ಥದಲ್ಲೂ ಅಂತ್ಯ ಪ್ರವಾದಿಯಾಗಿದ್ದು ಅವರ ನಂತರ ಯಾರೂ ಪ್ರವಾದಿಯಾಗಿ ಬರಲಾರರೆಂದು ಮೌದೂದಿಗಳು ಸಿದ್ಧಾಂತಿಸುವಾಗ, ಹಝ್ರತ್ ಮುಹಮ್ಮದ್ ಪೈಗಂಬರರಿಂದ ಸ್ಥಾಪಿತವಾದ ಶರೀಅತ್ (ಧರ್ಮಶಾಸ್ತ್ರವು) ಲೋಕಾಂತ್ಯದ ವರೆಗೂ ಪ್ರಾಯೋಗಿಕವಾಗಿಯೇ ಉಳಿಯುವುದಾದರೂ ಆ ಪವಿತ್ರ ಧರ್ಮತತ್ವಗಳನ್ನು ಜನರು ಅಲಕ್ಷಿಸಿ ಮಾರ್ಗಭ್ರಷ್ಟರಾದಾಗ ಅದೇ ಶರೀಅತ್ ನಿಯಮಗಳ ಕಡೆಗೆ ಜನರನ್ನು ಆಹ್ವಾನಿಸುವ ಶಿಷ್ಯ ಪ್ರವಾದಿಗಳ ಆಗಮನವು ಖುರ್‌ಆನಿನ ಪ್ರಬೋಧನೆಗೆ ವಿರುದ್ಧವಲ್ಲವೆಂಬುದು ಅಹ್ಮದೀಯರ ವಿಶ್ವಾಸವಾಗಿದೆ.

ಮೂರನೆಯ ಅಭಿಪ್ರಾಯ ವ್ಯತ್ಯಾಸವು ಹಝ್ರತ್ ಅಹ್ಮದ್(ಅ)ರವರ ಸತ್ಯತೆಯ ಕುರಿತಾಗಿದೆ. ಆ ಪುಣ್ಯಾತ್ಮರು ಇಸ್ಲಾಂ ಧರ್ಮದ ಪುನರುತ್ಥಾನಕ್ಕಾಗಿ ನಿಯೋಗಿಸಲ್ಪಟ್ಟ ಇಮಾಂ ಮಹ್‌ದಿ ಹಾಗೂ ವಾಗ್ದತ್ತ ಮಸೀಹ್ ಆಗಿರುವರೆಂದೂ ಅವರು ಮುಹಮ್ಮದ್(ಸ)ರವರ ಅನುಯಾಯಿಯೂ ಪ್ರವಾದಿಯೂ (ಉಮ್ಮತೀ ನಬಿ) ಆಗಿರುವರೆಂದೂ ಅಹ್ಮದೀಯರು ನಂಬುತ್ತಾರೆ. ಆದರೆ ಹಝ್ರತ್ ಅಹ್ಮದರ ವಾದದ ಸತ್ಯತೆಯನ್ನು ಮೌದೂದಿಗಳು ನಿರಾಕರಿಸುತ್ತಾರೆ.

ಅಹ್ಮದೀಯರಿಗೂ ಜಮಾತೇ ಇಸ್ಲಾಮಿಯವರಿಗೂ ತಮ್ಮೊಳಗಿರುವ ಸರ್ವಪ್ರಧಾನವಾದ ಅಭಿಪ್ರಾಯ ವ್ಯತ್ಯಾಸ ಇವೆಂಬುದು ತರ್ಕಾತೀತವಾಗಿದೆ. ಆದರೆ, ಆ ವ್ಯತ್ಯಾಸಗಳಾವುವು ಎಂದು ಯಾರೋ ಪ್ರಶ್ನೆ ಕೇಳಿದಾಗ, ಅಹ್ಮದೀಯರು ಮಿರ್ಝಾರನ್ನು ನಬಿಯೆಂದು ಒಪ್ಪದವರನ್ನು ಮುಸ್ಲಿಮರಾಗಿ ಪರಿಗಣಿಸುವುದಿಲ್ಲ, ರಾಬಿತತುಲ್ ಆಲಮಿಲ್ ಇಸ್ಲಾಮೀ ಎಂಬ ಸಂಸ್ಥೆಯು ಅಹ್ಮದೀಯರನ್ನು ಕಾಫಿರ್ ಎಂದು ಹೇಳಿದೆ; ಇದೇ ಅವರಿಗೂ ನಮಗೂ ಇರುವ ವ್ಯತ್ಯಾಸ ಎಂದು 'ಸನ್ಮಾರ್ಗ'ವು ಉತ್ತರಿಸಿರುವುದು ಅತ್ಯಾಶ್ಚರ್ಯವೇ ಸರಿ.

ಅಹ್ಮದೀಯರಿಗೂ ಇತರ ಮುಸ್ಲಿಮರಿಗೂ ತಮ್ಮೊಳಗಿರುವ ಪ್ರಧಾನವಾದ ವಿಶ್ವಾಸ ಭಿನ್ನತೆ ನಾನು ಮೇಲೆ ಹೇಳಿದವುಗಳಾಗಿವೆ. ನಾವು 'ಸನ್ಮಾರ್ಗ'ದವರೊಡನೆ ವಿನಯದಿಂದ ವಿಜ್ಞಾಪಿಸಿಕೊಳ್ಳುವುದೇನೆಂದರೆ, ಅವರು ತಮ್ಮ ವಕ್ರನೀತಿಯನ್ನು ತ್ಯಜಿಸಿ ನೇರವಾದ ಮಾರ್ಗದಲ್ಲಿ ಬಂದು ಅಹ್ಮದಿಯಾ ಸಂಘಟನೆಯನ್ನು ಎದುರಿಸಲಿ ಎಂದಾಗಿದೆ.

ಮುಸ್ಲಿಮರೆಡೆಯಲ್ಲಿ ಅಭಿಪ್ರಾಯ ವ್ಯತ್ಯಾಸವುಂಟಾದರೆ ಅದರ ಬಗ್ಗೆ ಪವಿತ್ರ ಖುರ್‌ಆನಿನ ತೀರ್ಮಾನವನ್ನು ಆಧಾರವಾಗಿರಿಸಿಕೊಂಡು ತೀರ್ಪು ನೀಡಬೇಕೆಂಬುದು ಮುಸ್ಲಿಮರೆಂದು ಹೇಳಿಸಿಕೊಳ್ಳುವ ಸರ್ವರೂ ಒಪ್ಪುವ ಒಂದು ವಿಚಾರವಾಗಿದೆ. ಇಸ್ಲಾಂ ಧರ್ಮ ತತ್ವಗಳಲ್ಲಿ ಪ್ರಥಮ ಪ್ರಧಾನವೂ ಅಖಂಡವೂ ಆದ ತೀರ್ಮಾನ ಪವಿತ್ರ ಖುರ್‌ಆನ್ ಆಗಿದೆ. ಒಂದು ವಿಷಯದ ಕುರಿತು ಆ ಪವಿತ್ರ ಗ್ರಂಥವು ಏನು ಹೇಳುತ್ತದೋ ಅದನ್ನು ಅನಿಷೇಧ್ಯ ತೀರ್ಮಾನವಾಗಿ ಅಂಗೀಕರಿಸಬೇಕಾದುದು ಸಮಸ್ತ ಮುಸ್ಲಿಮರ ಕರ್ತವ್ಯವೆಂದು ಆ ಪವಿತ್ರ ಗ್ರಂಥವೇ ನಮಗೆ ತಿಳಿಸಿಕೊಡುತ್ತಿದೆ. ಆದುದರಿಂದ ಮೇಲಿನ ವಿಶ್ವಾಸ ವ್ಯತ್ಯಾಸಗಳಲ್ಲಿ ಯಾವುದು ಸತ್ಯವೆಂದು ತಿಳಿಯಲು ನಾವು ಆ ಮೂಲಭೂತ ವಿಧಿಗ್ರಂಥವಾದ ಪವಿತ್ರ ಖುರ್‌ಆನನ್ನೇ ಅವಲಂಬಿಸಬೇಕಾಗಿದೆ. 'ಸನ್ಮಾರ್ಗ'ದವರಾಗಲಿ ಮೌದೂದಿ ಪಂಥದ ಮತ ಪಂಡಿತರಾಗಲಿ ಪವಿತ್ರ ಖುರ್‌ಆನನ್ನು ಆಧಾರವಾಗಿರಿಸಿಕೊಂಡು ಅಹ್ಮದಿಯಾ ವಿಶ್ವಾಸವನ್ನು ಖಂಡಿಸಲಿ. ಅದರ ಕುರಿತು ಒಂದು ಧಾರಾವಾಹಿಯನ್ನೇ 'ಸನ್ಮಾರ್ಗ' ಪತ್ರಿಕೆಯು ತೊಡಗಲಿ. ಹಝ್ರತ್ ಈಸಾ ಪ್ರವಾದಿ(ಅ)ಯವರು ಮೃತರಾಗದೆ ಈಗಲೂ ಆಕಾಶದಲ್ಲಿ ಜೀವಂತರಾಗಿದ್ದಾರೆಂದೂ ಕೊನೆಯ ಕಾಲಕ್ಕೆ ಅವರೇ ಆಗಸದಿಂದ ಇಳಿದು ಬರುವರೆಂದೂ ಪವಿತ್ರ ಖುರ್‌ಆನಿನಿಂದ ಪ್ರಮಾಣಗಳನ್ನು ಉದ್ಧರಿಸಿ ಮೌದೂದಿಗಳು ರುಜುವಾತು ಪಡಿಸಲಿ. ಮುಹಮ್ಮದ್ ಪೈಗಂಬರರ ನಂತರ ಪ್ರವಾದಿಗಳನ್ನು ಕಳುಹಿಸುವುದು ನಿಲ್ಲಿಸಲ್ಪಟ್ಟಿದೆಯೆಂದೂ ಜನರು ಎಷ್ಟೆಷ್ಟು ಅಧಃಪತನ ಹೊಂದಿದರೂ ಯಾರೇ ಪ್ರವಾದಿಯೂ ಮುಸ್ಲಿಮರೆಡೆಯಲ್ಲಿ ನಿಯುಕ್ತರಾಗಲಾರರೆಂದೂ 'ಸನ್ಮಾರ್ಗ' ಪತ್ರಿಕೆಯು ಖುರ್‌ಆನಿನಿಂದ ಸಾಬೀತು ಪಡಿಸಲಿ. ಅಂತೆಯೇ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ(ಅ)ರವರು ಧರ್ಮದಲ್ಲಿ ಬಂದು ಸೇರಿರುವ ಅನಾಚಾರಗಳನ್ನು ನೀಗಿಸಲು ಅಲ್ಲಾಹನಿಂದ ನಿಯುಕ್ತರಾದ "ಇಮಾಂ ಮಹದಿ" ಹಾಗೂ ವಾಗ್ದತ್ತ ಮಸೀಹ್ ಆಗಿದ್ದಾರೆಂದೂ ಅವರು ಒಬ್ಬ ಪ್ರವಾದಿಯಾಗಿರುವರೆಂದೂ ನಾವು ನಂಬುತ್ತೇವೆ. 'ಸನ್ಮಾರ್ಗ'ವು ಈ ವಿಶ್ವಾಸವನ್ನು ಖಂಡಿಸಿ ಲೇಖನಗಳನ್ನು ಬರೆಯಲಿ. ಇದು ಸುಗಮವಾದ ಮಾರ್ಗವೆಂದು ನಾವು ಆತ್ಮಾರ್ಥವಾಗಿ ನಂಬುತ್ತೇವೆ. ಕಣ್ಣು ಮುಚ್ಚಾಲೆಯಿಂದ ಪ್ರಯೋಜನವಿಲ್ಲ.

ಎಲ್ಲಾದರೂ ಕೆಲವು ಓದುಗರನ್ನು ವಂಚಿಸಲು 'ಸನ್ಮಾರ್ಗ' ಪತ್ರಿಕೆಗೆ ಸಾಧ್ಯವಾದೀತಾದರೂ ಶಾಶ್ವತವಾಗಿ ಅದೇ ವಂಚನೆಯ ಬಲೆಯಲ್ಲಿ ಸಿಲುಕಿ ಬೀಳಲು ಜನರು ಅಷ್ಟೊಂದು ವಿಚಾರಹೀನರೆಂದು 'ಸನ್ಮಾರ್ಗ'ವು ತಿಳಿಯುವುದು ಬೇಡ.

ಇನ್ನು 'ಸನ್ಮಾರ್ಗ'ದಲ್ಲಿ ಪ್ರಕಟವಾದ ಪ್ರಶ್ನೋತ್ತರದ ಕುರಿತು ನೋಡುವ. "ಅಹ್ಮದಿಯಾಗಳೆಂದರೆ ... ಅವರು ಮಿರ್ಝಾರನ್ನು ನಬಿ (ಪ್ರವಾದಿ) ಯೆಂದು ಒಪ್ಪದವರನ್ನು ಮುಸ್ಲಿಮರೆಂದು ಪರಿಗಣಿಸುವುದಿಲ್ಲ" ಎಂದು 'ಸನ್ಮಾರ್ಗ'ವು ಹೇಳುತ್ತದೆ. ಎಂತಹ ಕಠೋರವಾದ ಅನ್ಯಾಯ! ಅಹ್ಮದೀಯರಾದ ನಾವು ಯಾವ ಮುಸ್ಲಿಂ ವಿಭಾಗದವರನ್ನೂ ಮುಸ್ಲಿಮರಲ್ಲವೆಂದು ಹೇಳುವುದಿಲ್ಲ. ಈ ವಿಚಾರ ಮೌದೂದಿಗಳಿಗೆ ತಿಳಿಯದೆಯಿಲ್ಲ. ಮೊದಲೊಮ್ಮೆ "ಮಿರ್ಝಾರ ಮುಸ್ಲಿಂ ದ್ವೇಷ" ಎಂಬ ಶೀರ್ಷಿಕೆಯಲ್ಲಿ 'ಸನ್ಮಾರ್ಗ'ವು ಕೆಲವು ಉದ್ಧರಣೆಗಳನ್ನು ಪ್ರಕಟಿಸಿತ್ತು. ಅದಕ್ಕೆ "ಯುಗರಶ್ಮಿ"ಯ ಮೂಲಕ ನಾವು ನೀಡಿದ ಉತ್ತರದಲ್ಲಿ ಈ ವಿಷಯವನ್ನು ವಿಸ್ತಾರವಾಗಿ ವಿವರಿಸಿದ್ದೇವೆ. ಮೊದಲಾಗಿ ನಾವು ಮುಸ್ಲಿಂ ವಿಭಾಗದವರಲ್ಲಿ ಯಾರನ್ನೂ ಮುಸ್ಲಿಮರಲ್ಲವೆಂಬುದಾಗಿ ಹೇಳಿಲ್ಲವೆಂದೂ ಆದರೆ ನಮ್ಮನ್ನು ಇತರರು "ಕಾಫಿರ್" ಎಂದು ವಿಧಿಸಿರುವುದರಿಂದ "ಒಬ್ಬ ಮುಸ್ಲಿಮನನ್ನು ಕಾಫಿರ್ ಎಂದು ಹೇಳುವವನು ಸ್ವಯಂ ಕಾಫಿರನಾಗುತ್ತಾನೆ" ಎಂಬ ಪವಿತ್ರ ಪ್ರವಾದಿಯವರ ವಚನದ ಪ್ರಕಾರ ಅವರ ವಿಧಿಗೆ ಅವರೇ ಸ್ವಯಂ ಬಲಿಯಾದರೆಂದೂ ಆ ಲೇಖನದಲ್ಲಿ ನಾನು ವಿವರಿಸಿದ್ದೆ.

ಮಾತ್ರವಲ್ಲ, ಅಂದಿನ ಲೇಖನದಲ್ಲಿ ಹಝ್ರತ್ ಮಿರ್ಝಾ ಸಾಹೇಬರ ಒಂದು ಆಹ್ವಾನವನ್ನು ಸಹ ಪ್ರಕಟಿಸಿದ್ದೇವೆ. ಅದನ್ನು ಪುನಃ ಇಲ್ಲಿ ಆವರ್ತಿಸುವುದು ಅನುಚಿತವಲ್ಲವೆಂದು ಭಾವಿಸುತ್ತೇನೆ. ಹಝ್ರತ್ ಮಿರ್ಝಾ ಸಾಹೇಬರು ತನ್ನ "ಹಕೀಕತುಲ್ ವಹ್ಯ್" ಎಂಬ ಗ್ರಂಥದಲ್ಲಿ ಈ ರೀತಿ ಬರೆದಿದ್ದಾರೆ: "ಮೊದಲು ನಾವು ಅವರನ್ನು ಕಾಫಿರ್ ಎಂದು ಹೇಳಿದುದಾಗಿ ರುಜುಪಡಿಸಲು ಯಾವ ಮೌಲವಿಗಾಗಲಿ, ನಮ್ಮ ಯಾವ ವಿರೋಧಿಗಳಾಗಲಿ, ಯಾವ ಶೈಖ್‌ಗಾಗಲಿ ಸಾಧ್ಯವಿದೆಯೇ ? ಅವರು 'ಕುಫ್ರ್ ಫತ್ವಾ'ಗಳನ್ನು ಹೊರಡಿಸುವ ಮೊದಲು ನಾವು ನಮ್ಮ ವಿರೋಧಿಗಳಾದ ಮುಸ್ಲಿಮರನ್ನು ಕಾಫಿರ್ ಎಂದು ಹೇಳಿದುದಾಗಿ ಸಾಬೀತುಪಡಿಸುವ ಏನಾದರೂ ಕಾಗದ ಪತ್ರವಾಗಲಿ, ಕಿರುಕೃತಿಯೋ ವಿಜ್ಞಾಪನೆಯೋ ಆಗಲಿ ನಮ್ಮ ಕಡೆಯಿಂದ ಪ್ರಕಟವಾಗಿದ್ದರೆ, ಅದನ್ನು ಅವರು ತೋರಿಸಲಿ! ಅಲ್ಲದಿದ್ದರೆ, ಅವರು ಆಲೋಚಿಸಬೇಕಾಗಿದೆ; ಮೊದಲು ಅವರೇ ನಮ್ಮನ್ನು 'ಕಾಫಿರ್' ಎಂದು ಹೇಳಿ, ನಾವು ಎಲ್ಲಾ ಮುಸ್ಲಿಮರನ್ನು ಕಾಫಿರ್ ಎಂದು ಹೇಳಿದುದಾಗಿ ನಮ್ಮನ್ನು ಆಕ್ಷೇಪಿಸುವುದು ಎಂತಹ ಘೋರ ವಂಚನೆಯಾಗಿದೆ ಎಂದು." (ಹಕೀಕತುಲ್ ವಹ್ಯ್, ಪುಟ–120).

ಅಹ್ಮದೀಯರನ್ನು ಇತರ ಎಲ್ಲರೂ ಸೇರಿ, ಕಾಫಿರ್ ಎಂಬುದಾಗಿ ವಿಧಿಸಿರುವರೆಂಬ ಸತ್ಯವನ್ನು 'ಸನ್ಮಾರ್ಗ'ವು ಅದೇ ಪ್ರಶ್ನೋತ್ತರದಲ್ಲಿ ತಿಳಿದೋ ತಿಳಿಯದೆಯೋ ಪ್ರಕಟಿಸಿದೆ. "ಆದುದರಿಂದಲೇ ಜಾಗತಿಕ ಮುಸ್ಲಿಂ ಧರ್ಮ ಪಂಡಿತರ ವೇದಿಕೆಯಾದ ರಾಬಿತತುಲ್ ಆಲಮಿಲ್ ಇಸ್ಲಾಮಿ ಮತ್ತು ಅನೇಕ ಮುಸ್ಲಿಂ ರಾಷ್ಟ್ರಗಳ ಸಂವಿಧಾನ ಅಹ್ಮದಿಯಾಗಳನ್ನು ಮುಸ್ಲಿಮೇತರರೆಂದು ಘೋಷಿಸಿದೆ. ಈ ಬಗ್ಗೆ ಶಿಯಾ ಸುನ್ನಿಗಳಲ್ಲಾಗಲಿ, ಹನಫಿ, ಶಾಫಿ, ಹಂಬಲಿ, ಮಾಲಿಕಿಗಳಲ್ಲಾಗಲಿ, ಭಾರತೀಯ ಮುಸ್ಲಿಮರ ಸಂಘಟನೆಗಳಾದ ಜಮಾಅತುಲ್ ಉಲಮಾ, ಜಮಾಅತೆ ಇಸ್ಲಾಮಿ, ತಬ್ಲೀಗಿ ಜಮಾಅತ್ ಮುಂತಾದವುಗಳಲ್ಲಾಗಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ." ಎಂದು ಮೌದೂದಿ ಪತ್ರಿಕೆಯೇ ತನ್ನ ಉತ್ತರದಲ್ಲಿ ಹೇಳುತ್ತದೆ. ಯಾರು ಯಾರನ್ನು ಮುಸ್ಲಿಮರಲ್ಲವೆಂದು ಹೇಳಿದರು ಎಂಬುದು ಇದರಿಂದ ಓದುಗರಿಗೆ ವ್ಯಕ್ತವಾಗಬಹುದು. ಸತ್ಯಾಂಶ ಹೀಗಿರುವಾಗ "ಅಹ್ಮದೀಯರು ಮಿರ್ಝಾರನ್ನು ನಬಿಯೆಂದು ಒಪ್ಪದವರನ್ನು ಮುಸ್ಲಿಮರೆಂದು ಪರಿಗಣಿಸುವುದಿಲ್ಲ" ಎಂಬುದಾಗಿ 'ಸನ್ಮಾರ್ಗ'ವು ಅದೇ ಉತ್ತರದಲ್ಲಿ ಬರೆದಿರುವುದು ಯಾರನ್ನು ವಂಚಿಸಲಿಕ್ಕಾಗಿ? ಒಂದೆಡೆ 'ಸನ್ಮಾರ್ಗ' ಹೇಳುವುದು, ಅಹ್ಮದೀಯರು ಇತರರನ್ನು ಮುಸ್ಲಿಮರಾಗಿ ಪರಿಗಣಿಸುವುದಿಲ್ಲವೆಂದು. ಅದೇ ಉಸಿರಲ್ಲಿ 'ಸನ್ಮಾರ್ಗ' ಒಪ್ಪುತ್ತದೆ ಇತರ ಎಲ್ಲರೂ ಸೇರಿ ಅಹ್ಮದೀಯರನ್ನು ಮುಸ್ಲಿಮೇತರರೆಂದು ಘೋಷಿಸಿರುವುದಾಗಿ ಇದೆಂತಹ ತಲೆ ತಿರುಗಿದ ನೀತಿ! 'ಸನ್ಮಾರ್ಗ'ವು ಒಂದೇ ಪುಟದಲ್ಲಿ ಪರಸ್ಪರ ವಿರುದ್ಧವನ್ನು ಪ್ರಕಟಿಸುತ್ತಿದೆ! ರಾಜಕೀಯ ಪಾಲಿಸಿಯಲ್ಲಿ ನೈಪುಣ್ಯತೆ ಪಡೆದ ಮೌದೂದಿಗಳು

ನ್ಯಾಯುವನ್ನು ಕೈಬಿಟ್ಟಿದ್ದಾರೆ, ಸರ್ವಶಕ್ತನೂ ಸಮಸ್ತ ಜಗತ್ಪಾಲಕನೂ ಸೂಕ್ಷ್ಮಜ್ಞನೂ ಆದ ಅಲ್ಲಾಹನಿಗೆ ಅವರು ಭಯಪಡಲಿ. "ಒಂದು ವಿಭಾಗದವರೊಡನೆ ನಿಮಗಿರುವ ದ್ವೇಷವು ಅವರೊಡನೆ ಅನೀತಿಯಿಂದ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ" ಎಂದು ಅಲ್ಲಾಹು ಪವಿತ್ರ ಖುರ್‌ಆನಿನಲ್ಲಿ ಎಚ್ಚರಿಕೆ ನೀಡಿದ್ದಾನೆ.

'ಸನ್ಮಾರ್ಗ' ಈ ರೀತಿ ಹೇಳಿದೆ: "ಪ್ರವಾದಿ ಮುಹಮ್ಮದ್(ಸ) ಅಂತ್ಯ ಪ್ರವಾದಿಯೆಂಬುದು ಖುರ್ ಆನ್ ಮತ್ತು ಪ್ರವಾದಿ ವಚನಗಳಿಂದ ಸಾಬೀತಾಗಿದೆ". ಹಝ್ರತ್ ಮುಹಮ್ಮದ್(ಸ) ಅಂತ್ಯ ಪ್ರವಾದಿಯೆಂಬುದು ಪವಿತ್ರ ಖುರ್‌ಆನಿನಿಂದಲೂ ಪ್ರವಾದಿ ವಚನಗಳಿಂದಲೂ ಸಾಬೀತಾಗಿದೆಯೆಂದು 'ಸನ್ಮಾರ್ಗ'ವು ಹೇಳುವಾಗ ಪವಿತ್ರ ಖುರ್‌ಆನಿನಿಂದ ಆ ರೀತಿ ತಿಳಿದು ಬರುವ ನಾಲ್ಕೋ ಐದೋ ವಚನಗಳನ್ನು ಅದು ಉದಾಹರಿಸಬೇಕಿತ್ತು. ಪವಿತ್ರ ಖುರ್‌ಆನಿನ ಒಂದೇ ಒಂದು ವಚನವನ್ನೂ ತನ್ನ ಹೇಳಿಕೆಗೆ ಪ್ರಮಾಣವಾಗಿ ಉದ್ಧರಿಸದೆ "ಪ್ರವಾದಿ ಮುಹಮ್ಮದ್(ಸ) ಅಂತ್ಯ ಪ್ರವಾದಿಯೆಂಬುದು ಖುರ್‌ಆನಿನಿಂದ ಸಾಬೀತಾಗಿದೆ" ಎಂದು 'ಸನ್ಮಾರ್ಗ'ವು ಬರೇ ಹೇಳುವುದರಲ್ಲಿ ಅರ್ಥವಿಲ್ಲ. ಮಾತ್ರವಲ್ಲ, 'ಸನ್ಮಾರ್ಗ'ವು ಅದರ ಆಯುಷ್ಯದಲ್ಲಿ ಒಮ್ಮೆಯಾದರೂ ಆ ಕುರಿತು ಖುರ್‌ಆನ್ ವಚನಗಳನ್ನು ಉದಾಹರಿಸಿದ್ದಾಗಿ ನಾವು ಕಂಡಿಲ್ಲ. ಮುಹಮ್ಮದ್ ಪೈಗಂಬರ್(ಸ) ಅಂತ್ಯ ಪ್ರವಾದಿಯಾಗಿರುವರೆಂದೂ ಅವರ ನಂತರ ಪ್ರವಾದಿಯಾಗಿ ಯಾರೂ ಬರಲಾರರೆಂದೂ ಪವಿತ್ರ ಖುರ್‌ಆನಿನಲ್ಲಿ ಎಲ್ಲೂ ಹೇಳಿಲ್ಲ. ಬದಲಾಗಿ ಧಾರ್ಮಿಕ ಅಧಃಪತನ ಉಂಟಾಗುವ ಕಾಲದಲ್ಲಿ ಮುಖ್ಯವಾಗಿ ಮುಸ್ಲಿಮರು ಪವಿತ್ರ ಇಸ್ಲಾಂ ಧರ್ಮದ ತತ್ವಗಳಿಂದ ವಿಮುಖರಾಗಿ ಅಧರ್ಮದಲ್ಲಿ ಮುಳುಗುವಾಗ ಅವರನ್ನು ಪುನಃ ಇಸ್ಲಾಂ ಧರ್ಮತತ್ವಗಳೆಡೆಗೆ ಆಹ್ವಾನಿಸಲು ಪ್ರವಾದಿ ನಿಯೋಗವು ಉಂಟಾಗುವುದೆಂದು ಪವಿತ್ರ ಖುರ್‌ಆನಿನಲ್ಲಿ ವ್ಯಕ್ತವಾಗಿ ವಿವರಿಸಿದೆ. ಹೆಚ್ಚೇಕೆ, ಮೌದೂದಿಗಳು ಸ್ವಯಂ ಅವರ ವಿಶ್ವಾಸವನ್ನೇ ಒಮ್ಮೆ ಇಣುಕಿ ನೋಡಿದ್ದರೆ ಸಾಕಾಗಿತ್ತು. ಹಝ್ರತ್ ಈಸಾ ನಬಿ(ಅ) ಆಕಾಶದಿಂದ ಇಳಿದು ಬರುವರೆಂದು ಅವರು ನಂಬುವುದಿಲ್ಲವೇ ? ಈ ಲೋಕಕ್ಕೆ ಹಝ್ರತ್ ಮುಹಮ್ಮದ್(ಸ)ರವರ ನಂತರ ಪ್ರವಾದಿ ಈಸಾ ಬರುವರೆಂದಾದರೆ, ಮುಹಮ್ಮದ್ ಪೈಗಂಬರರು ಅಂತ್ಯ ಪ್ರವಾದಿಯಾಗುವುದು ಹೇಗೆ? ಅಥವಾ ಆಗಾಗ ಪಾಲಿಸಿಯನ್ನೂ ವಿಶ್ವಾಸ ಸಿದ್ಧಾಂತಗಳನ್ನೂ ಬದಲಾಯಿಸುತ್ತಿರುವ ಮೌದೂದಿಗಳು ಈಗ ತಮ್ಮ ವಿಶ್ವಾಸದಲ್ಲಿ ಏನಾದರೂ ಬದಲಾವಣೆ ಮಾಡಿದರೇ? ಹಝ್ರತ್ ಈಸಾ(ಅ) ಇನ್ನು ಬರಲಾರರು ಎಂದು ಅವರು ಈಗ ನಂಬಲು ಶುರು ಮಾಡಿದ್ದಾರೆಯೇ? ಇಲ್ಲವಾದರೆ, ಹಝ್ರತ್ ಈಸಾ ಪ್ರವಾದಿಯವರು ಮುಸ್ಲಿಮರನ್ನು ಉದ್ಧರಿಸಲಿಕ್ಕಾಗಿ ಬರುವರೆಂದು ನಂಬುತ್ತಿರುವ ಅವರು ಮುಹಮ್ಮದ್ ಪೈಗಂಬರರನ್ನು ಅಂತ್ಯ ಪ್ರವಾದಿಯೆಂದು ಹೇಳುವುದು ಅರ್ಥಶೂನ್ಯವೆಂದು ತಿಳಿಯಬೇಕಿತ್ತು. ಇಸ್ಲಾಂ ಧರ್ಮದ ಪುನರುದ್ಧಾರಣೆಗೆ ಒಬ್ಬ ಮಸೀಹರ ಆಗಮನವುಂಟಾಗುವುದೆಂದೂ ಅವರು ಪ್ರವಾದಿಯಾಗಿರುವರೆಂದೂ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಸ್ಪಷ್ಟವಾಗಿ ಭವಿಷ್ಯ ನುಡಿದಿದ್ದಾರೆ. ಆದುದರಿಂದಲೇ ಪ್ರವಾದಿಯಾಗಿರುವ ಒಬ್ಬ ಮಸೀಹರ ಆಗಮನವನ್ನು 1400 ವರ್ಷಗಳಿಂದಲೂ ಮುಸ್ಲಿಂ ಜಗತ್ತು ಪ್ರತೀಕ್ಷಿಸುತ್ತಾ ಇರುವುದು. ತನ್ನ ನಂತರ ಒಬ್ಬ ಪ್ರವಾದಿಯು ಆಗಮನವುಂಟಾಗುವುದೆಂದು ಪೈಗಂಬರರು ಭವಿಷ್ಯ ನುಡಿದಿರುವಾಗ ಇನ್ನು ಯಾವ ಪ್ರವಾದಿಯೂ ಬರಲಾರರೆಂಬುದಾಗಿ ಅದೇ ಪ್ರವಾದಿಯವರು ನುಡಿದಿರಲು ಸಾಧ್ಯವೇ?

ಸಂಕ್ಷಿಪ್ತವಾಗಿ, ಮುಹಮ್ಮದ್ ಪೈಗಂಬರರ ನಂತರ ಇಸ್ಲಾಂ ಧರ್ಮವನ್ನು ಉದ್ಧರಿಸುವ ಪ್ರವಾದಿಗಳು ನಿಯೋಗಿಸಲ್ಪಡುವರೆಂದು ಪವಿತ್ರ ಖುರ್‌ಆನ್‌ನಿಂದಲೂ ಪ್ರವಾದಿ ವಚನಗಳಿಂದಲೂ ಸಾಬೀತಾಗಿದೆ. ಈ ಕುರಿತು ಪವಿತ್ರ ಖುರ್‌ಆನಿನಿಂದ ಹಲವಾರು ವಚನಗಳನ್ನು ಪ್ರಮಾಣವಾಗಿ ಉದ್ಧರಿಸಬಹುದು. ಮುಹಮ್ಮದ್ ಪೈಗಂಬರರ ನಂತರವೂ ಇಸ್ಲಾಂ ಧರ್ಮಶಾಸ್ತ್ರವನ್ನು ಪ್ರಬೋಧಿಸುವ ಪ್ರವಾದಿಗಳು ನಿಯುಕ್ತರಾಗುವರೆಂಬ ಕುರಿತು ಪವಿತ್ರ ಖುರ್‌ಆನಿನ ಸಾಕ್ಷ್ಯಗಳನ್ನು ಒಂದು ಪ್ರತ್ಯೇಕ ಲೇಖನದಲ್ಲಿ ವಿವರಿಸಲು ಬಯಸುವುದರಿಂದ ಆ ಬಗ್ಗೆ ಖುರ್‌ಆನ್ ಮತ್ತು ಹದೀಸ್‌ಗಳ ಪ್ರಮಾಣಗಳನ್ನು ಇಲ್ಲಿ ಉದ್ಧರಿಸುವುದಿಲ್ಲ. ಇನ್‌ಶಾ ಅಲ್ಲಾಹ್ ಆ ಕುರಿತು ಮುಂದಿನ "ಯುಗರಶ್ಮಿ" ಸಂಚಿಕೆಗಳಲ್ಲಿ ವಿವರಿಸುವೆನು. ಆದರೆ "ಮುಹಮ್ಮದ್(ಸ) ಅಂತ್ಯ ಪ್ರವಾದಿಯೆಂದು ಪವಿತ್ರ ಖುರ್‌ಆನಿನಿಂದಲೂ ಪ್ರವಾದಿ ವಚನ

ಗಳಿಂದಲೂ ಸಾಬೀತಾಗಿದೆ” ಎಂದು ‘ಸನ್ಮಾರ್ಗ’ವು ಹೇಳಿರುವುದರಿಂದ ಆ ಬಗ್ಗೆ ಪ್ರಮಾಣಗಳನ್ನು ಉದ್ಧರಿಸಬೇಕಾದುದು ಅವರ ಧಾರ್ಮಿಕ ಕರ್ತವ್ಯ. ಆದುದರಿಂದ ಇನ್ನು ಮುಂದಕ್ಕೆ ಪ್ರವಾದಿಗಳನ್ನು ಕಳುಹಿಸುವುದು ನಿಲ್ಲಿಸಲ್ಪಟ್ಟಿದೆ ಎಂದು ತಿಳಿಸುವ ಕೆಲವು ಖುರ್‌ಆನ್ ವಚನಗಳನ್ನು ‘ಸನ್ಮಾರ್ಗ’ವು ವಾಚಕರ ಮುಂದೆ ವಿವರಿಸುವುದೆಂದು ಕಾಯೋಣವೇ?

‘ಸನ್ಮಾರ್ಗ’ವು ರಾಬಿತತುಲ್ ಆಲಮಿಲ್ ಇಸ್ಲಾಮಿ ಎಂಬ ಸಂಘವನ್ನು “ಜಾಗತಿಕ ಮುಸ್ಲಿಂ ಧರ್ಮ ಪಂಡಿತರ ವೇದಿಕೆ” ಎಂದು ಹೊಗಳಿದೆ. ಮೌದೂದಿಗಳ ದೃಷ್ಟಿಯಲ್ಲಿ ಅದು ಸರಿಯಿರಬಹುದು. ಕಾರಣ ರಾಬಿತ್ತದ ಸೂತ್ರಧಾರಿಗಳು ಮೌದೂದಿಗಳಾಗಿದ್ದಾರೆ. ಕುಟಿಲ ಕೋವಿದರಾದ ಮೌದೂದಿಗಳು ಅರಬ್ ತೈಲ ಸಂಪತ್ತಿನಿಂದ ಸ್ವಾರ್ಥ ಲಾಭ ಗಳಿಸಲು ಸೌದಿ ಅರೇಬಿಯಾ ಆಡಳಿತದ ನೆರಳಲ್ಲಿ ಒಂದು ಮುಲ್ಲಾ ಸಂಘವನ್ನು ಸ್ಥಾಪಿಸಿ ಅದಕ್ಕೆ Muslim World League ಎಂದು ಹೆಸರಿಟ್ಟಿದ್ದಾರೆಂದು ಮಾತ್ರ. ಅಲ್ಲದೆ ಅದರಿಂದ ಜಾಗತಿಕ ಮುಸ್ಲಿಮರಿಗೆ ಏನೇನೂ ಉಪಕಾರವಾಗಿಲ್ಲವೆಂದೂ ಜಾಗತಿಕ ಮುಸ್ಲಿಂ ಸಮಸ್ಯೆಗಳು ಇನ್ನೂ ಪರಿಹಾರ ಕಾಣದೆ ತೊಳಲುತ್ತಿದೆಯೆಂದೂ ಎಲ್ಲರಿಗೂ ಗೊತ್ತು. ರಾಬಿತ್ತವನ್ನು ಮೌದೂದಿಗಳು ಮಾತ್ರ ಹೊಗಳುತ್ತಾರೆ. ಇತರ ಮುಸ್ಲಿಂ ಸಂಘಗಳು ಅದನ್ನು ತಮ್ಮ ಮೇಲೆ ಧಾರ್ಮಿಕ ನಿಯಂತ್ರಣ ಹೊಂದಬಲ್ಲ ಒಂದು ಜಾಗತಿಕ ಸಂಸ್ಥೆಯಾಗಿ ಒಪ್ಪುವುದಿಲ್ಲ ಎಂಬುದೇ ಅದರ ವರ್ಗೀಯ ಬಣ್ಣವನ್ನು ತಿಳಿಸಿಕೊಡುವಂಥದ್ದಾಗಿದೆ. ರಾಬಿತ್ತವು ಅಹ್ಮದೀಯರನ್ನು ಮುಸ್ಲಿಮೇತರರೆಂದು ಘೋಷಿಸಿರುವುದು ಸತ್ಯ. ಆದರೆ, ರಾಬಿತ್ತವು ಆ ರೀತಿ ಘೋಷಿಸಿದ ಕಾರಣದಿಂದ ಅಹ್ಮದೀಯರು ಮುಸ್ಲಿಮರಲ್ಲವೆಂದು ಮೌದೂದಿಗಳು ತಿಳಿಯುವುದಿದ್ದರೆ ಅದು ಅವರ ತಪ್ಪು. ಅಹ್ಮದಿಯಾ ಮುಸ್ಲಿಮರನ್ನು ಮುಸ್ಲಿಮರಲ್ಲವೆಂದು ಘೋಷಿಸಲು ರಾಬಿತ್ತಗೆ ಯಾರು ಅಧಿಕಾರ ನೀಡಿದರು? ಲೋಕದಲ್ಲಿನ ಮುಸ್ಲಿಮೇತರರಿಗೆ ಇಸ್ಲಾಂ ಧರ್ಮದ ತತ್ವಗಳನ್ನು ವಿವರಿಸಿಕೊಟ್ಟು ಅವರನ್ನು ಮುಸ್ಲಿಮರನ್ನಾಗಿ ಮಾಡಲು ರಾಬಿತ್ತದ ಕೈಯಲ್ಲಿ ಸಾಧ್ಯವಾಗುವುದಿಲ್ಲ. ಇಸ್ಲಾಂ ಧರ್ಮ ಪ್ರಚಾರಕ್ಕಾಗಿ ಶಕ್ತಿಮೀರಿ ಶ್ರಮಿಸುತ್ತಿರುವ, ಒಂದು ಕೋಟಿಗಿಂತಲೂ ಹೆಚ್ಚು ಸಂಖ್ಯೆಯಲ್ಲಿರುವ ಅಹ್ಮದಿಯಾ ಮುಸ್ಲಿಮರನ್ನು ರಾಬಿತ್ತವು ಮುಸ್ಲಿಮರಲ್ಲವೆಂದು ಸಾರುತ್ತದೆ. ಅವರ ಕೈಲಾದ ಕೆಲಸವನ್ನು ಅವರು ಮಾಡಿದರು ಎಂದು ನೆನಸಿ ಸಮಾಧಾನ ಪಡೋಣ.

“ಮತ್ತು ಅನೇಕ ಮುಸ್ಲಿಂ ರಾಷ್ಟ್ರಗಳ ಸಂವಿಧಾನ ಅಹ್ಮದೀಯಾಗಳನ್ನು ಮುಸ್ಲಿಮೇತರರೆಂದು ಘೋಷಿಸಿದೆ” ಎಂದು ಸಹ “ಸನ್ಮಾರ್ಗ” ಹೇಳುತ್ತದೆ. ಯಾವುದು ಈ “ಅನೇಕ ಮುಸ್ಲಿಂ ರಾಷ್ಟ್ರಗಳ ಸಂವಿಧಾನ” ಎಂದು ಅದು ಸ್ಪಷ್ಟಪಡಿಸಿಲ್ಲ. ನಮ್ಮ ನೆರೆ ರಾಷ್ಟ್ರ ಪಾಕಿಸ್ತಾನದಲ್ಲಿ 1974 ರಲ್ಲಿ ಭುಟ್ಟೋ ಸರಕಾರವು ಅಹ್ಮದೀಯರನ್ನು ಮುಸ್ಲಿಮೇತರರು ಎಂದು ಸಂವಿಧಾನ ತಿದ್ದುಪಡಿಯ ಮೂಲಕ ಘೋಷಿಸಿದೆ. ಆದರೆ, ಅದರ ನಂತರ ಪಾಕಿಸ್ತಾನದಲ್ಲಿ ಏನೇನು ಸಂಭವಿಸಿತು ಎಂದು ಮೌದೂದಿಗಳಿಗೆ ತಿಳಿದಿಲ್ಲವೇ? ಭುಟ್ಟೋ ಸರಕಾರ ಅಪ್ಪಳಿಸಲ್ಪಟ್ಟಿತು! ಅತ್ಯಂತ ನಿಕೃಷ್ಟವಾದ ರೂಪದಲ್ಲಿ ಭುಟ್ಟೋ ವಧಿಸಲ್ಪಟ್ಟರು! ಪಾಕಿಸ್ತಾನದಲ್ಲಿ ಲಷ್ಕರಿ ಆಡಳಿತ ಜಾರಿಯಾದೊಡನೆ ಭುಟ್ಟೋ ಸರಕಾರ ತಂದ ಎಲ್ಲಾ ಸಂವಿಧಾನ ತಿದ್ದುಪಡಿಗಳೂ ತಡೆಹಿಡಿಯಲ್ಪಟ್ಟವು! ಸಾಲದ್ದಕ್ಕೆ ಈಗಿನ ವಾರ್ತೆಯ ಪ್ರಕಾರ ಪಾಕಿಸ್ತಾನದ “ಸಂವಿಧಾನ”ವನ್ನೇ ಅಲ್ಲಿನ ಲಷ್ಕರಿ ಆಡಳಿತವು ರದ್ದುಗೊಳಿಸಿದೆ!!

ಅಹ್ಮದೀಯರನ್ನು ಮುಸ್ಲಿಮೇತರರೆಂದು ಯಾವ ಯಾವ ಮುಸ್ಲಿಂ ರಾಷ್ಟ್ರಗಳು ಅಧಿಕಾರ ದರ್ಪದಿಂದ ಘೋಷಿಸಿದೆಯೋ, ಆ ಎಲ್ಲಾ ರಾಷ್ಟ್ರಗಳ ಅವಸ್ಥೆಯೂ ಇದಕ್ಕಿಂತ ಭಿನ್ನವಲ್ಲ. ಆದರೂ ಮೌದೂದಿಗಳು ಇನ್ನೂ ಪಾಠ ಕಲಿತಿಲ್ಲವೆಂದು ತೋರುತ್ತಿದೆ. ಇಲ್ಲವಾದರೂ ಅಹ್ಮದೀಯರನ್ನು ಮುಸ್ಲಿಮರಲ್ಲವೆಂದು ರಾಷ್ಟ್ರ ಸಂವಿಧಾನಗಳು ಯಾಕೆ ಘೋಷಿಸಬೇಕು? ಪ್ರಜೆಗಳನ್ನು ಆಳಬೇಕಾದ ಸರಕಾರಗಳು ಪ್ರಜೆಗಳ ಧರ್ಮತತ್ವಗಳನ್ನು ಆಳಲು ಶುರು ಮಾಡಿದ್ದು ಯಾಕೆ? ಅಹ್ಮದೀಯರು ಮುಸ್ಲಿಮರಲ್ಲವೆಂದು ಮುಸ್ಲಿಂ ಧರ್ಮ ಪಂಡಿತರು ಅಹ್ಮದಿಯಾ ಸಂಘಟನೆಯ ಆರಂಭದಿಂದಲೇ ಫತ್ವಾ (ಧಾರ್ಮಿಕ ವಿಧಿ) ಘೋಷಿಸುತ್ತಾ ಬಂದಿದ್ದಾರೆ. ಮುಸ್ಲಿಂ ಪಂಡಿತರ ಈ ಎಲ್ಲಾ ಫತ್ವಾಗಳೂ ಇರುವಾಗ ಮತ್ತೆ ಈಗ ಸರಕಾರಗಳು ಯಾಕೆ ಆ ರೀತಿ ಘೋಷಿಸಬೇಕು? ಧರ್ಮ ಪಂಡಿತರ ಘೋಷಣೆಗಳಿಂದ ಏನೂ ಪ್ರಯೋಜನವಾಗಿಲ್ಲ, ಅವರ ಘೋಷಣೆಗಳಿಂದ ಅಹ್ಮದೀಯರು ಮುಸ್ಲಿಮೇತರರಾಗಿಲ್ಲ, ಅದುದರಿಂದ ಸರಕಾರಗಳು ಬಲ

ಪ್ರಯೋಗಿಸಿ ಅವರನ್ನು ಮುಸ್ಲಿಮರಲ್ಲದ ಹಾಗೆ ಮಾಡಬೇಕೆಂದು ಇವರು ತೀರ್ಮಾನಿಸಿದರೇ? ಒಂದು ರಾಷ್ಟ್ರದ ಸಂವಿಧಾನವು ಒಬ್ಬನನ್ನು ಮುಸ್ಲಿಮನಲ್ಲ ಎಂದು ಘೋಷಿಸಿದಾಗ ಆ ವ್ಯಕ್ತಿಯು ಅಮುಸ್ಲಿಮನಾಗುವನಾದರೆ, ಅಥವಾ ಒಂದು ಸಂವಿಧಾನದಲ್ಲಿ ಒಬ್ಬನ ಕುರಿತು ಮುಸ್ಲಿಮನೆಂದು ಘೋಷಿಸಿದ ತಕ್ಷಣ ಆ ವ್ಯಕ್ತಿ ಮುಸ್ಲಿಮನಾಗಿ ಬಿಡುವನು ಎಂದಾದರೆ ಮತ್ತೆ ಕಾರ್ಯಗಳೆಲ್ಲವೂ ಬಹಳ ಸುಲಭ, ಪ್ರಪಂಚದಲ್ಲಿರುವ ಸಮಸ್ತ ಜನರನ್ನೂ ಒಂದೇ ಬಾರಿಗೆ ಮುಸ್ಲಿಮರನ್ನಾಗಿ ಮಾಡಬಹುದು. ಯಾವುದಾದರೊಂದು ಮುಸ್ಲಿಂ ರಾಷ್ಟ್ರದ ಸಂವಿಧಾನವು ಆ ರೀತಿ ಘೋಷಿಸಿದರೆ ಸಾಕಲ್ಲವೇ? ಬಾಲಿಶವಾದ ಈ ನೀತಿಯು ಅರ್ಥವಿಲ್ಲದ್ದೆಂದು ಗ್ರಹಿಸಿಕೊಳ್ಳಲು ಯಾರಿಗೂ ಸಾಧ್ಯವಿದೆ. ಆದುದರಿಂದ "ಅನೇಕ ಮುಸ್ಲಿಂ ರಾಷ್ಟ್ರಗಳ ಸಂವಿಧಾನ" ಅಹ್ಮದೀಯರನ್ನು ಮುಸ್ಲಿಮರಲ್ಲವೆಂದು ಸಾರಿದ್ದರಲ್ಲಿ 'ಸನ್ಮಾರ್ಗ' ಬಾಯಿ ಚಪ್ಪರಿಸುವುದು ನಿರರ್ಥಕ. ಯಾವ ಸರಕಾರ ಏನು ಘೋಷಿಸಿದರೂ ಅಹ್ಮದೀಯರು ಮುಸ್ಲಿಮರೇ ಆಗಿ ಉಳಿಯುತ್ತಾರೆ. ಅಪರಾಧಿಗಳು ದೈವಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ.

"ಈ ಬಗ್ಗೆ ಶಿಯಾ ಸುನ್ನಿಗಳಲ್ಲಾಗಲಿ, ಹನಫಿ, ಶಾಫಿ, ಹಂಬಲಿ, ಮಾಲಿಕಿಗಳಲ್ಲಾಗಲಿ ಭಾರತೀಯ ಮುಸ್ಲಿಮರ ಸಂಘಟನೆಗಳಾದ ಜಮಿಅತುಲ್ ಉಲಮಾ, ಜಮಾಅತೆ ಇಸ್ಲಾಮಿ, ತಬ್ಲೀಗಿ ಜಮಾಅತ್ ಮುಂತಾದವುಗಳಲ್ಲಾಗಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ", ಎಂದು 'ಸನ್ಮಾರ್ಗ'ವು ತೃಪ್ತಿ ಪ್ರಕಟಿಸಿದೆ. ಹೌದು, ಅಹ್ಮದೀಯರನ್ನು ಎದುರಿಸುವ ಕಾರ್ಯದಲ್ಲಿ ಲೋಕದ ಎಲ್ಲಾ ಮುಸ್ಲಿಂ ಸಂಘಗಳೂ ಒಟ್ಟಾಗುತ್ತವೆ. 'ಸನ್ಮಾರ್ಗ'ದ ಮೇಲಿನ ಹೇಳಿಕೆಯನ್ನು ಓದುವಾಗ ನಮಗೆ ಹಝ್ರತ್ ಮುಹಮ್ಮದ್ ಮುಸ್ತಫಾ(ಸ)ರವರ ಒಂದು ಭವಿಷ್ಯ ನುಡಿ ನೆನಪಿಗೆ ಬರುತ್ತದೆ. ಆ ಪುಣ್ಯ ಪ್ರವಾದಿಯವರು ಹೇಳಿದ ಮಾತು ಎಷ್ಟೊಂದು ಸತ್ಯವಾಗಿ ಈಗ ನೆರವೇರಿದೆ! ಪೈಗಂಬರರು ಈ ರೀತಿ ಹೇಳಿದರು :

"ನನ್ನ ಸಮುದಾಯವು ಒಂದು ಕಾಲದಲ್ಲಿ ಎಪ್ಪತ್ತ ಮೂರು ಪಂಗಡಗಳಾಗಿ (ಅಂದರೆ ಬಹಳಷ್ಟು ಪಂಗಡಗಳಾಗಿ) ವಿಭಾಗಿಸಲ್ಪಡುವುದು. ಆದರೆ, ಅವುಗಳಲ್ಲಿ ಒಂದು ಪಂಗಡ ಮಾತ್ರವೇ ಮೋಕ್ಷಾರ್ಹವಾಗಿದ್ದು ಇತರ ಎಲ್ಲವೂ ಮಾರ್ಗಭ್ರಷ್ಟವಾಗಿರುವುವು".

—(ಬುಖಾರಿ).

ಮುಸ್ಲಿಂ ಸಮುದಾಯ ಪಂಗಡಗಳಾಗಿ ವಿಭಜಿಸಲ್ಪಡುವುದೆಂದು ಮುಹಮ್ಮದ್ ಪೈಗಂಬರರು ಭವಿಷ್ಯನುಡಿದ ಕಾಲ ಇದೇ ಆಗಿದೆಯೆಂಬುದು ಎಲ್ಲ ಮುಸ್ಲಿಮರೂ ಒಪ್ಪುವ ಒಂದು ವಿಚಾರವಾಗಿದೆ. ಪೈಗಂಬರರು ಈ ಎಲ್ಲಾ ಪಂಗಡಗಳಲ್ಲಿ ಒಂದನ್ನು ಮಾತ್ರ ಪ್ರತ್ಯೇಕ ಪಂಗಡವೆಂದು ಬೇರ್ಪಡಿಸಿ ಇತರ ಎಲ್ಲವನ್ನೂ ಇನ್ನೊಂದು ಕಡೆ ಜಮಾಯಿಸಿರುವರು. ಸ್ಪಷ್ಟವಾದ ಒಂದು ಚಿತ್ರಣವು ಈಗ ನಮ್ಮ ಮುಂದೆಯಿದೆ. ಇಂದು ಇತರ ಎಲ್ಲಾ ಪಂಗಡಗಳಿಂದಲೂ ಒಗ್ಗಟ್ಟಾಗಿ ಎದುರಿಸಲ್ಪಡುವ ಒಂದು ಪಂಗಡವೆಂದರೆ ಅಹ್ಮದಿಯಾ ಜಮಾಅತ್ ಮಾತ್ರವಾಗಿದೆ. ಪೈಗಂಬರರ ವಚನದಲ್ಲಿ ಸೂಚಿಸಲ್ಪಟ್ಟ ಕಾರ್ಯವನ್ನು 'ಸನ್ಮಾರ್ಗ'ವು ಉದಾಹರಣೆ ಸಹಿತ ವಿವರಿಸಿದೆ. ಆದುದರಿಂದ ಮೋಕ್ಷಾರ್ಹವಾದ ಆ ಏಕಮಾತ್ರ ಸಂಘವು ಅಹ್ಮದಿಯಾ ಜಮಾಅತಾಗಿದೆ ಎಂದು ತಿಳಿದುಕೊಳ್ಳಬಹುದು.

ನನ್ನೀ ಲೇಖನವನ್ನು ಸಮಾಪನಗೊಳಿಸುವ ಮೊದಲು ಅತ್ಯಂತ ವಿನಯದಿಂದ 'ಸನ್ಮಾರ್ಗ' ಪತ್ರಿಕೆಯವರೊಡನೆ, ಅವರು ನೇರವಾಗಿ ವಿಚಾರ ವಿನಿಮಯಕ್ಕಾಗಿ ಮುಂದೆ ಬರಲಿ ಎಂದು ಇನ್ನೊಮ್ಮೆ ವಿನಂತಿಸಿಕೊಳ್ಳುತ್ತೇನೆ. ಅಹ್ಮದಿಯಾ ವಿಶ್ವಾಸಗಳಲ್ಲಿ ಇಸ್ಲಾಂ ಧರ್ಮತತ್ವಕ್ಕೆ ಎದುರಾಗಿ ಕಂಡುಬರುವ ಏನಾದರೂ ಇದ್ದರೆ ಅವರು ಅದನ್ನು ಎತ್ತಿ ತೋರಿಸಲಿ. ಆಗ ನಾವು ಅದಕ್ಕೆ ನೀಡುವ ಉತ್ತರವೇನೆಂದು ತಿಳಿಯಬಹುದಲ್ಲವೇ.

ವ ಆಖಿರು ದಅ್‌ವಾನಾ ಅನಿಲ್ ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್.

★

# ಇಸ್ಲಾಂ ಧರ್ಮ ಮತ್ತು ಉರೂಸ್ ಸಮಾರಂಭ

—ಎಂ. ಪಿ. ಎ. ಕೆ.

ನೀವು ಪೂರ್ಣ ವಿಶ್ವಾಸದೊಂದಿಗೆ ಅಲ್ಲಾಹುವಿನೊಡನೆ ಪ್ರಾರ್ಥಿಸಿರಿ; ನಿಷೇಧಿಗಳಿಗೆ ಅದು ಇಷ್ಟವಾಗದಿದ್ದರೂ ಸರಿ. (ಪವಿತ್ರ ಖುರ್‌ಆನ್ 40 : 15)

ನಿಜವಾದ ಪ್ರಾರ್ಥನೆಯ ಹಕ್ಕುದಾರನು ಅಲ್ಲಾಹು ಮಾತ್ರವಾಗಿದ್ದಾನೆ. ಅವನ ಹೊರತು ಇವರು ಯಾರೊಡನೆ ಪ್ರಾರ್ಥಿಸುವರೋ, ಅವರಿಂದ ಯಾವ ರೀತಿಯ ಉತ್ತರವೂ ಲಭಿಸಲಾರದು. (ಪವಿತ್ರ ಖುರ್‌ಆನ್ 13 : 15)

"ಅದ್ದುಆಉ ಹುವಲ್ ಇಬಾದತು" ಅಂದರೆ, ಪ್ರಾರ್ಥನೆಯು ಆರಾಧನೆಯೇ ಆಗಿದೆ. —ಹದೀಸ್. (ಆರಾಧನೆಯು ಅಲ್ಲಾಹುವಿಗೆ ಮಾತ್ರವೇ ಆಗಿದೆ.)

ಮಾನವ ರಾಶಿಯ ಮಾರ್ಗದರ್ಶನಕ್ಕಾಗಿ ಪವಿತ್ರ ಇಸ್ಲಾಂ ಧರ್ಮವನ್ನು ಅಲ್ಲಾಹು ಮನುಷ್ಯ ಕುಲಕ್ಕೆ ಸಂಭಾವನೆ ಇತ್ತನು. ಖಾತಮುನ್ನಬಿಯಿನ್ ಹಝ್ರತ್ ಮುಹಮ್ಮದ್ ಪೈಗಂಬರರ ಮೂಲಕ ಇಸ್ಲಾಂ ಧರ್ಮವು ಸ್ಥಾಪಿತವಾಯಿತು. ಪೈಗಂಬರರಿಂದ ಪ್ರಥಮವಾಗಿ ಸಂಬೋಧಿಸಲ್ಪಟ್ಟ ಬಹುದೈವಾರಾಧಕರೂ ಅಧರ್ಮಿಗಳೂ ಆಗಿದ್ದ ಮಕ್ಕಾ ನಿವಾಸಿಗಳು ಅದನ್ನು ಎದುರಿಸಿದರಾದರೂ ಅವರನ್ನು ತನ್ನ ದಿವ್ಯವಾದ ಆಧ್ಯಾತ್ಮಿಕ ಪ್ರಭಾವದಿಂದ ಉತ್ತಮ ಧಾರ್ಮಿಕ ಗುಣಗಳುಳ್ಳ ಪುಣ್ಯಾತ್ಮರನ್ನಾಗಿ ಮಾರ್ಪಡಿಸುವುದರಲ್ಲಿ ಆ ಪ್ರವಾದಿವರ್ಯರು ವಿಜಯಿಯಾದರು. ಮುಹಮ್ಮದ್ ಪೈಗಂಬರರ ಮೂಲಕ ಅಲ್ಲಾಹು ಮಾಡಿದ ವಾಗ್ದಾನ ಪ್ರಕಾರ ಮುಸ್ಲಿಂ ಸಮುದಾಯವು ಉತ್ಕೃಷ್ಟ ಪದವಿಯನ್ನು ಗಳಿಸಿತು.

ಆದರೆ, ಕಾಲಾಂತರದಲ್ಲಿ ಮುಸ್ಲಿಂ ಸಮುದಾಯವು ಅಧಃಪತನಗೊಳ್ಳಲಿರುವುದೆಂದೂ ಆ ಪುಣ್ಯ ಪ್ರವಾದಿ ಭವಿಷ್ಯ ನುಡಿದಿರುವರು. ಯಾವ ರೀತಿಯಲ್ಲಿ ಯಹೂದಿ ನಸಾರಾಗಳು ಧಾರ್ಮಿಕವಾಗಿಯೂ ಆಧ್ಯಾತ್ಮಿಕವಾಗಿಯೂ ಅಧಃಪತನಗೊಂಡರೋ ಅದೇ ರೀತಿಯಲ್ಲಿ, ಅದಕ್ಕಿಂತಲೂ ಶೋಚನೀಯವಾದ ಒಂದು ಅವಸ್ಥೆಗೆ ಮುಸ್ಲಿಂ ಸಮುದಾಯವು ತಳ್ಳಲ್ಪಡುವುದೆಂದು ಮುಹಮ್ಮದ್ ಪೈಗಂಬರರು ನುಡಿದಿರುವರು. ಮುಸ್ಲಿಮರ ಸಂಖ್ಯಾಬಲವು ಕಡಮೆಯಾಗಿರುವುದರಿಂದಲ್ಲ ಈ ರೀತಿ ಸಂಭವಿಸುವುದು. ಆ ಕಾಲದಲ್ಲಿ ಮುಸ್ಲಿಮರೆಂದು ಕರೆಯಿಸಿಕೊಳ್ಳುವವರು ಅಧಿಕಸಂಖ್ಯೆಯಲ್ಲಿ ಇರುವರಾದರೂ ಅವರಲ್ಲಿ ನಿಜವಾದ ಇಸ್ಲಾಂ ಇಲ್ಲದಾಗುವುದೆಂದೂ ಸತ್ಯ ವಿಶ್ವಾಸವು ಆಕಾಶದೆಡೆ ಎತ್ತಲ್ಪಡುವುದೆಂದೂ ಜನರನ್ನು ಸದುಪದೇಶಗಳಿಂದಲೂ ಉತ್ತಮ ನಡವಳಿಕೆಗಳಿಂದಲೂ ಮಾರ್ಗದರ್ಶನ ಮಾಡಬೇಕಾದ "ಉಲಮಾ" ಎಂಬ ಪಂಡಿತ ವರ್ಗವು ಆಕಾಶದಡಿಯಲ್ಲಿ ಅತ್ಯಂತ ನಿಕೃಷ್ಟ ಜನರಾಗಿ ಮಾರ್ಪಡುವರೆಂದೂ ಅವರಲ್ಲಿ ಸ್ವಾರ್ಥ ಮನೋಭಾವವು ತುಂಬಿ ನಾಶ–ನಷ್ಟಗಳಿಗೂ ಧಾರ್ಮಿಕ ಅಧಃಪತನಕ್ಕೂ ಅವರೇ ಕಾರಣರಾಗುವರೆಂದೂ ಸಹ ಪವಿತ್ರ ಪ್ರವಾದಿಯವರು ಭವಿಷ್ಯ ನುಡಿದಿರುವರು. (ಮಿಷ್ಕಾತ್ ಮತ್ತು ಬುಖಾರಿ ನೋಡಿರಿ). ಹಝ್ರತ್ ಮುಹಮ್ಮದ್ ಪೈಗಂಬರರ ಮೇಲಿನ ಭವಿಷ್ಯ ನುಡಿಯು ಅಕ್ಷರಶಃ ಪೂರ್ತಿಯಾಗಿರುವುದನ್ನು ನಾವಿಂದು ಪ್ರತ್ಯಕ್ಷದಲ್ಲಿ ಕಾಣುತ್ತಿದ್ದೇವೆ. ಇಸ್ಲಾಮಿನ ಪವಿತ್ರವಾದ ವಿಶ್ವಾಸಾಚಾರಗಳಿಗೆ ತೀರಾ ವಿರುದ್ಧವಾದ ಅನೇಕ ಆಚಾರಸಂಪ್ರದಾಯಗಳೂ ಮೂಢ ನಂಬಿಕೆಗಳೂ ಕಾಲಕ್ರಮೇಣ ಮುಸ್ಲಿಮರಲ್ಲಿ ಬಂದು ಸೇರಿದವು. ಇಸ್ಲಾಮಿನ ಮೂಲಭೂತ ಸಿದ್ಧಾಂತಗಳಿಗೇ ಎದುರಾದ ವಿಶ್ವಾಸಗಳನ್ನೂ ಆಚಾರ ಸಂಪ್ರದಾಯಗಳನ್ನೂ ಅನುಸರಿಸಲು ಮುಸ್ಲಿಮರು ತೊಡಗಿದರು. ಇದರಿಂದಾಗಿ ಅವರಿಗೆ ಧಾರ್ಮಿಕವಾಗಿಯೂ ಆಧ್ಯಾತ್ಮಿಕವಾಗಿಯೂ ಭೌತಿಕವಾಗಿಯೂ ಅಧಃಪತನವುಂಟಾಯಿತು. ಅತ್ಯುನ್ನತವಾದ ಒಂದು ಸ್ಥಾನದಿಂದ ಮುಸ್ಲಿಂ ಸಮುದಾಯವು ಪಾತಾಳಕ್ಕೆ ತಳ್ಳಲ್ಪಟ್ಟಿತು. ಇಂದಿನ ಮುಸ್ಲಿಂ ಸಮು

ದಾಯದಲ್ಲಿ ಬಂದು ಸೇರಿದ ಅನೇಕ ಅಬದ್ಧ ವಿಶ್ವಾಸಗಳ ಪೈಕಿ, ಪವಿತ್ರ ತೌಹೀದಿಗೆ ಕಳಂಕಕರವಾದ ವಿಶ್ವಾಸವೂ ಒಂದಾಗಿದೆ. ಪ್ರಪಂಚದಲ್ಲಿ "ತೌಹೀದ್" ಅಥವಾ ಏಕದೈವ ತತ್ವವನ್ನು ಇಸ್ಲಾಂ ಧರ್ಮವು ಪ್ರಬೋಧಿಸುವಂತೆ ಅಷ್ಟೊಂದು ಶಕ್ತಿಯುತವಾಗಿಯೂ ಪ್ರಬಲವಾಗಿಯೂ ಉಪದೇಶಿಸುವ ಮತ ಬೇರೊಂದಿಲ್ಲ. ಇಸ್ಲಾಂ ಧರ್ಮದ ಮೂಲಭೂತ ಸಿದ್ಧಾಂತಗಳೆಲ್ಲವೂ ಅಲ್ಲಾಹನ ಏಕತ್ವದ ಮೇಲೆ ಆಧಾರಿತವಾಗಿವೆ. ಪವಿತ್ರ ಖುರ್‌ಆನಿನಲ್ಲಿ ಈ ವಿಷಯವು ಅತ್ಯಂತ ಶಕ್ತಿಯುತವಾಗಿ ಪ್ರತಿಪಾದಿಸಲ್ಪಟ್ಟಿದೆ.

ಪವಿತ್ರ ತೌಹೀದಿನ ವಿರುದ್ಧಾರ್ಥವುಳ್ಳ "ಶಿರ್ಕ್" ಅಥವಾ ಬಹು ದೈವಾರಾಧನೆಯನ್ನು ಇಸ್ಲಾಂ ಧರ್ಮವು ಕಟುವಾಗಿ ವಿರೋಧಿಸುತ್ತವೆ. ಜಗತ್ಪಾಲಕನಾದ ಅಲ್ಲಾಹುವಿಗೆ ಮಾತ್ರವೇ ಇರುವುದೆಂದು ಖುರ್‌ಆನ್ ಘೋಷಿಸುವ ಅವನ ಪ್ರತ್ಯೇಕ ಗುಣಗಳು ಅವನ ಸೃಷ್ಟಿಗಳಿಗೂ ಇವೆಯೆಂದು ಹೇಳುವುದೇ "ಶಿರ್ಕ್" ಆಗಿರುತ್ತದೆ. ಆದರೆ, ದುರದೃಷ್ಟವಶಾತ್ "ಆಕಾಶದಡಿಯಲ್ಲಿ ನಿಕೃಷ್ಟರು" ಎಂದು ಪೈಗಂಬರರು ನಿರೂಪಿಸಿರುವ ಉಲಮಾಗಳ ಒಂದು ವಿಭಾಗವು ಜನರೆಡೆಯಲ್ಲಿ ಶಿರ್ಕ್ (ಬಹು ದೈವತ್ವ)ವನ್ನು ಪ್ರಚಾರಪಡಿಸಲು ತೊಡಗಿರುವ ಒಂದು ದಯನೀಯ ಅವಸ್ಥೆಯನ್ನು ನಾವಿಂದು ಕಾಣುತ್ತಿದ್ದೇವೆ. ಮನುಷ್ಯರ ಆವಶ್ಯಕತೆಗಳನ್ನು ಚೆನ್ನಾಗಿ ಬಲ್ಲವನು ಅಲ್ಲಾಹನೆಂದೂ ಆದುದರಿಂದ ಮನುಷ್ಯರು ತಮ್ಮ ಉದ್ದೇಶ ಸಿದ್ಧಿಗಾಗಿ ಆ ಅಲ್ಲಾಹನೊಡನೆಯೇ ಪ್ರಾರ್ಥಿಸಬೇಕೆಂದೂ ಹಾಗೆ ಪ್ರಾರ್ಥಿಸಿದಲ್ಲಿ ಅವನು ಅವರಿಗೆ ಉತ್ತರವನ್ನೀಯಲು ಶಕ್ತನೆಂದೂ ಪವಿತ್ರ ಖುರ್‌ಆನ್ ವ್ಯಕ್ತವಾದ ಭಾಷೆಯಲ್ಲಿ ನಮಗೆ ತಿಳಿಸಿಕೊಟ್ಟಿದೆ. ಆದರೆ, ಅಲ್ಲಾಹುವನ್ನು ನೇರವಾಗಿ ಪ್ರಾರ್ಥಿಸುವುದರಿಂದ ಪ್ರಯೋಜನವಿಲ್ಲವೆಂದೂ ಬದಲಾಗಿ ಗತಿಸಿಹೋದ ಪುಣ್ಯಾತ್ಮರನ್ನು ಕರೆದು ಪ್ರಾರ್ಥಿಸಿದರೆ ತಮ್ಮ ಪ್ರಾರ್ಥನೆಗಳನ್ನು ಕೇಳಿಕೊಂಡು ತಮಗೆ ಉತ್ತರವೀಯಲು ಅವರು ಶಕ್ತರೆಂದೂ ಮುಸ್ಲಿಮರಲ್ಲಿ ಒಂದು ವಿಭಾಗದವರು ನಂಬುತ್ತಲೂ ಅದನ್ನು ಪ್ರಚಾರ ಮಾಡುತ್ತಲೂ ಇದ್ದಾರೆ. ಆವಶ್ಯಕತೆಗಳ ಈಡೇರಿಕೆಗಾಗಿ ಅಲ್ಲಾಹನೊಡನೆ ಪ್ರಾರ್ಥಿಸುವ ರೀತಿಯಲ್ಲಿ ಇತರರನ್ನು ಕರೆದು ಪ್ರಾರ್ಥಿಸುವುದು "ಶಿರ್ಕ್" ಆಗಿರುವುದೆಂದು ಪವಿತ್ರ ಖುರ್‌ಆನ್ ವ್ಯಕ್ತವಾಗಿ ಹೇಳುತ್ತಿದೆ. ಗತಿಸಿಹೋದ ಪುಣ್ಯಾತ್ಮರು ಎಷ್ಟೇ ಮಹತ್ವಶಾಲಿಗಳೂ ಶ್ರೇಷ್ಠರೂ ಆಗಿದ್ದರೂ ಸಹ ಜನರ ಸಂಕಷ್ಟಗಳನ್ನು ನೀಗಿಸುವ ಶಕ್ತಿಯು ಅವರಲ್ಲಿ ಇಲ್ಲವೆಂದು ಖುರ್‌ಆನ್ ಹೇಳುತ್ತಿದೆ. ಸರ್ವವ್ಯಾಪಿಯೂ ಸರ್ವಶಕ್ತನೂ ಸರ್ವಜ್ಞನೂ ಆಗಿರುವ ಸರ್ವಲೋಕಗಳ ಪಾಲಕನಾಗಿರುವ ಏಕದೇವನಾದ ಅಲ್ಲಾಹುವಿನೊಡನೆ ಮಾತ್ರವೇ ಪ್ರಾರ್ಥಿಸಬೇಕೆಂದು ಖುರ್‌ಆನ್ ಹೇಳುತ್ತದೆ. ನೋಡಿರಿ, ಸೂರಾಃ ಫಾತಿಹಾದಲ್ಲಿ ನಾವು ಈ ರೀತಿ ಹೇಳುವಂತೆ ಅಲ್ಲಾಹು ನಮಗೆ ತಿಳಿಸಿರುವನು — "ನಾವು ನಿನ್ನನ್ನು ಮಾತ್ರವೇ ಆರಾಧಿಸುತ್ತೇವೆ; ನಿನ್ನೊಡನೆ ಮಾತ್ರವೇ ಸಹಾಯವನ್ನು ಯಾಚಿಸುತ್ತೇವೆ". ಆ ಮಹಾ ಗ್ರಂಥವು ಇನ್ನೊಂದೆಡೆ ಈ ರೀತಿ ಹೇಳುತ್ತದೆ–"ನೀನು ನನ್ನೊಡನೆ ಪ್ರಾರ್ಥಿಸು. ನಾನು ನಿನಗೆ ಉತ್ತರವೀಯುವೆನು ಎಂದು ನಿನ್ನ ಪಾಲಕನು ನಿನ್ನೊಡನೆ ಆಜ್ಞಾಪಿಸಿದ್ದಾನೆ."

(40 : 61)

ಗತಿಸಿಹೋದ ಮಹಾತ್ಮರಿಗೆ ಅವರ ಜೀವಿತ ಕಾಲದಲ್ಲಿದ್ದ ಶಕ್ತಿಗಳೆಲ್ಲಾ ಈಗಲೂ ಇವೆಯೆಂದೂ ನಮ್ಮ ಪ್ರಾರ್ಥನೆಗಳನ್ನು ಕೇಳಲಿಕ್ಕೂ ನಮಗೆ ಸಹಾಯ ಮಾಡಲಿಕ್ಕೂ ಅವರಿಗೆ ಸಾಧ್ಯವಿದೆಯೆಂದೂ ನಂಬಿ ಉರೂಸ್ ಸಮಾರಂಭಗಳನ್ನು ನೆರವೇರಿಸುವವರ ಸಿದ್ಧಾಂತವನ್ನು ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹು ಈ ರೀತಿ ಖಂಡಿಸಿರುವನು—"ದೇವನ ಹೊರತು ನೀವು ಕರೆದು ಪ್ರಾರ್ಥಿಸುವವರಿಗೆ ಯಾವ ಅಧಿಕಾರವೂ ಇಲ್ಲ. ನೀವು ಅವರೊಡನೆ ಪ್ರಾರ್ಥಿಸುವುದಾದರೆ ಅವರಿಗೆ ನಿಮ್ಮ ಪ್ರಾರ್ಥನೆಯು ಕೇಳಿಸಲಾರದು. ಕೇಳಿಸಿದರೂ ಸಹ ನಿಮಗೆ ಉತ್ತರವನ್ನೀಯಲು ಅವರು ಶಕ್ತರಲ್ಲ". (35 : 14, 15).

ತಾವು ಪ್ರಾರ್ಥಿಸುತ್ತಿರುವುದು ಅವರಿಗೆ ದೈವತ್ವ ಕಲ್ಪಿಸಿಕೊಂಡು ಅಲ್ಲವೆಂದೂ ಅವರು ದೇವನೊಡನೆ ನಮಗಾಗಿ ಶಿಫಾರಸು ಮಾಡುವ ಮಧ್ಯವರ್ತಿಗಳಾಗಿರುವರೆಂದೂ ಉರೂಸ್ ಬೆಂಬಲಿಗರು ಹೇಳುವುದಿದೆ.

"ಅಲ್ಲಾಹನ ಹೊರತು ಇತರ "ಔಲಿಯಾ"ಗಳನ್ನು ಅವಲಂಬಿಸಿರುವವರು ಹೇಳುತ್ತಾರೆ; ನಮ್ಮನ್ನು ಅಲ್ಲಾಹುವಿನ ಸಮೀಪಕ್ಕೊಯ್ಯಲಿಕ್ಕೆ ಅಲ್ಲದೆ ನಾವು ಅವರನ್ನು ಆರಾಧಿಸುವುದಿಲ್ಲ". (ಪ. ಖುರ್‌ಆನ್ 39 : 4)

"ಏನು, ನನ್ನ ಹೊರತು ನನ್ನ ದಾಸರನ್ನು ಸಹಾಯಕರನ್ನಾಗಿ ಸ್ವೀಕರಿಸಬಹುದೆಂದು ಈ ನಿಷೇಧಿಗಳು ತಿಳಿ

ದಿರುವರೇ ? ನಿಜವಾಗಿಯೂ ಈ ನಿಷೇಧಿಗಳಿಗೆ ನಾವು ನರಕ ಶಿಕ್ಷೆಯನ್ನು ತಯಾರಿಸಿಟ್ಟದ್ದೇವೆ" (18 : 103)

ಇವರು ಉರೂಸ್‌ಗಳಿಗೆ ಹೋಗಿ, ಅಲ್ಲಿ ಇವರು ಕರೆದು ಪ್ರಾರ್ಥಿಸಲ್ಪಡುವ "ಔಲಿಯಾ"ಗಳು ನಿಜವಾಗಿಯೂ ಅಲ್ಲಾಹುವಿನ ಸಾಮೀಪ್ಯವನ್ನು ಹೊಂದಿದವರೂ ಪುಣ್ಯಾತ್ಮರೂ ಆಗಿರುವರು. ಆದರೆ. ಅಲ್ಲಾಹನಿಗೇ ಮೀಸಲಾಗಿಟ್ಟ ಅಧಿಕಾರವು ಅವನ ಸೃಷ್ಟಿಗಳಾದ ಇವರಲ್ಲಿ ಯಾರಿಗೂ ಇಲ್ಲವೆಂದು ಅಲ್ಲಾಹು ಸ್ಪಷ್ಟಪಡಿಸಿರುವನು. ಪ್ರಾರ್ಥಿಸಲ್ಪಡುವವರ ಕುರಿತು ಖುರ್‌ಆನ್ ಈ ರೀತಿಯಾಗಿ ತಿಳಿಸಿ ಕೊಡುತ್ತದೆ: "ನಿಮ್ಮ ಕಷ್ಟವನ್ನು ನೀಗಿಸಲು ಅವರು ಶಕ್ತರಲ್ಲ; ಇವರು ಯಾರೊಡನೆ ಪ್ರಾರ್ಥಿಸುವರೋ ಆ ಪ್ರಾರ್ಥಿಸಲ್ಪಡುವವರೇ ಅಲ್ಲಾಹುವಿನ ಅಧಿಕ ಸಾಮೀಪ್ಯವನ್ನು ಆಗ್ರಹಿಸುವವರಾಗಿದ್ದಾರೆ. ಅವರು ಅಲ್ಲಾಹುವಿನಿಂದ ಅನುಗ್ರಹವನ್ನು ಆಶಿಸುವವರೂ ಶಿಕ್ಷೆಯ ಕುರಿತು ಭಯವಿರುವವರೂ ಆಗಿದ್ದಾರೆ." (17 : 57, 58)

ಪವಿತ್ರ ಖುರ್‌ಆನ್ ಪ್ರಾರಂಭ ಮೊದಲ್ಗೊಂಡು ಅಂತ್ಯದ ವರೆಗೂ ಸೃಷ್ಟಿಕರ್ತನಿಗೆ ಬದಲಾಗಿ ಸೃಷ್ಟಿಗಳೊಡನೆ ಪ್ರಾರ್ಥಿಸುವುದನ್ನು ನಿಷಿದ್ಧವಾಗಿ ವಿಧಿಸಿದೆ. ಈ ವಿಷಯದಲ್ಲಿ ಇನ್ನೂ ಅನೇಕ ಖುರ್‌ಆನ್ ವಚನಗಳನ್ನು ತೆಗೆದು ತೋರಿಸಲು ಸಾಧ್ಯವಿದೆಯಾದರೂ ಇಲ್ಲಿ ಅದಕ್ಕೆ ಸ್ಥಳಾವಕಾಶವಿಲ್ಲ. ಪವಿತ್ರ ಖುರ್‌ಆನನ್ನು ಒಂದಾವರ್ತಿಯಾದರೂ ಅರ್ಥ ಸಹಿತ ಪಠಿಸಿ ನೋಡುವ ಯಾವನಿಗೂ ಈ ವಿಷಯವು ಸ್ಪಷ್ಟವಾಗಿ ಮನದಟ್ಟಾಗುವುದು. ಎಂತಹ ಆಪತ್ತಿನಲ್ಲೂ ಯಾವ ಆವಶ್ಯಕತೆಗಳಿಗೂ ಸತ್ಯ ವಿಶ್ವಾಸಿಗಳು ಅಲ್ಲಾಹುವಿನೊಡನೆ ಮಾತ್ರ ಪ್ರಾರ್ಥಿಸುವರಲ್ಲದೆ ಅವನ ಹೊರತು ತಮಗೆ ಸಹಾಯ ಮಾಡಲು ಸಾಧ್ಯವಿರುವ ಬೇರೊಂದು ಶಕ್ತಿಯಿದೆಯೆಂದು ಊಹಿಸುವುದು ಕೂಡ ನಿಷಿದ್ಧವೆಂದು ಪವಿತ್ರ ಖುರ್‌ಆನ್ ವ್ಯಕ್ತಪಡಿಸಿದೆ. ದೇವನೊಡನೆ ಮಾತ್ರವೇ ಪ್ರಾರ್ಥಿಸಬೇಕೆಂದು ಪವಿತ್ರ ಖುರ್‌ಆನಿನಾದ್ಯಂತ ವಿವರಿಸಲ್ಪಟ್ಟಿದೆ. ಇದಕ್ಕೆದುರಾಗಿ ಗತಿಸಿಹೋದ ಪುಣ್ಯಾತ್ಮರನ್ನು ಸಹ ಪ್ರಾರ್ಥಿಸಿಕೊಳ್ಳಬಹುದೆಂಬ ಒಂದು ಸೂಚನೆಯಾಗಲಿ ಪವಿತ್ರ ಖುರ್‌ಆನಿನಲ್ಲಿ ಕಾಣಲ್ಪಡುವುದಿಲ್ಲ. ಇಸ್ಲಾಂ ಧರ್ಮದ ಅಖಂಡ ಪ್ರಮಾಣವೂ ಪ್ರಥಮ ವಿಧಿಯೂ ಪವಿತ್ರ ಖುರ್‌ಆನ್ ಆಗಿರುವುದರಿಂದ ಉರೂಸ್ ಸಮಾರಂಭಗಳ ಕುರಿತು ಖುರ್‌ಆನ್ ನಿರ್ದೇಶಿಸುವ ಆಜ್ಞೆಗಳ ಕಡೆಗೆ ಮುಸ್ಲಿಮರು ಗಮನಿಸಬೇಕಾದುದು ಅವಶ್ಯವಾಗಿದೆ. ಏಕದೈವ ತತ್ವವನ್ನು ಪ್ರಬೋಧಿಸುವ ಮತಗಳಲ್ಲಿ ಉತ್ಕೃಷ್ಟ ಸ್ಥಾನದಲ್ಲಿರುವುದು ಇಸ್ಲಾಂ ಮತವೆಂದೂ ಇಸ್ಲಾಂ ಮತವು "ತೌಹೀದ್" ಅಥವಾ ಏಕದೈವ ತತ್ವಕ್ಕೆ ಎಷ್ಟು ಪ್ರಾಧಾನ್ಯತೆಯನ್ನು ನೀಡಿದೆ ಎಂಬುದನ್ನೂ ಉರೂಸ್ ಸಮಾರಂಭವನ್ನೇರ್ಪಡಿಸಿ ಅಲ್ಲಿ ಆ ಪುಣ್ಯಾತ್ಮರನ್ನು ಕರೆದು ಪ್ರಾರ್ಥಿಸುವ. ಸಹಾಯವನ್ನು ಯಾಚಿಸುವ ಮುಸ್ಲಿಂ ಸಹೋದರರು ತಿಳಿದುಕೊಳ್ಳುವ ಕಾಲವು ಇದೋ ಸನ್ನಿಹಿತವಾಗಿದೆ.


**Read**

**THE HOLY PROPHET MUHAMMAD**

Being a short sketch of the Life, Teachings and Character of the Holy Prophet Muhammad.

By: Hazrat Mirza Bashiruddin Mahmud Ahmad.

Write to: Nazir Dawat-o-Tabligh. Qadian-143516 (Punjab)

# ★ ಸಂಪಾದಕರಿಗೆ ಪತ್ರ ★

"ಯುಗರಶ್ಮಿ"ಯನ್ನು ಓದಿ ಆನಂದಿಸುವವರಲ್ಲಿ, ಚಂದಮಾಮ ಸಂಪಾದಕರ ವಿಭಾಗದಲ್ಲಿರುವ ನಾನೊಬ್ಬನು. ಅದರಲ್ಲಿ ಹಲವಾರು ಜಿಜ್ಞಾಸೆಗೆ ಯೋಗ್ಯವಾದ ಲೇಖನಗಳು ಬುದ್ಧಿಯ ವಿಕಾಸಕ್ಕೆ ಒಳ್ಳೆಯದಿವೆ. ಈ ಸಾರಿಯ "ದೇವನ ಸೃಷ್ಟಿಕರ್ತ?" ಅಮೋಘವಾದ ಲೇಖನ. ಇನ್ನೂ ಇತರ...... ಕೇವಲ ನನ್ನ ಮೆಚ್ಚುಗೆಯನ್ನೂ ಚಂದಮಾಮದ ಪರವಾಗಿ ಕೃತಜ್ಞತೆಯನ್ನೂ ತಿಳಿಸಲು ಈ ಪತ್ರ.

ಮದರಾಸು. —ಎಂ. ರಂಗ ರಾವ್

●

ನಾನೊಬ್ಬ ಕನ್ನಡ ಕಲಿತ ಮುಸ್ಲಿಂ ಯುವಕ, ಲೇಖಕ, ಕವಿ. ಸಂಗೀತ, ಭಾಷಣಗಳಲ್ಲಿ ಆಸಕ್ತಿ ಇರಿಸಿಕೊಂಡವ.

ತಮ್ಮ ಪತ್ರಿಕೆ ಕರ್ನಾಟಕದಲ್ಲಿ ಕನ್ನಡ ಕಲಿತ ಮುಸ್ಲಿಂ ಬಾಂಧವರಿಗೆ ತುಂಬ ಉಪಯುಕ್ತ ಪತ್ರಿಕೆ. ಉರ್ದು ಬಾರದ ನಮ್ಮಂಥ ಮಹ್ಮದೀಯರಿಗೆ ನಿಮ್ಮ ಪತ್ರಿಕೆ ದಾರಿ ದೀಪ. ಅದು ಇನ್ನೂ ಹೆಚ್ಚು ಪ್ರಕಾಶಮಯವಾಗಲಿ ಎಂದು ಹಾರೈಸುವೆ.

ಸಿಂದೊಳ್ಳಿ. —ಅಬ್ದುಲ್ ರಶೀದ್ ಸನದಿ

●

ನಿಮ್ಮ ಪತ್ರಿಕೆಯನ್ನು ಓದುವ ಸಾವಿರಾರು ಮಂದಿಗಳಲ್ಲಿ ನಾನೂ ಒಬ್ಬ. ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಪ್ರತಿಯೊಂದು ವಿಷಯ ನನ್ನ ಮನವನ್ನು ಮೆಚ್ಚಿಸಿತು, ಮಾತ್ರವಲ್ಲ ಈ ಕಾಲಕ್ಕೆ ಅನುಕೂಲವಾಗಿಯೇ ಇದೆ. ಇಸ್ಲಾಮಿನ ಸುಂದರ ರೂಪವನ್ನು ಕರ್ನಾಟಕ ಜನತೆಗೆ ತಲುಪಿಸುವ ನಿಮ್ಮ ಹಂಬಲಕ್ಕೆ ನನ್ನ ಹೃದಯ ತುಂಬಿದ ಅಭಿನಂದನೆಗಳು.

ನಾನು ಈಗ ನಿಮ್ಮ ಪತ್ರಿಕೆಯ ಮುಂದೆ ಒಂದು ಪ್ರಾಮುಖ್ಯ ಪ್ರಶ್ನೆಯನ್ನು ಮಂಡಿಸುತ್ತೇನೆ. ಅದಕ್ಕೆ ಉತ್ತರ ನಿಮ್ಮ ಈ ಬರುವ ಪತ್ರಿಕೆಯಲ್ಲಿಯೇ ನೀಡಬೇಕಾಗಿ ವಿನಂತಿ. ಆದರೆ ಒಂದು ಶರ್ತವಿದೆ. ನೀವು ನೀಡುವ ಉತ್ತರವು ಪವಿತ್ರ ಖುರಾನಿನಿಂದ ನಿರೂಪಿಸಲ್ಪಟ್ಟಿರಬೇಕು. ಸಂಪ್ರದಾಯವಾಗಲಿ ಚರಿತ್ರೆಯಾಗಲಿ ನನಗೆ ಅವಶ್ಯವಿಲ್ಲ. ಆ ಪ್ರಶ್ನೆ ಇದಾಗಿದೆ — ಇಂದಿನ ಕಾಲದ ಬಹುಪಾಲು ಮುಸ್ಲಿಮರು ಮರಣ ಹೊಂದಿದ ಮಹಾತ್ಮರ ಗೋರಿಗಳನ್ನು ಅಲಂಕರಿಸಿ ಅವರನ್ನು ಕರೆದು ತಮ್ಮ ಕಾರ್ಯಸಿದ್ಧಿಗಳಿಗಾಗಿ ಪ್ರಾರ್ಥಿಸುತ್ತಿದ್ದಾರೆ ಅವರ ಈ ಕ್ರಮಕ್ಕೆ "ಉರೂಸ್" ಎಂದು ಹೆಸರು. ಈಗೀಗ ಈ ಉರೂಸು ಸಮಾರಂಭಗಳು ಹೆಚ್ಚೆಚ್ಚುತ್ತಾ ಬರುತ್ತಿವೆ. ಈ ಉರೂಸು ಸಮಾರಂಭಗಳಿಗೂ ಪವಿತ್ರ ಇಸ್ಲಾಂ ಧರ್ಮಕ್ಕೂ ತಮ್ಮೊಳಗೆ ಏನಾದರೂ ಸಂಬಂಧವಿದೆಯೇ? ಪವಿತ್ರ ಖುರ್‌ಆನ್ ಈ ಉರೂಸು ಸಮಾರಂಭಗಳನ್ನು ಅನುಕೂಲಿಸುತ್ತದಾ? ಅಥವಾ ವಿರೋಧಿಸುತ್ತದಾ? ದಯಮಾಡಿ ಇದರ ಉತ್ತರವನ್ನು ನಿಮ್ಮ ಪತ್ರಿಕೆಯಲ್ಲಿ ನೀಡಿ ಚಂಚಲಿತಗೊಂಡ ನನ್ನ ಮನಸ್ಸನ್ನು ಸಂತೈಸಬೇಕಾಗಿ ಅಪೇಕ್ಷೆ.

—ಮುಹಮ್ಮದ್ ಅಲಿ

(ಇದೇ ಸಂಚಿಕೆಯಲ್ಲಿರುವ "ಇಸ್ಲಾಂ ಧರ್ಮ ಮತ್ತು ಉರೂಸ್" ಎಂಬ ಲೇಖನವನ್ನು ಓದಿರಿ. —ಸಂ.)

●

ತಮ್ಮ ಡಿಸೆಂಬರ್ ತಿಂಗಳ ಸಂಚಿಕೆಯಲ್ಲಿ ಪ್ರಕಟಿಸಿದ "ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು" ಮತ್ತು "ದೇವನ ಸೃಷ್ಟಿಕರ್ತ?"ವೆಂಬ ಲೇಖನ ಕತ್ತಲಲ್ಲಿ ಸಾಗಿದವನಿಗೆ ದಾರಿದೀಪಗಳಂತೆ ಮಿನುಗಿ ಮಾರ್ಗದರ್ಶಕ

ವಾಗಿದ್ದವು. ಅದರಲ್ಲಿಯೂ ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ನಿಜಕ್ಕೂ ಬಾಳಿನ ಮುತ್ತುಗಳಂತೆ. ತಮ್ಮ ಪತ್ರಿಕೆ ರಂಜನೀಯವಾಗಿರಲು ಕಾರಣವಾದ ಪೈಗಂಬರರ ನುಡಿಮುತ್ತುಗಳನ್ನು ತಪ್ಪದೆ ಪ್ರಕಟಿಸಿರಿ. ಬಾಳನ್ನು ಸಾಗಿಸಲು ಸಹಾಯಕಾರಿಯಾದ ಮುಹಮ್ಮದ್ ಪೈಗಂಬರರ ನುಡಿಮುತ್ತುಗಳಂತೆ, ಓದಿ ಬಾಳನ್ನು ಸಾಗಿಸಲು ಸಹಾಯಕಾರಿಯಾಗಿದೆ "ಯುಗರಶ್ಮಿ".

ಇಂಡಿ. —ಶಿವಾನಂದ ಬಗಲಿ

●

ತಮ್ಮ "ಯುಗರಶ್ಮಿ" ತ್ರೈಮಾಸಿಕ ಜನವರಿ 81ರ ಸಂಚಿಕೆಯಲ್ಲಿ ಪ್ರಕಟವಾದ ಪ್ರತಿಯೊಂದು ಲೇಖನಗಳು ಸಮಯೋಚಿತವಾಗಿವೆ. ಓದುಗರ ಸಮಸ್ಯೆಗಳಿಗೆ ಉತ್ತರ ನೀಡುವ "ಪ್ರಶ್ನೋತ್ತರ" ವಿಭಾಗ ಪ್ರಾರಂಭಿಸಿದಲ್ಲಿ ಇನ್ನೂ ಉಪಯುಕ್ತವೆನಿಸುತ್ತದೆ. "ಯುಗರಶ್ಮಿ"ಯ ಪುಟಗಳು ಇನ್ನೂ ಅಧಿಕವಾಗಲಿ, ಹಾಗೂ ಈ "ಯುಗರಶ್ಮಿ" ಯುಗ ಯುಗಾಂತರ ಚಿರಾಯುವಾಗಿ ಬಾಳಲೆಂದು ಶುಭ ಹಾರೈಕೆ.

—ಇಂಡಿ ರಾಮನಾಥ್

●

ಜನವರಿ 81ರ ಯುಗರಶ್ಮಿಯಲ್ಲಿ ಮೂಡಿ ಬಂದ ಪೈಗಂಬರರ ನುಡಿಮುತ್ತುಗಳು ತುಂಬಾ ಅತ್ಯುತ್ತಮವಿದ್ದು ಕುತೂಹಲ ಕೆರಳಿಸುವಂತಿವೆ ಓದುಗರ ಮನಸೆಳೆಯುವ ಈ ನುಡಿಮುತ್ತುಗಳನ್ನು ನಾನೂ ಎಂದೂ ಮರೆಯುವುದಿಲ್ಲ. ಪ್ರಕಟಿಸಿದ ತಮಗೆ ಧನ್ಯವಾದಗಳು.

ಇಂಡಿ. —ರಜನಿಕಾಂತ ಕುಂಬಾರ್

# ಅಹ್ಮದಿಯಾ ಸಂಕ್ಷಿಪ್ತ ವಾರ್ತೆಗಳು

## ಖಾದಿಯಾನ್‌ನಲ್ಲಿ 89ನೇ ವಾರ್ಷಿಕ ಸಮ್ಮೇಳನ

ಅಹ್ಮದಿಯಾ ಕೇಂದ್ರಸ್ಥಾನವಾದ ಖಾದಿಯಾನ್‌ನಲ್ಲಿ ಡಿಸೆಂಬರ್ ತಾ. 18, 19, 20ರಂದು 89ನೇ ವಾರ್ಷಿಕ ಸಮ್ಮೇಳನವು ವಿಜಯಕರವಾಗಿ ಜರಗಿತು. 89 ವರ್ಷಗಳ ಮೊದಲು ಅಹ್ಮದಿಯಾ ಜಮಾಅತಿನ ಸ್ಥಾಪಕರಿಂದ ಆರಂಭಿಸಲ್ಪಟ್ಟ ಈ ಸಮ್ಮೇಳನವು ನಿರಂತರವಾಗಿ ಎಲ್ಲಾ ವರ್ಷವೂ ನಡೆದುಬರುತ್ತದೆ. ಭಾರತದ ವಿವಿಧ ಕಡೆಗಳಿಂದ ಸಾವಿರಾರು ಅಹ್ಮದೀಯರು ಮಾತ್ರವಲ್ಲದೆ, ಅಮೇರಿಕ, ಪಾಕಿಸ್ತಾನ, ಇಸ್ರೇಲ್. ಈಜಿಪ್ಟ್, ಇಂಗ್ಲೆಂಡ್, ಇಂಡೋನೇಶ್ಯಾ, ಮಲೇಶ್ಯಾ, ಸಿಂಗಪೂರ್, ಬರ್ಮಾ, ಕೆನಡಾ, ಬಂಗ್ಲಾದೇಶ್, ಮೊರಿಶ್ಯಸ್, ಹಾಲೆಂಡ್, ನೈಜೀರಿಯಾ, ಸ್ವೀಡನ್ ಮೊದಲಾದ ಕಡೆಗಳಿಂದ ವಿಭಿನ್ನ ವರ್ಣ-ವರ್ಗಗಳ ಅಹ್ಮದಿಯಾ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಧರ್ಮ ಸಾಮರಸ್ಯ, ದೇಶದ ಭಾವೈಕ್ಯತೆ, ಇಸ್ಲಾಂ ಮತ್ತು ಲೋಕಶಾಂತಿ, ದೈವಾಸ್ತಿತ್ವ, ಅಹ್ಮದಿಯಾ ವಿಶ್ವಾಸಾದರ್ಶಗಳು, ಹಿಜರಿ ಹದಿನಾಲ್ಕನೆಯ ಶತಕದ ಸವಿಶೇಷತೆ, ದಜ್ಜಾಲ್, ಯ ಅ್ ಜೂ ಜ್ ಮಾಅ್‌ಜೂಜ್ ಮುಂತಾದ ವಿಷಯಗಳ ಕುರಿತು ಅಹ್ಮದಿಯಾ ವಿದ್ವಾಂಸರು ಭಾಷಣವಿತ್ತರು.

## ರಬ್ವಾದಲ್ಲಿ 88ನೇ ವಾರ್ಷಿಕ ಸಮ್ಮೇಳನ 2 ಲಕ್ಷ ಅಹ್ಮದಿಯರ ಭಾಗವಹಿಸುವಿಕೆ

ಪಾಕಿಸ್ತಾನದ ರಬ್ವಾದಲ್ಲಿ ಡಿಸೆಂಬರ್ ತಾ. 26, 27 ಮತ್ತು 28ರಂದು 88ನೇ ಅಹ್ಮದಿಯಾ ವಾರ್ಷಿಕ ಸಮ್ಮೇಳನವು ಮಸ್ಜಿದ್ ಅಖ್ಸಾದ ಮುಂದುಗಡೆಯಿರುವ ಮೈದಾನದಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಇದು ಹಿಜರಿ 15ನೇ ಶತಕದ ಮೊದಲ ಸಮ್ಮೇಳನವಾಗಿದೆ. ಈ ಬೃಹತ್ ಸಮ್ಮೇಳನದಲ್ಲಿ ದೇಶ-ವಿದೇಶಗಳ ಸುಮಾರು ಎರಡು ಲಕ್ಷ ಅಹ್ಮದೀಯರು ಭಾಗವಹಿಸಿದರು.

## ಕೇರಳ ಅಹ್ಮದಿಯಾ ಸಮ್ಮೇಳನ

ಕೇರಳ ಅಹ್ಮದಿಯಾ ಮುಸ್ಲಿಂ ವಾರ್ಷಿಕ ಸಮ್ಮೇಳನವು ಮಟ್ಟನ್ನೂರಿನಲ್ಲಿ ಫೆಬ್ರುವರಿ ತಾ. 14 ಮತ್ತು 15ರಂದು ವಿಜಯಕರವಾಗಿ ಜರಗಿತು. ಕೇರಳದ ನಾನಾ ಭಾಗಗಳಿಂದಲೂ ನೆರೆರಾಜ್ಯ ಕರ್ನಾಟಕದಿಂದಲೂ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಫೆಬ್ರುವರಿ 14ರಂದು ಅಪರಾಹ್ನ 5 ಗಂಟೆಗೆ ಭಾರತದ ಅಹ್ಮದಿಯಾ ಪ್ರಚಾರ ಕಾರ್ಯ ಪ್ರಧಾನ ಅಧಿಕಾರಿ ಅಲ್‌ಹಾಜ್ ಮೌಲಾನ ಬಶೀರ್ ಅಹ್ಮದ್ ಸಾಹೇಬ್ ದೆಹಲವಿ ಸಮ್ಮೇಳನವನ್ನು ಉದ್ಘಾಟಿಸಿದರು. ಕೇರಳದ ಅಹ್ಮದಿಯಾ ಚೀಫ್ ಮಿಶನರಿ ಮೌಲವಿ ಮುಹಮ್ಮದ್ ಅಬುಲ್‌ವಫಾ ಸಾಹೇಬ್ ಅಧ್ಯಕ್ಷತೆ ವಹಿಸಿದ್ದರು. ಅಹ್ಮದಿಯಾ ಖಲೀಫರಾದ ಹಝ್ರತ್ ನಾಸಿರ್ ಅಹ್ಮದ್ ಸಾಹೇಬ್ ಕಳುಹಿಸಿದ ಸಂದೇಶವನ್ನು ಎಡ್ವಕೇಟ್ ಅಹ್ಮದ್ ಕುಟ್ಟಿ ಸಾಹೇಬ್ ಓದಿಹೇಳಿದರು. ಮೌಲವಿ ಮುಹಮ್ಮದ್ ಉಮರ್ ಸಾಹೇಬ್, ಜನಾಬ್ ಮುಹಮ್ಮದ್ ಕರೀಮುಲ್ಲಾ, ಜ। ಎನ್. ಅಬ್ದುರ್ರಹೀಂ ಮುಂತಾದವರು ಭಾಷಣ ಮಾಡಿದರು.

ಪ್ರಾರಂಭಿಕ ಭಾಷಣದಲ್ಲಿ ಮೌಲಾನ ಬಶೀರ್ ಅಹ್ಮದ್ ಸಾಹೇಬರು ಅಹ್ಮದಿಯಾ ಸಂಘಟನೆಯ ಉದ್ದೇಶ ಲಕ್ಷ್ಯವನ್ನು ವಿವರಿಸಿದರು. ಎಲ್ಲಾ ಮತ ಗ್ರಂಥಗಳಲ್ಲಿ ಪ್ರತಿಪಾದಿಸಲಾದ, ಈ ಕಾಲಘಟ್ಟದಲ್ಲಿ ಅವತರಿಸಬೇಕಾದ ಲೋಕೋದ್ಧಾರಕ ಯುಕ್ತ ಕಾಲದಲ್ಲೇ ಜನ್ಮವೆತ್ತಿರುವರೆಂದೂ ಇನ್ನು ಲೋಕದಲ್ಲಿ ಶಾಂತಿಯೂ ಸಮಾಧಾನವೂ ಅಹ್ಮದಿಯಾ ಸಂಘಟನೆಯ ಮೂಲಕ ಮಾತ್ರವೇ ಸಿದ್ಧಿಸುವುದೆಂದೂ ಅವರು ಹೇಳಿದರು. ಲೋಕದಲ್ಲಿ ಜನ್ಮ ತಾಳಿದ ಎಲ್ಲಾ ದೈವಿಕ ಪ್ರಬೋಧಕರನ್ನು ಗೌರವಿಸಿ ಅವರ ಅಧ್ಯಾಪನಗಳನ್ನು ಜನರ ಹೃದಯಗಳಲ್ಲಿ ಪುನಃಸ್ಥಾಪಿಸುವುದು ಅಹ್ಮದಿಯಾ ಸಂಘಟನೆಯ ಉದ್ದೇಶ. ಜನರ ಬಳಿಯಲ್ಲಿ ಮತಗ್ರಂಥಗಳಿವೆ ಹೊರತು ಆ ಗ್ರಂಥಗಳು ಕಲಿಸುವ ಪಾಠಗಳ ಕುರಿತು ಅವರಿಗೆ ಅರಿವಿಲ್ಲ. ಆದ್ದರಿಂದಲೇ ಇಂದು ಲೋಕದಲ್ಲಿ ಹಲವು ಅನಿಷ್ಟ ಘಟನೆಗಳು ಧರ್ಮದ ಹೆಸರಿನಲ್ಲಿ ನಡೆಯುತ್ತವೆಂದು ಅವರು ತಿಳಿಸಿದರು.

ವಿಜ್ಞಾನ ಹಾಗೂ ತಾಂತ್ರಿಕ ಜ್ಞಾನದಲ್ಲಿ ಲೋಕವಿಂದು ಪ್ರಗತಿಯನ್ನು ಪಡೆದಿದ್ದು ಮಾನವನ ಭೌತಿಕ ಸುಖಕ್ಕೆ ಸಕಲ ಸೌಕರ್ಯಗಳಿವೆ. ಅದೇ ರೀತಿ ಮನುಷ್ಯ ಕುಲದ ನಾಶದ ಸಾಮಗ್ರಿಗಳನ್ನೂ ಸಹ ಆಧುನಿಕ ವಿಜ್ಞಾನ ಹೊಂದಿದೆ. ಆದರೆ ಧರ್ಮ ಮಾತ್ರವೇ ಲೋಕದಲ್ಲಿ ಶಾಂತಿ ಸ್ಥಾಪಿಸಲು ಶಕ್ತ. ವಿವಿಧ ಧರ್ಮಗಳ ಸಾಮರಸ್ಯದಿಂದ ಅದು ಸಾಧ್ಯವೆಂದು ಅವರು ಅಭಿಪ್ರಾಯಪಟ್ಟರು.

## ಎಕ್ಸಿಬಿಷನ್ ಅಹ್ಮದಿಯಾ ಇಂಟರ್‌ನೇಶನಲ್

ಕೇರಳ ಅಹ್ಮದಿಯಾ ವಾರ್ಷಿಕ ಸಮ್ಮೇಳನದ ಅಂಗವಾಗಿ ಫೆಬ್ರುವರಿ 8ರಂದು ಪೂರ್ವಾಹ್ನ 10–30ಕ್ಕೆ ಮಟ್ಟನ್ನೂರ್ ಬಸ್ ನಿಲ್ದಾಣದ ಸಮೀಪ ಸಜ್ಜೀಕರಿಸಿದ "ಎಕ್ಸಿಬಿಷನ್ ಅಹ್ಮದಿಯಾ ಇಂಟರ್‌ನೇಶನಲ್"ನ್ನು ಡಾ। ಭಾಸ್ಕರನ್ ನಾಯರ್ ಉದ್ಘಾಟಿಸಿದರು.

6 ದಿನಗಳ ಕಾಲದ ಪ್ರದರ್ಶನವನ್ನು ಧಾರಾಳ ಜನರು ನೋಡಿದರು. ವಿದ್ಯಾಸಂಪನ್ನರೂ ನಿಷ್ಪಕ್ಷಪಾತಿಗಳೂ ಆದ ಸತ್ಯಾನ್ವೇಷಕರಿಗೆ ಪ್ರದರ್ಶನವು ಬಹಳ ಮೆಚ್ಚಿಕೆಯಾಗಿದೆಯೆಂದು ಸಂದರ್ಶಕರು ಬರೆದ ಅಭಿಪ್ರಾಯಗಳಿಂದ ವ್ಯಕ್ತವಾಗಿದೆ.

## ಕೋಲಾರದಲ್ಲಿ ಪ್ರೊಫೆಸರ್ ಸಲಾಂ

ಜನವರಿ 13ರಂದು ಪ್ರೊಫೆಸರ್ ಸಲಾಮರು ಕೋಲಾರದ ಕೆ. ಜಿ. ಎಫ್. (ಚಿನ್ನದ ಗಣಿ)ಗೆ ಭೇಟಿ ನೀಡಿದರು. ಅವರ ಸಿದ್ಧಾಂತದ ಪ್ರಯೋಗವೊಂದು ಅಲ್ಲಿ ನಡೆಯುತ್ತಿದೆ. ಅಮೇರಿಕ ಮತ್ತು ಇಂಗ್ಲೆಂಡಿನಲ್ಲಿ ನಡೆಯುತ್ತಿರುವ ಪ್ರಯೋಗಗಳ ಫಲಿತಾಂಶ ಲಭ್ಯವಾಗುವ ಮುಂಚಿತವಾಗಿಯೇ ಇಲ್ಲಿನ ಫಲಿತಾಂಶವನ್ನು ತಿಳಿಯುವ ನಿರೀಕ್ಷೆಯಿದೆಯೆಂದು ಪ್ರೊಫೆಸರ್ ಸಲಾಂ ಅಭಿಪ್ರಾಯಪಟ್ಟರು.

★

# ಪ್ರೊಫೆಸರ್ ಅಬ್ದುಸ್ಸಲಾಮರಿಗೆ ಮದರಾಸಿನಲ್ಲಿ ಸನ್ಮಾನ

ಭಾರತೀಯ ಭೌತ ವಿಜ್ಞಾನ ಸಂಘದ ಮತ್ತು ವಿವಿಧ ವೈಜ್ಞಾನಿಕ ಸಂಸ್ಥೆಗಳ ಆಮಂತ್ರಣದ ಮೇರೆಗೆ ಮೂರು ವಾರಗಳ ಭಾರತ ಸಂದರ್ಶನಕ್ಕಾಗಿ ಪ್ರೊ। ಅಬ್ದುಸ್ಸಲಾಂ ಜನವರಿ 8 ರಂದು ಬೊಂಬಾಯಿ ತಲುಪಿದರು. ದೇಶದಲ್ಲೆಲ್ಲೂ ಅವರಿಗೆ ಉಚ್ಚ ಮಟ್ಟದ ಸ್ವಾಗತ ಲಭಿಸಿತು. ಬೊಂಬಾಯಿಯ ಕಾರ್ಯಕ್ರಮದ ನಂತರ ಜನವರಿ 11ರಂದು ಮದರಾಸಿಗೆ ಬಂದ ಪ್ರೊ। ಅಬ್ದುಸ್ಸಲಾಮರನ್ನು ಸ್ವಾಗತಿಸಲು ಇಂಡಿಯನ್ ಫಿಸಿಕ್ಸ್ ಅಸೋಸಿಯೇಶನಿನ ಅಧಿಕಾರಿಗಳೂ ಸುಮಾರು ನೂರು ಮಂದಿ ಅಹ್ಮದೀಯರೂ ವಿಮಾನ ನಿಲ್ದಾಣದಲ್ಲಿ ಉಪಸ್ಥಿತರಿದ್ದರು. ತಾರೀಕು 12ರಂದು ಸಂಜೆ ಅವರಿಗೆ ಅಹ್ಮದಿಯಾ ಮಿಶನ್ ಹೌಸಿನಲ್ಲಿ ಸನ್ಮಾನವನ್ನು ಏರ್ಪಡಿಸಲಾಗಿತ್ತು. ಕಾಲ್ಪಕ್ಕಂ ಫಿಸಿಕ್ಸ್ ರಿಯಾಕ್ಟರ್ ಸೆಂಟರ್‌ನಲ್ಲಿ ಮತ್ತು ಅಡಯಾರ್‌ನ ಇನ್‌ಸ್ಟಿಟ್ಯೂಟ್ ಓಫ್ ಮ್ಯಾತಮೆಟಿಕಲ್ ಅಸೋಸಿಯೇಶನ್‌ನಲ್ಲಿ ನಡೆದ ಕಾರ್ಯಕ್ರಮಗಳ ನಂತರ ಪ್ರೊಫೆಸರ್‌ರವರು ಕೋಡಂಬಾಕ್ಕಮಿನಲ್ಲಿರುವ ಅಹ್ಮದಿಯಾ ಮಿಶನ್ ಕೇಂದ್ರಕ್ಕೆ ಸಂದರ್ಶನವಿತ್ತರು.




ಪ್ರೊಫೆಸರ್ ಅಬ್ದುಸ್ಸಲಾಂ ಸಾಹೇಬರಿಗೆ ಮದಾರಾಸಿನ ಅಹ್ಮದಿಯಾ ಘಟಕ ನೀಡಿದ ಸನ್ಮಾನದಲ್ಲಿ ಮೌಲವಿ ಮುಹಮ್ಮದ್ ಉಮರ್ ಸಾಹೇಬರು ಪುಷ್ಪಹಾರ ಹಾಕುತ್ತಿದ್ದಾರೆ.


ಸನ್ಮಾನ ಸಮಾರಂಭದಲ್ಲಿ ಪ್ರೊಫೆಸರ್ ಸಲಾಮರು ಮುಖ್ಯವಾಗಿ ವಿದ್ಯಾಭ್ಯಾಸದ ಕುರಿತು ಮಾತನಾಡಿದರು. ವೈಜ್ಞಾನಿಕ ಅಧ್ಯಯನದಲ್ಲಿ ಭಾರತೀಯ ಮುಸ್ಲಿಮರ ಹಿಂದುಳಿಯುವಿಕೆಯ ಬಗ್ಗೆ ಅವರು ತನ್ನ ಕಳವಳವನ್ನು ವ್ಯಕ್ತಪಡಿಸಿದರು. ಉನ್ನತ ವಿದ್ಯಾಭ್ಯಾಸಕ್ಕೆ ಅರ್ಹತೆಗಳಿಸುವ ಮುಸ್ಲಿಮರ ಸಂಖ್ಯೆ ಇಂದು ಶೇಕಡಾ ಎರಡರಷ್ಟು ಕೂಡಾ ಇಲ್ಲ. ಈ ಸ್ಥಿತಿಯೇ ಮುಂದುವರಿಯುವುದು ಶುಭಕರವಲ್ಲವೆಂದು ಅವರು ಅಭಿಪ್ರಾಯಪಟ್ಟರು. ಎಫ್.ಎಸ್.ಸಿ. ಪಾಸಾದ ನಂತರ ಭಾರತೀಯ ರೈಲ್ವೆಯಲ್ಲಿ ತನಗೆ ನೌಕರಿ ಲಭಿಸಿದ ವಿಷಯವನ್ನು ಅವರು ಸ್ಮರಿಸಿದರು. ಅಂದು ಅಹ್ಮದಿಯಾ ಜಮಾಅತಿನ ಎರಡನೆಯ ಖಲೀಫ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್ ಸಾಹೇಬರ ನಿರ್ದೇಶ ಪ್ರಕಾರ ನೌಕರಿಗೆ ಹೋಗದೆ ಅಧ್ಯಯನವನ್ನೇ ಮುಂದುವರಿಸಲಾಯಿತು. ಅದರ ಫಲವಾಗಿ ತಾನು ಈ ಸ್ಥಾನದಲ್ಲಿದ್ದೇನೆಂದು ಅವರು ಹೇಳಿದರು,

ಪ್ರೊಫೆಸರರ ಗೌರವಾರ್ಥ ಜನಾಬ್ ಕರೀಮುಲ್ಲಾ ನೌಜವಾನ್ ಸಾಹೇಬ್ ಓದಿದ ಮಾನಪತ್ರದಲ್ಲಿ ಪ್ರೊ।


ಅಬ್ದುಸ್ಸಲಾಂ ನೋಬೆಲ್ ಪ್ರಶಸ್ತಿಗಳಿಸಿ ಅಹ್ಮದಿಯಾ ಮುಸ್ಲಿಂ ಚರಿತ್ರೆಯಲ್ಲಿ ಒಂದು ಸುವರ್ಣಾಧ್ಯಾಯಕ್ಕೆ ನಾಂದಿ ಹಾಕಿದರೆಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮೌಲವಿ ಮುಹಮ್ಮದ್ ಉಮರ್ ಸಾಹೇಬ್, "ಜ್ಞಾನ-ವಿಜ್ಞಾನ ಗಳಿಕೆಯಲ್ಲಿ ತನ್ನ ಅನುಯಾಯಿಗಳು ಇನ್ನಿತರರನ್ನು ಹಿಂದೆ ಹಾಕುವ ಕಾಲ ಬಂದೊದಗುವುದು" ಎಂಬ ಹಝ್ರತ್ ಅಹ್ಮದ್ (ಅ) ರವರ ಭವಿಷ್ಯೋಕ್ತಿ ಅಬ್ದುಸ್ಸಲಾಮರಲ್ಲಿ ನೆರವೇರಿದೆಯೆಂದು ಪ್ರಸ್ತಾಪಿಸಿದರು.

ಭೌತಿಕ ಹಾಗೂ ಆಧ್ಯಾತ್ಮಿಕ ಉನ್ನತಿಗಾಗಿ ಪ್ರಾರ್ಥಿಸುವರೆ ಪ್ರೊ। ಸಲಾಂ ಅಹ್ಮದೀಯರೊಡನೆ ವಿಜ್ಞಾಪಿಸಿದರು.



ಪ್ರೊಫೆಸರ್ ಅಬ್ದುಸ್ಸಲಾಮರ ಜೊತೆಯಲ್ಲಿ "ಯುಗರಶ್ಮಿ" ಸಂಪಾದಕ.



ಪ್ರೊಫೆಸರರೊಂದಿಗೆ ಕೆಲವು ಮಲೆಯಾಳಿ ಅಹ್ಮದಿ ಸಹೋದರರು.

## ಬೆಂಗಳೂರಿನಲ್ಲಿ ಸನ್ಮಾನ

ಪ್ರೊಫೆಸರ್ ಅಬ್ದುಸ್ಸಲಾಂ ಜನವರಿ 13ರಂದು ಬೆಳಗ್ಗಿನ ವಿಮಾನದಲ್ಲಿ ಮದರಾಸಿನಿಂದ ಬೆಂಗಳೂರಿಗೆ ಆಗಮಿಸಿದರು. ಪ್ರೊಫೆಸರರನ್ನು ಸ್ವಾಗತಿಸಲಿಕ್ಕಾಗಿ ಅನೇಕ ಅಹ್ಮದೀಯರು ವಿಮಾನ ನಿಲ್ದಾಣದಲ್ಲಿ ಬಂದು ಸೇರಿದ್ದರು. ಜಮಾಅತ್ ಅಧ್ಯಕ್ಷರಾದ ಜನಾಬ್ ಮುಹಮ್ಮದ್ ಶಫೀಯುಲ್ಲಾ ಸಾಹೇಬರು ಅವರಿಗೆ ಪುಷ್ಪಹಾರವನ್ನು ಹಾಕಿದರು.

ಮಾರಣೆ ದಿನ ಬೆಂಗಳೂರಿನ ಅಹ್ಮದಿಯಾ ಘಟಕದ ವತಿಯಿಂದ ಪ್ರೊಫೆಸರ್ ಸಲಾಮರಿಗೆ ಸನ್ಮಾನ ನೀಡುವ ಕಾರ್ಯಕ್ರಮವನ್ನು

ಜಮಾಅತಿನ ಕಾರ್ಯಕರ್ತರು ಇರಿಸಿಕೊಂಡಿದ್ದರು. ಆಪರೆ ನಗರದ ಅನೇಕ ಗಣ್ಯರು ಪ್ರೊಫೆಸರ್ ಸಲಾಮರ ಭೇಟಿಗಾಗಿ ಹಾತೊರೆಯುವುದನ್ನು ಪರಿಗಣಿಸಿ ಪ್ರೊಫೆಸರರ ನಿರ್ದೇಶ ಪ್ರಕಾರ ಆ ಸಮಯವನ್ನು "ಅಲ್ ಅಮೀನ್ ಎಜುಕೇಶನಲ್ ಸೊಸೈಟಿ"ಗೆ ನೀಡಲಾಯಿತು. ಹಾಗೆ ಆ ಸಂಸ್ಥೆಯ ವತಿಯಿಂದ ಪ್ರೊ। ಸಲಾಮರಿಗೆ "ಇಂಡಿಯನ್ ಇನ್‌ಸ್ಟಿಟ್ಯೂಟ್ ಓಫ್ ಸಯನ್ಸ್"ನ ಫಿಸಿಕ್ಸ್ ಹಾಲ್‌ನಲ್ಲಿ ಸನ್ಮಾನ ನೀಡಲಾಯಿತು. ಸಮಾರಂಭದಲ್ಲಿ ನಗರದ ಗಣ್ಯ ವ್ಯಕ್ತಿಗಳೂ ಪ್ರೊಫೆಸರರೂ ವಿಜ್ಞಾನಿಗಳೂ ಭಾಗವಹಿಸಿದ್ದರು. ಕರ್ನಾಟಕದ ವಿವಿದೆಡೆಗಳಿಂದಲೂ ಕೇರಳದಿಂದಲೂ ಅನೇಕ ಅಹ್ಮದೀಯರು ಸಭೆಯಲ್ಲಿ ಉಪಸ್ಥಿತರಿದ್ದರು. ಜಸ್ಟಿಸ್ ಮೀರ್ ಇಕ್ಬಾಲ್ ಹುಸೈನ್ ಸಾಹೇಬರು ಸಭೆಯ ಅಧ್ಯಕ್ಷತೆ ವಹಿಸಿದ್ದರು. "ಸಾಲಾರ್" ಉರ್ದು ಪತ್ರಿಕೆಯ ಪ್ರಕಾಶಕ ಜನಾಬ್ ಇಬ್ರಾಹಿಂ ಖಲೀಲುಲ್ಲಾಹ್ ಖಾನ್ ಸಾಹೇಬರು ಮಾನಪತ್ರ ಅರ್ಪಿಸಿದರು.

ಪ್ರೊಫೆಸರ್ ತನ್ನ ಭಾಷಣವನ್ನು ಖುರ್‌ಆನ್ ವಚನಗಳನ್ನು ಪಠಿಸುತ್ತಾ ಆರಂಭಿಸಿದರು. ಮುಸ್ಲಿಮರು ಮುಖ್ಯವಾಗಿ ಯುವಜನರು ವಿಜ್ಞಾನದ ಕಡೆಗೆ ಹೆಚ್ಚಿನ ಗಮನವನ್ನೀಯಬೇಕೆಂದು ಅವರು ಹೇಳಿದರು. ಧನಿಕರಾಗಲಿ, ಬಡವರಾಗಲಿ, ಸಕಲರೂ ತಮ್ಮ ಕೈಲಾದಷ್ಟು ಸೇವೆಯನ್ನು ವಿದ್ಯಾಭ್ಯಾಸಕ್ಕಾಗಿ ಸಲ್ಲಿಸಬೇಕೆಂದು ಅವರು ಒತ್ತಾಯಿಸಿದರು.

ಸಮಾರಂಭ ಮುಕ್ತಾಯಗೊಂಡ ಬಳಿಕ ಅಹ್ಮದಿಯರಿಗಾಗಿ ಪ್ರೊಫೆಸರ್ ಸಲಾಮರೊಂದಿಗೆ ಪ್ರತ್ಯೇಕ ಭೇಟಿಯು ಏರ್ಪಾಡು ಮಾಡಲಾಗಿತ್ತು.

(ಪ್ರೊ। ಸಲಾಮ್ ಬೊಂಬಾಯಿ, ಹೈದರಾಬಾದ್, ದೆಹಲಿ, ಭುವನೇಶ್ವರ, ಕಲ್ಕತ್ತಾ, ಅಲಿಘಡ್, ಅಮೃತ್‌ಸರ, ಖಾದಿಯಾನ್ ಮುಂತಾದ ಸ್ಥಳಗಳಿಗಿತ್ತ ಸಂದರ್ಶನ ವರದಿ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಇನ್‌ಷಾ ಅಲ್ಲಾಹ್ —ಸಂ.)

---

# ★ ಪ್ರತಿಕ್ರಿಯೆ ★

(ಮೌದೂದಿ ಪತ್ರಿಕೆ 'ಸನ್ಮಾರ್ಗ'ದ ಇತ್ತೀಚೆಗಿನ ಸಂಚಿಕೆಗಳಲ್ಲಿ ಕೆಲವು ಪ್ರಶ್ನೆಗಳೂ ಅವುಗಳಿಗೆ ವಿಚಿತ್ರವಾದ ಉತ್ತರಗಳೂ ಪ್ರಕಟವಾಗಿವೆ. ಆ ಪೈಕಿ ಕೆಲವನ್ನು ನಮ್ಮ ಪ್ರತಿಕ್ರಿಯೆ ಸಹಿತ ಇಲ್ಲಿ ಕೊಡಲಾಗಿದೆ. —ಸಂ)

"ಪ್ರಶ್ನೆ : ಕಾದಿಯಾನಿಝಮಿನ ಕುರಿತು ವಸ್ತುನಿಷ್ಠವಾಗಿ ಅಧ್ಯಯನ ನಡೆಸಿದ ಯಾವುದಾದರೂ ಗ್ರಂಥಗಳಿವೆಯೇ?

ಉತ್ತರ : ಮೌ। ಸನಾವುಲ್ಲಾ, ಇಲ್ಯಾಸ್ ಬರ್ನಿ, ಕೆ. ಎಲ್. ಗೌಬ, ಮೌ। ಮೌದೂದಿ. ಮೌ। ಅಬುಲ್ ಹಸನ್ ಅಲಿ ನದ್ವಿ ಮುಂತಾದವರು ಕಾದಿಯಾನಿಸಮಿನ ಕುರಿತು ಬರೆದಿದ್ದಾರೆ. ಈ ನಿಟ್ಟಿನಲ್ಲಿ ಮೌಲಾನಾ ನದ್ವಿಯವರ "ಕಾದಿಯಾನಿಝಂ ಎ ಕ್ರಿಟಿಕಲ್ ಸ್ಟಡೀ", ಮೌದೂದಿಯವರ "ಖಾದಿಯಾನೀ ಪ್ರೊಬ್ಲೆಂ", ಅಬುಲ್ ಫರುಖ್ಲ್ ಇಲಾಹಿಯವರ "ಕಾದಿಯಾನಿಯತ್" ಎಂಬೀ ಇಂಗ್ಲೀಷ್ ಕೃತಿಗಳು ಪ್ರಯೋಜನಕಾರಿಯಾಗಿವೆ "

—('ಸನ್ಮಾರ್ಗ' : 2–1–81)

ಈ ಉತ್ತರ ಎಷ್ಟೊಂದು ಅರ್ಥಶೂನ್ಯವೂ ವಿವೇಕರಹಿತವೂ ಆಗಿದೆಯೆಂದು ವಾಚಕರೇ ತೀರ್ಮಾನಿಸಲಿ. ಒಂದು ಸಂಘಟನೆಯ ಕುರಿತು ವಸ್ತುನಿಷ್ಠವಾಗಿ ಅಧ್ಯಯನ ನಡೆಸಬೇಕಾದುದು ಆ ಸಂಘಟನೆಯ ಪ್ರಕಟನೆಗಳಿಂದಲೋ, ಅದರ ವಕ್ತಾರರ ಹೇಳಿಕೆಗಳಿಂದಲೋ ಆಗಿರಬೇಕೆಂಬ ತತ್ವವು ಪ್ರಾಥಮಿಕವೂ ಸರ್ವಸಮ್ಮತವೂ ಆಗಿದೆ. ಮೌದೂದಿ ಪಂಥದ ಕುರಿತು ತಿಳಿದುಕೊಳ್ಳಲು ಮೌದೂದಿಗಳ ಕೃತಿಗಳನ್ನೇ ಓದಿರಿ ಎಂದೂ ಅದರ ಎದುರಾಳಿಗಳು ಆಕ್ಷೇಪಿಸಿ ಬರೆದ ಗ್ರಂಥಗಳ ಮೂಲಕ ಸರಿಯಾದ ವಿವರ ಲಭಿಸಲು ಸಾಧ್ಯವಿಲ್ಲ ಎಂದೂ ಮೌದೂದಿಗಳು ಯಾವಾಗಲೂ ನ್ಯಾಯ ವಾದ ನಡೆಸುವುದಿದೆ. ಆ ನೀತಿನಿಷ್ಠೆಯನ್ನು 'ಸನ್ಮಾರ್ಗ'ವು ಇಲ್ಲಿ ತ್ಯಜಿಸಿಬಿಟ್ಟಿದೆ. ಅಹ್ಮದಿಯಾ ಸಂಘಟನೆಯ ಕುರಿತು ತಿಳಿದುಕೊಳ್ಳಲು ಅದರ ಎದುರಾಳಿಗಳು ಆಕ್ಷೇಪಿಸಿ ಬರೆದ ಕೃತಿಗಳನ್ನು ಓದಬೇಕಂತೆ! ಇಸ್ಲಾಂ ಧರ್ಮದ ಸತ್ಯತೆಯ ಕುರಿತು ಅಬೂ

( ಹಿಂಬದಿ ಕವಚದ ಒಳಗಿನ ಪುಟ ನೋಡಿರಿ )

ಪುಸ್ತಕ ವಿಭಾಗ

# ಇಸ್ಲಾಂ ಮತ ತತ್ತ್ವಜ್ಞಾನ

(11)

ಗ್ರಂಥಕರ್ತ: ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್

ಅನುವಾದಕ: ಮುಹಮ್ಮದ್ ಯೂಸುಫ್.

## ಐಹಿಕ ಜೀವಿತೋದ್ದೇಶ ಹಾಗೂ ಅದನ್ನು ಗಳಿಸುವ ಮಾರ್ಗಗಳು

ಈ ಲೋಕದಲ್ಲಿ ಮನುಷ್ಯನ ಜೀವಿತೋದ್ದೇಶ ಮತ್ತು ಅದನ್ನು ಗಳಿಸುವ ಮಾರ್ಗವೇನೆಂದಾಗಿದೆ ಮೂರನೆಯ ಪ್ರಶ್ನೆ. ವಿಭಿನ್ನ ಸ್ವಭಾವಗಳ ಮನುಷ್ಯರು ಸಾಮಾನ್ಯವಾಗಿ ತಮ್ಮ ಅಜ್ಞತೆಯಿಂದ ಅಥವಾ ಸಂಕುಚಿತ ಮನಸ್ಥಿತಿಯ ಕಾರಣದಿಂದ ತಮ್ಮ ಜೀವಿತಕ್ಕೆ ವ್ಯತ್ಯಸ್ತ ರೀತಿಯ ಉದ್ದೇಶಗಳನ್ನು ನಿರ್ಣಯಿಸಿ ಕೇವಲ ಲೌಕಿಕಾಸಕ್ತಿಗಳನ್ನೂ ದೈಹಿಕೇಚ್ಛೆಗಳನ್ನೂ ತೃಪ್ತಿಪಡಿಸುವ ರೀತಿಯಲ್ಲಿ ಜೀವಿತವನ್ನು ಸವೆಯುತ್ತಾರೆ. ಆದರೆ ಸೃಷ್ಟಿಕರ್ತನಾದ ದೇವನು ತನ್ನ ಪವಿತ್ರ ವಚನದಲ್ಲಿ ಮನುಷ್ಯ ಜೀವಿತದ ಪರಮಲಕ್ಷ್ಯವನ್ನು ಹೀಗೆ ವಿವರಿಸಿದ್ದಾನೆ:

"ವಮಾ ಖಲಕ್ತುಲ್ ಜಿನ್ನ ವಲ್ ಇನ್ಸ ಇಲ್ಲಾ ಲಿ ಯಅ್‌ಬುದೂನ್" (51:57).

ನನ್ನನ್ನು ಅರಿಯಲಿಕ್ಕೂ ಆರಾಧಿಸಲಿಕ್ಕೂ ಬೇಕಾಗಿ ನಾನು ಜಿನ್ನುಗಳನ್ನೂ ಮನುಷ್ಯರನ್ನೂ ಸೃಷ್ಟಿಸಿರುವೆನು.

### ಜೀವಿತೋದ್ದೇಶ

ಈ ಖುರ್‌ಆನ್ ವಾಕ್ಯವನ್ನನುಸರಿಸಿ ಮನುಷ್ಯನ ಜೀವಿತ ಲಕ್ಷ್ಯ ಸೃಷ್ಟಿಕರ್ತನಾದ ದೇವನನ್ನು ಅರಿತುಕೊಂಡು ಅವನನ್ನು ಆರಾಧಿಸಿ ಅವನಿಗಾಗಿ ಬದುಕುವುದಾಗಿದೆ. ತನ್ನ ಜೀವಿತಕ್ಕೆ ಸ್ವೇಚ್ಛೆಯಿಂದ ಒಂದು ಉದ್ದೇಶವನ್ನು ನಿಶ್ಚಯಿಸಲಿಕ್ಕೆ ಮನುಷ್ಯನಿಗೆ ಅಧಿಕಾರವಿಲ್ಲ. ಏಕೆಂದರೆ, ಅವನು ಈ ಲೋಕಕ್ಕೆ ಸ್ವೇಚ್ಛೆಯಿಂದ ಬರಲಿಲ್ಲ; ಹಾಗೆಯೇ ಸ್ವೇಚ್ಛೆಯಿಂದ ಇಲ್ಲಿಂದ ಹಿಂತಿರುಗುವುದೂ ಇಲ್ಲ. ಅವನು ಒಂದು ಸೃಷ್ಟಿ ಮಾತ್ರ. ಅವನನ್ನು ನಾಸ್ತಿಯಾದ ಅವಸ್ಥೆಯಿಂದ ಸೃಷ್ಟಿಸಿ ಅವನಿಗೆ ಇತರ ಜೀವಿಗಳಿಗಿಂತ ಉತ್ಕೃಷ್ಟ ಶಕ್ತಿಗಳನ್ನೂ ಬುದ್ಧಿಯನ್ನೂ ಪ್ರಧಾನ ಮಾಡಿರುವ ಸೃಷ್ಟಿಕರ್ತನೇ ಅವನ ಜೀವಿತಕ್ಕೆ ಒಂದು ಉದ್ದೇಶವನ್ನು ನಿಶ್ಚಯಿಸಿರುವನು. ಈ ವಿಚಾರವನ್ನು ಅವನು ಗ್ರಹಿಸಿದರೂ ಇಲ್ಲವಾದರೂ ಅವನ ಜೀವಿತದ ಗುರಿ ಯಥಾರ್ಥದಲ್ಲಿ ದೇವನನ್ನು ಅರಿಯುವುದು, ಅವನಿಗೆ ಶರಣಾಗುವುದು ಮತ್ತು ಅವನಲ್ಲಿ ಲೀನವಾಗುವುದೇ ಆಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಇನ್ನದ್ದೀನ ಇಂದಲ್ಲಾಹಿಲ್ ಇಸ್ಲಾಂ" (3:20).

ಖಂಡಿತವಾಗಿಯೂ, ದೇವನ ಸಂಬಂಧಿಸಿ ಯಥಾರ್ಥ ಜ್ಞಾನ ಪ್ರದಾನ ಮಾಡುವ ಹಾಗೂ ದೈವೋಪಾಸನೆಗಾಗಿ ಶ್ರೇಷ್ಠ ಮಾರ್ಗ ತೋರಿಸಿಕೊಡುವ ದೈವಿಕ ಮತವಾಗಿದೆ ಇಸ್ಲಾಂ.

"ಫಿತ್ರತಲ್ಲಾಹಿಲ್ಲತೀ ಫತರನ್ನಾಸ ಅಲೈಹಾ... ದ್ಜಾಲಿಕದ್ದೀನುಲ್ ಕಯ್ಯಿಮು" (30:31).

ದೇವನು ಮನುಷ್ಯನನ್ನು ಯಾವ ಸ್ವಭಾವದಲ್ಲಿ ಸೃಷ್ಟಿಸಿರುವನೋ, ಆ ಶುದ್ಧ ಸ್ವಭಾವದಲ್ಲಿ ತದ್ರೂಪವಾಗಿ ನಿಕ್ಷಿಪ್ತವಾಗಿರುವ ಮತ... ಅದೇ ಆಗಿದೆ ಯಥಾರ್ಥ ಮತ.

ಎಂದರೆ, ಮನುಷ್ಯ ಸ್ವಭಾವ ಇಸ್ಲಾಮಿಕ ಆದರ್ಶಕ್ಕೆ ಅನುಗುಣವಾಗಿಯೇ ಇದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಮನುಷ್ಯನು ತನ್ನ ಸಕಲ ಶಕ್ತಿಗಳನ್ನೂ ಬುದ್ಧಿಯನ್ನೂ ದೈವಾನುರಾಗದಲ್ಲೂ ದೈವಹಿತಾನುಸರಣೆಯಲ್ಲೂ ದೈವೋಪಾಸನೆಯಲ್ಲೂ ವ್ಯಯಿಸಬೇಕೆಂದು ಸೃಷ್ಟಿಕರ್ತನು ಉದ್ದೇಶಿಸಿದ್ದಾನೆ. ಆದ್ದರಿಂದ ಅವನು ಇಸ್ಲಾಮಿಕ ಆದರ್ಶಕ್ಕೆ ಅನುರೂಪವಾದ ಶಕ್ತಿ ಸಾಮರ್ಥ್ಯಗಳನ್ನು ಮನುಷ್ಯನಿಗೆ ನೀಡಿರುವನು.

ಪ್ರಸ್ತುತ ದೈವಿಕ ವಚನಗಳ ಸವಿಸ್ತಾರವಾದ ವ್ಯಾಖ್ಯಾನ ನೀಡಲು ಇಲ್ಲಿ ಅವಕಾಶವಿಲ್ಲ. ಒಂದನೆಯ ಪ್ರಶ್ನೆಯ ಉತ್ತರದ ಮೂರನೆಯ ಭಾಗದಲ್ಲಿ ಕೆಲ ವಿವರಣೆಯನ್ನು ಕೊಡಲಾಗಿದೆ. ಒಟ್ಟಾರೆ, ಮನುಷ್ಯನಿಗೆ ನೀಡಲಾದ ಆಂತರಿಕ ಮತ್ತು ಬಾಹ್ಯವಾದ ಅವಯವಗಳೂ ಬೋಧಶಕ್ತಿಗಳೂ ಎಲ್ಲವೂ ಇಸ್ಲಾಮಿಕ ಆದರ್ಶಕ್ಕೆ ಅನುಯೋಜ್ಯವೆಂಬ ವಿಚಾರ ಮಾತ್ರ ಇಲ್ಲಿ ಸಂಕ್ಷಿಪ್ತವಾಗಿ ವಿಶದೀಕರಿಸಬಹುದು. ಮನುಷ್ಯನ ಆಂತರಿಕ ಹಾಗೂ ಬಾಹ್ಯ ಶಕ್ತಿಗಳ ಕುರಿತು ಪರಿಶೋಧಿಸುವುದಾದರೆ ದೇವನನ್ನು ಅರಿಯಲಿಕ್ಕೂ ಆರಾಧಿಸಲಿಕ್ಕೂ ಪ್ರೀತಿಸಲಿಕ್ಕೂ ಅವೆಲ್ಲಾ ಪ್ರಯೋಜನಕಾರಿಯಾಗಿವೆಯೆಂದು ತಿಳಿಯಬಹುದು. ಆದ್ದರಿಂದಲೇ, ಮನುಷ್ಯನು ಐಹಿಕ ಜೀವಿತದಲ್ಲಿ ವಿವಿಧ ವ್ಯಾಪಾರಗಳಲ್ಲೂ ಪರಿಶ್ರಮಗಳಲ್ಲೂ ನಿರತನಾಗಿ ಏನೆಲ್ಲಾ ಸುಖ ಸೌಕರ್ಯಗಳನ್ನು ಪಡೆದರೂ ದೇವನಿಂದ ಹೊರತು ಇನ್ನಾವುದರಲ್ಲೂ ಅವನಿಗೆ ಆ ಯಥಾರ್ಥ ಸುಖವನ್ನು ಅನುಭವಿಸಲಾಗುವುದಿಲ್ಲ. ಕೋಟ್ಯಾಧೀಶನೋ, ವರ್ತಕಾಗ್ರಣಿಯೋ, ಮಂತ್ರಿ ಪುಂಗವನೋ, ರಾಜಾಧಿರಾಜನೋ, ಮಹಾದಾರ್ಶನಿಕನೋ ಆಗಿದ್ದರೂ ಸಹ ಅವನು ಲೌಕಿಕ ಬಂಧಗಳಲ್ಲಿ ಸಿಲುಕಿ ಕೊನೆಗೆ ದು:ಖಾರ್ತನಾಗಿ ಜೀವಿತದಲ್ಲಿ ಜಿಗುಪ್ಸೆಗೊಳ್ಳುತ್ತಾನೆ. ಸ್ವೇಚ್ಛೆಗಳಿಗೆ ವಶಗತನಾಗಿ ಪ್ರಪಂಚಾನುರಾಗದಲ್ಲಿ ಲೀನನಾಗುವ ನಿಮಿತ್ತ ಅವನ ಅಂತ:ಕರಣ ಅವನನ್ನು ಶಪಿಸುತ್ತದೆ. ಐಹಿಕ ವ್ಯವಹಾರಗಳ ವಿಜಯ ಪ್ರಾಪ್ತಿಗಾಗಿ ಅವನು ಕೈಗೊಂಡ ದುರ್ನೀತಿ, ವಂಚನೆ, ಅಕ್ರಮ ಮೊದಲಾದ ದುಷ್ಕರ್ಮಗಳನ್ನು ಅವನ ಮನ:ಸಾಕ್ಷಿ ಅನುಕೂಲಿಸದೆ ಅವನನ್ನು ಹಳಿಯುತ್ತದೆ.

ಪ್ರಸ್ತುತ ವಿಷಯವನ್ನು ಬೇರೊಂದು ರೀತಿಯಲ್ಲಿ ಮನಗಾಣಬಹುದು. ಒಂದು ಜೀವಿಗೆ ಪರಮಾವಧಿ ಮಾಡಲು ಸಾಧ್ಯವಿರುವ ಕೆಲಸವನ್ನು ಅದು ಮಾಡಿ ಅದಕ್ಕಿಂತ ಮಿಗಿಲಾಗಿ ಏನೂ ಮಾಡಲು ಅಸಮರ್ಥವೆಂದಾದರೆ, ಆ ಅಂತಿಮ ಕಾರ್ಯವೇ ಅದರ ಜೀವಿತದ ಪರಮ ಪ್ರಯೋಜನವೆಂದು ತಿಳಿಯಬೇಕಾಗಿದೆ. ಉದಾಹರಣೆಗಾಗಿ, ಒಂದು ಎತ್ತಿನ ಪರಮ ಪ್ರಯೋಜನ ನೆಲವನ್ನು ಉಳುವುದು ಯಾ ನೀರೆತ್ತುವುದು ಯಾ ಭಾರವೆಳೆಯುವುದಾಗಿದೆ. ಇದಕ್ಕಿಂತ ಮಿಗಿಲಾದ ಶಕ್ತಿ ಅದಕ್ಕಿರುವುದಿಲ್ಲ. ಆದ್ದರಿಂದ ಎತ್ತಿನ ಜೀವಿತದಿಂದ ಲಭ್ಯವಾಗುವ ಪರಮ ಪ್ರಯೋಜನ ಮೇಲೆ ಹೇಳಿದ್ದೇ ಆಗಿದೆ. ಆದರೆ ಮನುಷ್ಯನ ಶಕ್ತಿಗಳಲ್ಲಿ ಅತ್ಯುತ್ಕೃಷ್ಟ ಶಕ್ತಿ ಯಾವುದೆಂದು ಪರಿಶೋಧಿಸುವುದಾದರೆ, ಅದು ಸರ್ವೋನ್ನತನಾದ ಸೃಷ್ಟಿಕರ್ತನನ್ನು ಅರಸುವ ಬೋಧಶಕ್ತಿಯೆಂದು ಕಾಣಬಹುದು. ಈ ಶಕ್ತಿ ಅವನನ್ನು, ತನಗಾಗಿ ಏನನ್ನೂ ಬಾಕಿಯಿರಿಸದೆ ಸರ್ವವನ್ನೂ ದೇವನಿಗಾಗಿ ಅರ್ಪಿಸಿಕೊಂಡು ಸಂಪೂರ್ಣವಾಗಿ ದೈವಾನುರಾಗದಲ್ಲಿ ಲೀನವಾಗಲಿಕ್ಕೆ ಪ್ರಚೋದಿಸುತ್ತದೆ. ತಿನ್ನುವುದು, ನಿದ್ರಿಸುವುದು ಇತ್ಯಾದಿ ಶಾರೀರಿಕ ಚಟುವಟಿಕೆಗಳಲ್ಲಿ ಅವನು ಇತರ ಜೀವಿಗಳಿಗೆ ತುಲ್ಯನು. ಕೆಲವು ಜೀವಿಗಳು ಚಾತುರ್ಯದಲ್ಲಿ ಅವನಿಗಿಂತ ಮಿಗಿಲೆನಿಸುತ್ತವೆ. ಜೇನು ನೊಣ ಹಲವು ವಿಧದ ಹೂಗಳ ರಸದಿಂದ ವಿಶಿಷ್ಟವಾದ ಜೇನನ್ನು ಉಂಟುಮಾಡುತ್ತದೆ. ಆದರೆ ಬುದ್ಧಿಜೀವಿಯಾದ ಮನುಷ್ಯನಿಗೆ ಇಂದಿನ ವರೆಗೆ ಇದನ್ನು ಸಾಧಿಸಲಾಗಲಿಲ್ಲ. ಹೀಗೆ ಮನುಷ್ಯನ ಪರಿಪೂರ್ಣತೆ ಇಂತಹ ವಿಷಯಗಳಲ್ಲಿ ಅಲ್ಲ, ದೈವೈಕ್ಯಪ್ರಾಪ್ತಿಯಲ್ಲಿ ಮಾತ್ರವೆಂದು ಕಾಣಬಹುದು. ಒಟ್ಟಿನಲ್ಲಿ, ಮನುಷ್ಯನ ಹೃದಯ ಕವಾಟವನ್ನು ದೇವನಿಗಾಗಿ ತೆರೆದಿರಿಸುವುದೇ ಅವನ ಜೀವಿತದ ಯಥಾರ್ಥ ಉದ್ದೇಶವಾಗಿದೆ.

### ಉದ್ದೇಶ ಸಿದ್ಧಿಗಾಗಿ ಅಷ್ಟ ಮಾರ್ಗಗಳು

ಈ ಉದ್ದೇಶ ಸಾಧಿಸುವುದು ಹೇಗೆ, ಅದರ ಮಾರ್ಗಗಳು ಯಾವುವು ಎಂಬ ವಿಷಯದ ಕುರಿತು ಪ್ರತಿಪಾದಿಸೋಣ. ಈ ಗುರಿ ಸಾಧನೆಯ ಪ್ರಥಮ ಹಾಗೂ ಪ್ರಧಾನ ಮಾರ್ಗವೇನೆಂದರೆ ದೇವನನ್ನು ಸರಿಯಾದ ರೀತಿಯಲ್ಲಿ ಅರಿಯುವುದು ಮತ್ತು ಸತ್ಯದೇವನಲ್ಲಿ ವಿಶ್ವಾಸವಿರಿಸುವುದು. ಯಾರಾದರೂ ಪ್ರಥಮ ಹೆಜ್ಜೆಯಲ್ಲೇ ತಪ್ಪಿ ಬಿದ್ದು, ಪಕ್ಷಿಯನ್ನೋ ಮೃಗವನ್ನೋ ಮನುಷ್ಯ ಸಂತಾನವನ್ನೋ, ಮೂಲ ವಸ್ತುಗಳನ್ನೋ ದೈವವೆಂದು ನಂಬಿದ ಪಕ್ಷದಲ್ಲಿ ಅವನ ಎರಡನೆಯ ಹೆಜ್ಜೆ ಸರಿಯಾದ ಪಥದಲ್ಲಿ ಸಾಗುವುದೆಂದು ಭಾವಿಸುವುದು ಹೇಗೆ? ಸತ್ಯದೇವನು ಸರಿಯಾದ ರೀತಿಯಲ್ಲಿ ತನ್ನನ್ನು ಹುಡುಕುವವರಿಗೆ ಸಹಾಯ ಮಾಡುತ್ತಾನೆ. ಆದರೆ ಜೀವಚಲನವಿಲ್ಲದ ಮೃತದೈವ ಮೃತಪ್ರಾಯ ಸೇವಕರಿಗೆ ಹೇಗೆ ಸಹಾಯ ಮಾಡಬಲ್ಲುದು? ಈ ವಿಚಾರವನ್ನು ಪವಿತ್ರ ಖುರ್‌ಆನ್ ಉಪಮಾ ರೂಪದಲ್ಲಿ ಹೀಗೆ ವಿವರಿಸುತ್ತದೆ:

"ಲಹೂ ದಅ್‌ವತುಲ್ ಹಕ್ಕಿ–ವಲ್ಲದೀನ ಯದ್‌ಊನ ಮಿನ್ ದೂನಿಹೀ ಲಾ ಯಸ್ತಜೀಬೂನ ಲಹುಂ ಬಿಶೈಇನ್ ಇಲ್ಲಾ ಕಬಾಸಿತಿ ಕಫ್ಫೈಹಿ ಇಲಲ್‌ಮಾಇ ಲಿಯಬ್ಲುಗ ಫಾಹು ವಮಾ ಹುವ ಬಿಬಾಲಿಗಿಹೀ–ವಮಾ ದುಆಉಲ್ ಕಾಫಿರೀನ ಇಲ್ಲಾ ಫೀ ಲಲಾಲ್" (13:15).

ಸರ್ವಶಕ್ತನಾದ ಸತ್ಯದೇವನೇ ಯಥಾರ್ಥದಲ್ಲಿ ಪ್ರಾರ್ಥನೆಗರ್ಹನು; ಅವನ ಹೊರತು ಅನ್ಯರನ್ನು ಕರೆದು ಪ್ರಾರ್ಥಿಸುವವರಿಗೆ ಆ ಪ್ರಾರ್ಥಿತರು ಯಾವ ಉತ್ತರವನ್ನೂ ಕೊಡುವುದಿಲ್ಲ. ಅವರ ಸ್ಥಿತಿ, ತನ್ನ ಬಾಯಿಗೆ ನೀರು ಬಂದು ಬೀಳಲಿಕ್ಕಾಗಿ ಕೈಚಾಚಿ ಮೊರೆಯಿಡುವವನಂತಹದ್ದಾಗಿದೆ. ಆದರೆ ನೀರು ಅವನ ಬಾಯಿಯನ್ನು ಸೇರುವುದೋ? ಖಂಡಿತವಾಗಿಯೂ ಇಲ್ಲ. ಯಾರು ಸತ್ಯಸ್ವರೂಪನಾದ ದೇವನನ್ನು ಅರಿಯುವುದಿಲ್ಲವೋ ಅವರ ಪ್ರಾರ್ಥನೆಗಳೆಲ್ಲ ವ್ಯರ್ಥ.

ಎರಡನೆಯ ಮಾರ್ಗವೇನೆಂದರೆ, ದೇವನ ಪರಿಪೂರ್ಣವಾದ ಸೌಂದರ್ಯ ಮಹಾತ್ಮೆಯ ಕುರಿತು ತಿಳಿದಿರುವುದು. ಸೌಂದರ್ಯವು ಸ್ವಾಭಾವಿಕವಾಗಿ ಹೃದಯವನ್ನು ಆಕರ್ಷಿಸಲಿಕ್ಕೂ ಪ್ರೀತಿಯನ್ನು ಅಂಕುರಿಸಲಿಕ್ಕೂ ಪರ್ಯಾಪ್ತವಾಗಿದೆ. ದೇವನ ಸೌಂದರ್ಯ ಮಹಿಮೆ ಅವನ ಏಕತ್ವದಲ್ಲೂ ಪ್ರಭಾವದಲ್ಲೂ ಪಾವನತೆಯಲ್ಲೂ ಇತರ ಉತ್ಕೃಷ್ಟ ಗುಣಗಳಲ್ಲೂ ಗೋಚರಿಸುತ್ತದೆ. ಈ ವಿಷಯದ ಕುರಿತು ಪವಿತ್ರ ಖುರ್‌ಆನ್ ನಮ್ಮ ಗಮನವನ್ನು ಹೀಗೆ ಸೆಳೆಯುತ್ತದೆ:

"ಕುಲ್ ಹುವಲ್ಲಾಹು ಅಹದ್– ಅಲ್ಲಾಹುಸ್ಸಮದ್-ಲಮ್ ಯಲಿದ್ ವಲಮ್ ಯೂಲದ್-ವಲಮ್ ಯಕುನ್‌ಲ್ಲಹು ಕುಫುವನ್ ಅಹದ್." (ಅಧ್ಯಾಯ 112).

ದೇವನು ತತ್ವದಲ್ಲೂ ಗುಣದಲ್ಲೂ ಮಹಾತ್ಮೆಯಲ್ಲೂ ಏಕಮಾತ್ರನಾಗಿದ್ದಾನೆ. ಅವನ ಪಾಲುಗಾರನಾಗಿ ಯಾರೂ ಇಲ್ಲ. ಸರ್ವವೂ ಅವನ ಸಹಾಯವನ್ನು ಆಶ್ರಯಿಸಿಕೊಂಡಿವೆ. ಪ್ರತಿಯೊಂದು ಅಣುವೂ ಅವನಿಂದ ಜೀವವನ್ನು ಪಡೆಯುತ್ತದೆ. ಅವನು ಎಲ್ಲಾ ವಸ್ತುಗಳಿಗೂ ಆಶ್ರಯದಾತನು. ಅವನು ಯಾರನ್ನೂ ಆಶ್ರಯಿಸಿಕೊಂಡಿಲ್ಲ ಅವನು ಯಾರ ಮಗನೂ ಅಲ್ಲ; ಯಾರ ಪಿತನೂ ಅಲ್ಲ. ಅವನಿಗೆ ಸರಿಸಾಟಿಯಾಗಿ ಯಾರೂ ಇಲ್ಲ.

ಪವಿತ್ರ ಖುರ್‌ಆನ್ ಇಂತಹ ವಾಕ್ಯಗಳಿಂದ ದೇವನ ಪರಿಪೂರ್ಣ ಸೌಂದರ್ಯ ಮಹಿಮೆಯನ್ನೂ ಪ್ರಭಾವವನ್ನೂ ವರ್ಣಿಸಿಕೊಂಡು ಮನುಷ್ಯರ ಗಮನವನ್ನು ಸರ್ವಶಕ್ತನಾದ ಏಕದೇವನೆಡೆಗೆ ತಿರುಗಿಸಿ, ಸಂಕಲ್ಪ ದೈವಗಳೆಲ್ಲಾ ಮೃತಪ್ರಾಯ. ದುರ್ಬಲ, ನಿರ್ದಯ ಮತ್ತು ಶಕ್ತಿಹೀನವೆಂದು ಬೋಧಿಸುತ್ತದೆ.

ಮೂರನೆಯ ಮಾರ್ಗವೇನೆಂದರೆ, ದೇವನ ಗುಣ ಮಹಾತ್ಮೆಗಳ ಮತ್ತು ಅನುಗ್ರಹಗಳ ಕುರಿತು ತಿಳಿಯುವುದು. ಸೌಂದರ್ಯ ಮತ್ತು ಸದ್ಗುಣ ಸ್ನೇಹವನ್ನು ಉತ್ಪಾದಿಸುವ ಎರಡು ಪ್ರೇರಕಗಳಾಗಿವೆ. ದೇವನ ಅನುಗ್ರಹಕರ ಗುಣಮಹಾತ್ಮೆಗಳ ಒಂದು ಸಂಕ್ಷಿಪ್ತ ರೂಪವನ್ನು ಖುರ್‌ಆನಿನ ಪ್ರಥಮಾಧ್ಯಾಯವಾದ ಸೂರಃ ಫಾತಿಹಾದಲ್ಲಿ ಕಾಣಬಹುದು, ಅದು ಹೀಗಿದೆ:

"ಅಲ್ ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್- ಅರ್ರಹ್ಮಾನಿರ್ರಹೀಂ – ಮಾಲಿಕಿ ಯೌಮಿದ್ದೀನ್" (1:2-4).

ಸಕಲ ಲೋಕಗಳ ಸೃಷ್ಟಿಕರ್ತ ಮತ್ತು ರಕ್ಷಕ ನಾದ ದೇವನಿಗೆ ಸರ್ವಸ್ತೋತ್ರಗಳು. ಅವನ ದಯೆ ಮತ್ತು ಅನುಗ್ರಹ ನಿಸ್ಸೀಮ. ಅವನು ಪ್ರತಿ ಫಲ ನೀಡಲ್ಪಡುವ ದಿನದ ಸರ್ವಾಧಿಪತಿಯು.

ನಾಸ್ತಿಯಾದ ಅವಸ್ಥೆಯಿಂದ ದೇವನು ಮನುಷ್ಯ ರನ್ನೂ ಇತರ ಜೀವಿಗಳನ್ನೂ ಸೃಷ್ಟಿಸಿ ಯಥೋಚಿತ ವಾಗಿ ಪರಿಪಾಲಿಸುತ್ತಲೂ ರಕ್ಷಿಸುತ್ತಲೂ ಇದ್ದಾನೆಂಬು ದರಲ್ಲಿ ಅವನ ಅನುಗ್ರಹಪೂರ್ಣತೆ ಸೆಲೆಗೊಳ್ಳುತ್ತದೆ. ಅವನ ಸೀಮಾತೀತ ಕರುಣಾನುಗ್ರಹಗಳು ಸೃಷ್ಟಿಗಳಲ್ಲಿ ಪ್ರಕಟಗೊಳ್ಳಬೇಕಾದುದು ಅವಶ್ಯ. ದೇವನ ಈ ಅನು ಗ್ರಹಪೂರ್ಣತೆಯ ಕುರಿತು ಪವಿತ್ರ ಖುರ್‌ಆನ್ ಹಲವು ಬಾರಿ ನೆನಪು ಮಾಡಿ ಕೊಟ್ಟಿದೆ. ಒಂದೆಡೆಯಲ್ಲಿ ಅದು ಹೀಗೆನ್ನುತ್ತದೆ:

"ವ ಇನ್ ತಉದ್ದೂ ನಿಅ್‌ಮತಲ್ಲಾಹಿ ಲಾ ತುಹ್‌ಸಾಹಾ" (14:35).

ದೇವನ ಅನುಗ್ರಹಗಳನ್ನು ನೀವು ಲೆಕ್ಕ ಹಾಕಲು ಪ್ರಯತ್ನಿಸುವುದಾದರೆ ನಿಮಗೆ ಎಂದಿಗೂ ಅದು ಸಾಧ್ಯವಿಲ್ಲ.

ಜೀವಿತೋದ್ದೇಶ ಸಿದ್ಧಿಗಾಗಿ ದೇವನು ನಿರ್ದೇಶಿ ಸಿದ ನಾಲ್ಕನೆಯ ಮಾರ್ಗ ಪ್ರಾರ್ಥನೆಯಾಗಿದೆ. ಅವನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ:

"ಉದ್‌ಊನೀ ಅಸ್ತಜಿಬ್ಲಕುಂ" (40:61).

ನೀವು ನನ್ನೊಡನೆ ಪ್ರಾರ್ಥಿಸಿರಿ, ನಾನು ನಿಮಗೆ ಉತ್ತರವೀಯುವವನು.

ಮನುಷ್ಯನಿಗೆ ದೇವನನ್ನು ಅವನ ಸಹಾಯವಿಲ್ಲದೆ ತನ್ನ ಸ್ವಂತ ಶಕ್ತಿ ಮೂಲಕ ಗಳಿಸಲು ಸಾಧ್ಯವಿಲ್ಲವಾದು ದರಿಂದ ಪ್ರಾರ್ಥಿಸುತ್ತಾ ಇರಲಿಕ್ಕಾಗಿ ಪವಿತ್ರ ಖುರ್ ಆನ್ ಪದೇ ಪದೇ ಬೋಧಿಸುತ್ತದೆ.

ಗುರಿ ಸಾಧನೆಯ ಐದನೆಯ ಮಾರ್ಗ 'ಮುಜಾ ಹಿದಃ' ಅಥವಾ 'ಧರ್ಮ ಕಾರ್ಯಕ್ಕಾಗಿ ಪ್ರಯತ್ನ' ವಾಗಿದೆ. ಎಂದರೆ, ತನ್ನ ಸಂಪಾದನೆಯನ್ನು ದೈವ ಮಾರ್ಗದಲ್ಲಿ ವ್ಯಯಿಸಿಕೊಂಡು, ಸ್ವಶಕ್ತಿಗಳನ್ನು ದೈವ ಪಥದಲ್ಲಿ ವಿನಿಯೋಗಿಸಿಕೊಂಡು, ಜೀವವನ್ನು ದೈವ ನಾಮದಲ್ಲಿ ಅರ್ಪಿಸಿಕೊಂಡು, ಬುದ್ಧಿಯನ್ನೂ ಜ್ಞಾನ ವನ್ನೂ ದೈವಿಕ ಧರ್ಮದ ಸೇವೆಗಾಗಿ ಉಪಯೋಗಿಸಿ ಕೊಂಡು ಆ ಸರ್ವೈಕ್ಯಕರ್ತನನ್ನು ಪಡೆಯಲು ಪ್ರಯತ್ನಿ ಸುವುದು.

ಖುರ್‌ಆನಿನಲ್ಲಿ ಒಂದೆಡೆ ಹೀಗೆ ಹೇಳಲಾಗಿದೆ:

"ಜಾಹಿದೂ ಬಿ ಅವಮ್ವಾಲಿಕುಂ ವ ಅನ್‌ಫುಸಿ ಕುಂ ಫೀ ಸಬೀಲಿಲ್ಲಾಹಿ" (9:41).

ನೀವು ನಿಮ್ಮ ಧನದಿಂದಲೂ ಜೀವದಿಂದಲೂ ನಿಮ್ಮ ಸರ್ವವಿಧ ಶಕ್ತಿಗಳಿಂದಲೂ ದೈವಮಾರ್ಗ ದಲ್ಲಿ ವಿಶೇಷ ಪ್ರಯತ್ನ ಮಾಡಿರಿ.

"ವ ಮಿಮ್ಮಾ ರಸಕ್ನಾಹುಂ ಯುನ್‌ಫಿಕೂನ್" (2:4).

ನಾವು ಅವರಿಗೆ ನೀಡಿದುವನ್ನು ಎಂದರೆ ಬುದ್ಧಿ ಶಕ್ತಿ, ಜ್ಞಾನ, ವಿವೇಚನೆ, ವಿದ್ಯೆ ಮುಂತಾದುವ ನ್ನೆಲ್ಲಾ ನಮ್ಮ ದಾರಿಯಲ್ಲಿ ವಿನಿಯೋಗಿಸುವವರು ವಿಜಯಿಗಳು.

"ವಲ್ಲದೀನ ಜಾಹದೂ ಫೀನಾ ಲನಹ್ದಿಯನ್ನ ಹುಂ ಸುಬುಲನಾ" (29:70).

ನಮ್ಮ ದಾರಿಯಲ್ಲಿ ಸರ್ವವಿಧದಲ್ಲೂ ಪರಿ ಶ್ರಮಿಸುವವರಿಗೆ ನಾವು ನಮ್ಮ ಮಾರ್ಗಗಳನ್ನು ತೋರಿಸಿಕೊಡುವೆವು.

ಗುರಿ ಸಾಧನೆಯ ಆರನೆಯ ಮಾರ್ಗ ಸ್ಥಿರನಿಷ್ಠೆ ಯಾಗಿದೆ. ಎಂದರೆ, ಸತ್ಯಧರ್ಮಾಚರಣೆಯಲ್ಲಿ ದಣಿವು, ಆಯಾಸ ತೋರಿಸದೆ, ಯಾವುದೇ ಕಠಿಣ ಪರೀಕ್ಷೆಯಲ್ಲೂ ಭೀರುತ್ವ ತೋರ್ಪಡಿಸದೆ ದೃಢಚಿತ್ತದಿಂದ ವರ್ತಿಸಬೇ ಕಾಗಿದೆ. ಇದರ ಕುರಿತು ದೇವನು ಹೀಗೆ ಹೇಳುತ್ತಾನೆ:

"ಇನ್ನಲ್ಲದೀನ ಕಾಲೂ ರಬ್ಬುನಲ್ಲಾಹು ಸುಮ್ಮ ಸ್ತಕಾಮೂ ತತನಸ್ಸಲು ಅಲೈಹಿಮುಲ್ ಮಲಾ ಇಕತು ಅಲ್ಲಾ ತಖಾಫೂ ವಲಾ ತಹ್‌ಸನೂ ವ ಅಬ್ಶಿರೂ ಬಿಲ್‌ಜನ್ನತಿಲ್ಲತೀ ಕುನ್ತುಂ ತೂಅ ದೂನ್–ನಹ್ನು ಔಲಿಯಾಉಕುಂ ಫಿಲ್ ಹಯಾ ತಿದ್ದುನ್ಯಾ ವ ಫಿಲ್ ಆಖಿರತಿ" (41:31, 32).

'ನಮ್ಮ ರಕ್ಷಕ ಸತ್ಯದೇವನಾದ ಅಲ್ಲಾಹನು' ಎಂದು ಹೇಳಿ ಸ್ಥಿರನಿಷ್ಠೆ ಪಾಲಿಸುವವರಿಗೆ, ಎಂದರೆ ಎಲ್ಲಾ ವಿಧ ಪರೀಕ್ಷಾ ಘಟ್ಟಗಳಲ್ಲೂ ಸಂಕಷ್ಟಾವಸ್ಥೆಗಳಲ್ಲೂ ದೃಢಚಿತ್ತದಿಂದ ವರ್ತಿಸುವವರಿಗೆ ದೇವದೂತರು ಇಳಿದು ಬಂದು ಹೇಳುವರು:

ನೀವು ಹೆದರಬೇಡಿರಿ; ಕೊರಗುವುದೂ ಬೇಡ. ಬದಲಿಗೆ, ನೀವು ಸಂತೋಷಭರಿತರಾಗಿರಿ. ನಿಮಗೆ ವಾಗ್ದಾನವಿತ್ತ ಸ್ವರ್ಗಸುಖಕ್ಕೆ ನೀವು ಹಕ್ಕುದಾರರಾಗಿರುವಿರಿ. ನಾವು ಇಹಲೋಕ ಜೀವಿತದಲ್ಲೂ ಪರಲೋಕ ಜೀವಿತದಲ್ಲೂ ನಿಮ್ಮ ಮಿತ್ರರಾಗಿದ್ದೇವೆ.

ಧರ್ಮಾಚರಣೆಯಲ್ಲಿ ಸ್ಥಿರನಿಷ್ಠೆ ದೇವನ ಪ್ರೀತಿಗೆ ಕಾರಣವಾಗುತ್ತದೆಯೆಂದು ಈ ವಚನಗಳು ನಮಗೆ ಬೋಧಿಸುತ್ತವೆ. ವಿಶ್ವಾಸ ಸ್ಥೈರ್ಯ ಪವಾಡಕ್ಕಿಂತ ಮಿಗಿಲೆಂಬುದು ವಾಸ್ತವಿಕ. ನಾನಾ ಕಡೆಗಳಿಂದ ಪ್ರತಿಕೂಲತೆಗಳೂ ಕ್ಲೇಶಗಳೂ ಸುತ್ತುವರಿದು, ದೈವಪಥದಲ್ಲಿ ಜೀವಕ್ಕೂ ಮಾನಕ್ಕೂ ಸಂಪತ್ತಿಗೂ ಹಾನಿಯುಂಟಾಗಿ ಅಸಮಾಧಾನಕರವಾದ ಪರಿಸ್ಥಿತಿಯಲ್ಲಿದ್ದುಕೊಂಡು, ಆಶ್ವಾಸದಾಯಕವಾದ ಆತ್ಮದರ್ಶನವೂ ಪ್ರಕಟನೆಯೂ ದೇವನ ಪರೀಕ್ಷೆಯೆಂಬಂತೆ ಸ್ಥಗಿತಗೊಂಡು, ಭಯಂಕರವಾದ ಪರಿಸ್ಥಿತಿಗಳನ್ನು ಅನುಭವಿಸುವ ಸಂದರ್ಭಗಳಲ್ಲೂ ಅಧೈರ್ಯವನ್ನು ತೋರಿಸದೆ, ಹೇಡಿಯಂತೆ ಹಿಮ್ಮೆಟ್ಟದೆ, ವಿಶ್ವಾಸದಲ್ಲಿ ಬಲಗುಂದದೆ, ಸತ್ಯನಿಷ್ಠೆ ಮತ್ತು ಸ್ಥಿರಚಿತ್ತತೆಗೆ ಕುಂದುಂಟಾಗದೆ, ಮಾನಹಾನಿಯುಂಟಾದರೂ ಅಸಂತುಷ್ಟಿ ತೋರಿಸದೆ ಸ್ವಂತ ನಿಲುವಿಗಾಗಿ ಪರರ ಸಹಾಯವನ್ನು ಪ್ರತೀಕ್ಷಿಸದೆ, ದೇವನ ಆಶ್ವಾಸ ವಚನಗಳನ್ನಾಗಲಿ ಆಶಿಸದೆ, ಬಲಹೀನತೆಯಲ್ಲೂ ನಿಸ್ಸಹಾಯಕತೆಯಲ್ಲೂ ಮನಃಚಾಂಚಲ್ಯವನ್ನು ತೋರಿಸದೆಯೂ ಅದೃಷ್ಟವನ್ನು ಹಳಿಯದೆಯೂ ಎದೆ ಎದೆ ಬಡಿದುಕೊಳ್ಳದೆಯೂ ದೈವಾಭೀಷ್ಟದಲ್ಲಿ ಸಂತೃಪ್ತನಾಗಿದ್ದುಕೊಂಡು ಆತ್ಮತ್ಯಾಗದ ಸನ್ನದ್ಧತೆಯಲ್ಲಿ ಮುಂದಕ್ಕೆ ಸಾಗುವುದೇ ಪರಿಪೂರ್ಣ ಹಾಗೂ ಪರಮ ಸ್ಥಿರಭಕ್ತಿಯಾಗಿದೆ. ಹೀಗೆ ಬಹುಮುಖ ಪರೀಕ್ಷಾ ಘಟ್ಟವನ್ನು ವಿಜಯಕರವಾಗಿ ಎದುರಿಸುವ ಸ್ಥಿರಭಕ್ತಿ ದೈವದರ್ಶನಕ್ಕೆ ಪರ್ಯಾಪ್ತವಾಗುತ್ತದೆ. ಈ ಮಹತ್ತಾದ ಸ್ಥಿರೋತ್ಸಾಹದ ಆಧ್ಯಾತ್ಮಿಕ ಸೌರಭ ಪ್ರವಾದಿಗಳ, ಸತ್ಯಸಂಧರಾದ ಮಹಾ ಪುರುಷರ ಮತ್ತು ಹುತಾತ್ಮರಾದ ಮಹಾತ್ಮರ ಮಣ್ಣಿನಿಂದ ಈಗಲೂ ಬೀಸುತ್ತಿದೆ. ಈ ಸ್ಥಿರಭಕ್ತಿಯೇ ಸೂರಃ ಫಾತಿಹಾದ ಈ ಪ್ರಾರ್ಥನಾ ವಾಕ್ಯದಲ್ಲಿ ಹೀಗೆ ಸೂಚಿಸಲ್ಪಟ್ಟಿದೆ:

"ಇಹ್ದಿನ ಸ್ಸಿರಾತಲ್ ಮುಸ್ತಕೀಮ ಸಿರಾತ್ವಲ್ಲದೀನ ಅನ್‌ಅಮ್ತ ಅಲೈಹಿಂ"

ಓ ದೇವಾ, ಯಾವ ದಾರಿಯನ್ನು ಅನುಸರಿಸುವುದರಿಂದ ನಿನ್ನ ಅನುಗ್ರಹ ಮತ್ತು ಪ್ರೀತಿ ಪ್ರಾಪ್ತವಾಗುವುದೋ, ಆ ಸ್ಥಿರತೆಯ ಮಾರ್ಗದಲ್ಲಿ ನೀನು ನಮ್ಮನ್ನು ನಡೆಸು.

ಇದೇ ಸಂಗತಿಯನ್ನು ಪವಿತ್ರ ಖುರ್‌ಆನಿನ ಬೇರೊಂದು ಪ್ರಾರ್ಥನಾ ವಾಕ್ಯದಲ್ಲಿ ಸಹ ಹೀಗೆ ಸೂಚಿಸಲಾಗಿದೆ:

"ರಬ್ಬನಾ ಅಫ್ರಿಗ್ ಅಲೈನಾ ಸಬ್ರನ್ ವತವಫ್ಫನಾ ಮುಸ್ಲಿಮೀನ್" (7:127).

ಓ ದೇವಾ, ಕಷ್ಟಾವಸ್ಥೆಯಲ್ಲಿ ಸಹನೆಯುಂಟಾಗಲಿಕ್ಕೆ ನೀನು ನಮಗೆ ಮನಃಶಾಂತಿಯನ್ನು ಪ್ರದಾನ ಮಾಡಿ, ನಮ್ಮ ಮರಣ ಇಸ್ಲಾಮಿನಲ್ಲಿ, ಎಂದರೆ ದೈವಹಿತಾನುಸರಣೆಯಲ್ಲಿ ಆಗಲಿಕ್ಕೆ ನಮ್ಮನ್ನು ಅನುಗ್ರಹಿಸು.

ದುಃಖ ಮತ್ತು ಸಂಕಷ್ಟಕಾಲಗಳಲ್ಲಿ ದೇವನು ತನ್ನ ಪ್ರೀತಿಯ ಭಕ್ತರ ಹೃದಯದಲ್ಲಿ ಒಂದು ತೇಜಸ್ಸನ್ನು ಸೃಷ್ಟಿಸುವನು. ಈ ದಿವ್ಯ ಪ್ರಕಾಶದಿಂದ ಪ್ರಶೋಭಿತರಾಗುವುದರಿಂದ ಅವರು ಸಕಲ ವಿಧ ಸಂಕಷ್ಟಗಳನ್ನು ಶಾಂತಚಿತ್ತದಿಂದ ಎದುರಿಸುತ್ತಾರೆ. ದೈವಮಾರ್ಗದಲ್ಲಿ ತಮ್ಮ ಪಾದಗಳಲ್ಲಿ ಸಿಲುಕುವ ಸಂಕಲೆಗಳನ್ನು ಅವರು ಧರ್ಮನಿಷ್ಠೆಯ ಮಾಧುರ್ಯದಿಂದ ಚುಂಬಿಸುತ್ತಾರೆ. ದೈವಭಕ್ತನಿಗೆ ಆಪತ್ತುಗಳೂ ಸಂಕಷ್ಟಗಳೂ ಬಂದೆರಗಿ ಮೃತ್ಯುವನ್ನು ಅಭಿಮುಖವಾಗಿ ಕಾಣುವಾಗ, ಆತನು ತನ್ನ ಸಂರಕ್ಷಕನಾದ ದೇವನೊಡನೆ ದುಃಖ ವಿಮುಕ್ತಿಗಾಗಿ ಪ್ರಾರ್ಥಿಸುವುದಿಲ್ಲ ಆ ಸಂದರ್ಭದಲ್ಲಿ ಸಂಕಷ್ಟ ನಿವಾರಣೆ ಮತ್ತು ದುಃಖ ವಿಮೋಚನೆಗಾಗಿ ಪ್ರಾರ್ಥಿಸುವುದು ದೈವೇಚ್ಛೆಯನ್ನು ವಿಸ್ಮರಿಸುವುದಾಗಿದೆ. ಅದು ಪರಿಪೂರ್ಣವಾದ ದೈವಹಿತಾನುಸರಣೆಗೆ ವಿರುದ್ಧವಾಗಿದೆ. ಯಥಾರ್ಥ ದೈವ ಪ್ರೇಮಿ ಕಷ್ಟಾನುಭವ ಕಾಲದಲ್ಲಿ ತನ್ನ

ಹೆಜ್ಜೆಯನ್ನು ಮುಂದಕ್ಕಲ್ಲದೆ ತುಸು ಮಾತ್ರವಾದರೂ ಹಿಂದಕ್ಕಿಡುವುದಿಲ್ಲ. ಈ ಘಟ್ಟದಲ್ಲಿ ಆತನು ಜೀವವನ್ನು ತೃಣ ಸಮಾನ ಗಣಿಸಿ, ಜೀವದ ಹಂಗು ತೊರೆದು ದೈವೇಚ್ಛೆಗಾಗಿ ಸಂಪೂರ್ಣವಾಗಿ ವಿಧೇಯನಾಗಿದ್ದುಕೊಂಡು ಅವನ ಪ್ರೀತಿಯನ್ನು ಮಾತ್ರ ಕಾಂಕ್ಷಿಸುತ್ತಾನೆ. ಇಂತಹ ಭಕ್ತನ ಕುರಿತು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

"ವ ಮಿನನ್ನಾಸಿ ಮನ್‌ಯ್ಯಶ್ರೀ ನಫ್ಸಹು ಬ್ತಿಗಾಅ ಮರ್ಲಾತಿಲ್ಲಾಹಿ ವಲ್ಲಾಹು ರಊಫುನ್ ಬಿಲ್ ಇಬಾದ್" (2:208)

ದೇವನ ಪ್ರಿಯ ದಾಸನು ತನ್ನ ಜೀವವನ್ನು ದೈವಪಥದಲ್ಲಿ ಅರ್ಪಿಸಿ ಅದರ ಬದಲಿಗೆ ದೈವ ಸಂತುಷ್ಟಿಯನ್ನು ಪಡೆಯುತ್ತಾನೆ. ಇಂತಹವರೊಡನೆ ದೇವನು ವಿಶಿಷ್ಟ ರೀತಿಯಲ್ಲಿ ದಯಾದಾಕ್ಷಿಣ್ಯಯುಳ್ಳವನಾಗುತ್ತಾನೆ.

ಸಂಕ್ಷಿಪ್ತವಾಗಿ, ದೇವನನ್ನು ಪಡೆಯಲಿಕ್ಕಾಗಿ ನಮ್ಮನ್ನು ಕೊಂಡೊಯ್ಯಲು ಪರ್ಯಾಪ್ತವಾದ ದೃಢ ಭಕ್ತಿಯ ಅಥವಾ ಸ್ಥಿರತೆಯ ಮೂಲತತ್ವ ಮೇಲೆ ವಿವರಿಸಲ್ಪಟ್ಟಿದೆ. ಗ್ರಹಿಸಲು ಮನಸ್ಸುಳ್ಳವರು ಗ್ರಹಿಸಿಕೊಳ್ಳಲಿ.

ಜೀವಿತೋದ್ದೇಶ ಸಿದ್ಧಿಯ ಏಳನೆಯ ಮಾರ್ಗ ಸುಕೃತರೊಡನೆ ಒಡನಾಟ ಮತ್ತು ಅವರ ಉತ್ತಮ ಆದರ್ಶಗಳ ಅನುಕರಣೆಯಾಗಿದೆ. ಪ್ರವಾದಿಗಳ ಆಗಮನದ ಪ್ರಧಾನ ಉದ್ದೇಶಗಳಲ್ಲಿ ಒಂದು ಇದೇ ಆಗಿದೆ. ಮನುಷ್ಯನು ಸಹಜವಾಗಿ ಮೇಲ್ಪಂಕ್ತಿಯನ್ನು ಅನುಕರಿಸುವ ಸ್ವಭಾವದಿಂದ ಕೂಡಿದವನಾಗಿದ್ದಾನೆ. ಪರಿಪೂರ್ಣ ಆದರ್ಶ ಅವನಲ್ಲಿ ಸತ್ಕರ್ಮದ ಆಸಕ್ತಿಯನ್ನೂ ಉತ್ಸಾಹವನ್ನೂ ವೃದ್ಧಿಗೊಳಿಸುತ್ತದೆ. ಉತ್ಕೃಷ್ಟ ಆದರ್ಶವನ್ನು ಅನುಕರಿಸದವನು ಆಲಸಿಗನಾಗಿ, ಕ್ರಮೇಣ ಸತ್ಕರ್ಮ ಪಥದಿಂದ ದೂರ ಸರಿಯುತ್ತಾನೆ. ಆದ್ದರಿಂದಲೇ ಪವಿತ್ರ ಖುರ್‌ಆನ್ ಹೀಗೆ ಬೋಧಿಸುತ್ತದೆ:

"ಕೂನೂ ಮಅಸ್ಸಾದಿಕೀನ್" (9:119)
ನೀವು ಸಾತ್ವಿಕರ ಸಹವಾಸ ಬೆಳೆಸಿರಿ.

"ಸಿರಾತಲ್ಲದೀನ ಅನ್‌ಅಮ್ತ ಅಲೈಹಿಂ." (1:7).

ನಿಮಗೆ ಮುಂಚೆ ಅನುಗ್ರಹ ಸಿದ್ಧಿಸಿದವರ ಮಾರ್ಗವನ್ನು ಅನುಸರಿಸಿರಿ.

ಜೀವಿತೋದ್ದೇಶ ಸಿದ್ಧಿಯ ಎಂಟನೆಯ ಮಾರ್ಗ ದೇವನಿಂದ ದಿವ್ಯ ದರ್ಶನ ಹಾಗೂ ದಿವ್ಯವಾಣಿಯನ್ನು ಪಡೆಯುವುದು ಮತ್ತು ಪಾವನವಾದ ಸ್ವಪ್ನಗಳನ್ನು ದರ್ಶಿಸುವುದಾಗಿದೆ. ದೇವನೆಡೆಗೆ ಸಾಗುವ ಸಂಚಾರ ಪಥವು ಕ್ಲೇಶಕರವೂ ದುಃಖ ಪೂರ್ಣವೂ ಆದ ಗೂಢ ಮಾರ್ಗವಾದುದರಿಂದ ಆಧ್ಯಾತ್ಮಿಕ ದಾರಿಹೋಕನು ಈ ಸತ್ಪಥದಿಂದ ವ್ಯತಿಕ್ರಮಿಸಲಿಕ್ಕೆ ಯಾ ಗುರಿಸಾಧನೆಯ ಕುರಿತು ಹತಾಶನಾಗಿ ಸಂಚಾರವನ್ನು ಮುಂದುವರಿಸಿಕೊಂಡು ಹೋಗದಿರಲಿಕ್ಕೆ ಅವಕಾಶವಿದೆ. ಆದ್ದರಿಂದ ಪರಮ ದಯಾಳುವಾದ ದೇವನು ಆಧ್ಯಾತ್ಮಿಕ ಪಥದಲ್ಲಿ ಸಂಚರಿಸುವ ತನ್ನ ಭಕ್ತನನ್ನು ಸಾಂತ್ವನಗೊಳಿಸಿ, ಆತನಿಗೆ ಆಶ್ವಾಸನೆಯನ್ನಿತ್ತು ಹಿಡಿದ ಹಾದಿಯಲ್ಲಿ ಮುಂದಕ್ಕೆ ಸಾಗಲು ಪ್ರೋತ್ಸಾಹ ಕೊಟ್ಟು ಆತನ ಆಸಕ್ತಿಯನ್ನು ವೃದ್ಧಿಗೊಳಿಸುವನು. ದೇವನ ಅಲಂಘ್ಯವಾದ ಈ ನಿಯಮ ಆಧ್ಯಾತ್ಮಿಕ ಮಾರ್ಗದಲ್ಲಿ ಸಂಚರಿಸುವ ಭಕ್ತರಲ್ಲಿ ಪ್ರವರ್ತಿಸುತ್ತದೆ. ಎಂದರೆ ದೇವನು ದಿವ್ಯವಚನಗಳಿಂದಲೂ ಪ್ರಕಟನೆಗಳಿಂದಲೂ ತನ್ನ ಸಹಾಯದ ಕುರಿತು ಅವರಿಗೆ ಮನದಟ್ಟು ಮಾಡಿಕೊಡುವನು. ಹೀಗೆ, ದೈವಿಕ ಆಶ್ವಾಸ ವಚನಗಳಿಂದ ದೃಢಚಿತ್ತರಾಗಿ ಅವರು ಪೂರ್ವಾಧಿಕ ಓಜಸ್ಸಿನಿಂದ ಸಂಚಾರವನ್ನು ಮುಂದುವರಿಸುತ್ತಾರೆ. ಈ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಲಹುಮುಲ್ ಬುಶ್ರಾ ಫಿಲ್ ಹಯಾತಿದ್ದುನ್‌ಯಾ ವ ಫಿಲ್ ಆಖಿರತಿ" (10:65)

ಅವರಿಗೆ ಐಹಿಕ ಜೀವಿತದಲ್ಲೂ ಪಾರತ್ರಿಕ ಜೀವಿತದಲ್ಲೂ ಶುಭವಾರ್ತೆಗಳಿವೆ.

ಗುರಿ ಸಾಧನೆಗೆ ಸಹಾಯಕವಾದ ಬೇರೆಯೂ ಕೆಲವು ಮಾರ್ಗಗಳು ಪವಿತ್ರ ಖುರ್‌ಆನಿನಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ಆದರೆ ವಿಸ್ತಾರ ಭಯ ಕಾರಣದಿಂದ ಅವುಗಳ ಕುರಿತು ಇಲ್ಲಿ ಪ್ರತಿಪಾದಿಸಲು ಸಾಧ್ಯವಿಲ್ಲ. ●

(ಮುಂದುವರಿಯುವುದು)

( 34ನೇ ಪುಟದಿಂದ )

ಜಹಲಿನೊಡನೆಯೋ ಉಧುಬತ್ತಿನೊಡನೆಯೋ ಶೈಬನೊಡನೆಯೋ ವಿಚಾರಿಸಬೇಕೆಂದು ಹೇಳುವಂತಹ ನೀತಿಯನ್ನು ಮೌದೂದಿ 'ಸನ್ಮಾರ್ಗ'ವು ಕೈಗೊಂಡಂತಿದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ)ರವರ ಕುರಿತು ವಸ್ತುನಿಷ್ಠವಾಗಿ ತಿಳಿದುಕೊಳ್ಳಲು ಪಾದ್ರಿ ಫೆಂಡರ್ ರಚಿಸಿದ "ಮಿಝಾನುಲ್ ಹಕ್", ಸ್ವಾಮಿ ದಯಾನಂದ ಸರಸ್ವತೀ ಬರೆದ "ಸತ್ಯಾರ್ಥ ಪ್ರಕಾಶ" ಮೊದಲಾದ ಕೃತಿಗಳನ್ನು ಓದಬೇಕೆಂದು ಹೇಳಿದರೆ ಮೌದೂದಿಗಳ ಬಳಿ ಅದು ಸ್ವೀಕಾರ್ಯವಾಗಿರುವುದೇ ?

* * *

"ಪ್ರಶ್ನೆ : 'ಸನ್ಮಾರ್ಗ'ದ 14-11-1980ರ ಸಂಚಿಕೆಯಲ್ಲಿ ಪ್ರಕಟವಾಗಿರುವಂತೆ ಸ್ಪೈನ್‌ನಲ್ಲಿ ಉದ್ಘಾಟಿತವಾದಂತಹ ಮಸೀದಿಯು ಮುಸ್ಲಿಮರದಲ್ಲವೆಂದು ಕಾದಿಯಾನೀ ಪತ್ರಿಕೆಯೊಂದರಲ್ಲಿ ನೋಡಿದೆ.

**ಉತ್ತರ :** ಪಾಕಿಸ್ತಾನದ ಡಾನ್ ಪತ್ರಿಕೆಯ ವರದಿಯಂತೆ ಪ್ರಸ್ತುತ ವಾರ್ತೆಯನ್ನು ನಾವು ಪ್ರಕಟಿಸಿದ್ದೇವೆ. ಅದರಲ್ಲಿ ಅಹ್ಮದಿಯಾ ಬಗ್ಗೆ ಯಾವ ಪ್ರಸ್ತಾಪವೂ ಇರಲಿಲ್ಲ. ಪ್ರಾಯಶಃ ಅದು ವಾರ್ತಾ ಏಜೆನ್ಸಿಗಳ ವಂಚನೆಯಾಗಿರಲೂ ಬಹುದು. ಸ್ಪೈನ್‌ನ ಮಸೀದಿಯನ್ನು ಮುಸ್ಲಿಮರ ಮಸೀದಿಯೇದು ಹೇಳುವುದು ವಾಸ್ತವದಲ್ಲಿ ತಪ್ಪು. ಅದಕ್ಕಾಗಿ ಪ್ರತಿಕ್ರಿಯೆ ತೋರಿದ ಕಾದಿಯಾನಿಗಳಿಗೆ ಕೃತಜ್ಞತೆ ತೋರಲೇಬೇಕು."

('ಸನ್ಮಾರ್ಗ' : 6-2-81)

ಮೇಲಿನ ಪ್ರಶ್ನೆಯನ್ನು 'ಸನ್ಮಾರ್ಗ'ದವರೊಡನೆ ಕೇಳಿದ ವ್ಯಕ್ತಿ(!) ಯಾರೆಂದು ಅದರಲ್ಲಿ ವ್ಯಕ್ತಪಡಿಸಿಲ್ಲ. ಸ್ಪೈನ್‌ನ ಮಸೀದಿಯು ಮುಸ್ಲಿಮರದ್ದಲ್ಲವೆಂದು ಯಾವ ಕಾದಿಯಾನಿ ಪತ್ರಿಕೆಯಲ್ಲಿ ಅವರು ನೋಡಿದರು ? 'ಸನ್ಮಾರ್ಗ'ವು ವಿಚಿತ್ರವಾದ ವಂಚನೆಯನ್ನು ಪ್ರಕಟಿಸುತ್ತಿದೆ !

ಅಹ್ಮದಿಯಾ ಸಂಘಟನೆಯ ಮೂರನೆಯ ಖಲೀಫರವರು ಸ್ಪೈನ್‌ನಲ್ಲಿ ಕಳೆದ ಅಕ್ಟೋಬರ್ 9ನೇ ದಿನಾಂಕದಂದು ಶಿಲಾನ್ಯಾಸ ಮಾಡಿದ ಮಸೀದಿಯು ಮುಸ್ಲಿಂ ಮಸೀದಿಯೇ ಆಗಿದೆಯೆಂಬುದರಲ್ಲಿ ಏನೂ ಸಂಶಯವಿಲ್ಲ. ಮಾತ್ರವಲ್ಲ ಸ್ಪೈನ್‌ನಿಂದ ನಿಶ್ಶೇಷವಾಗಿ ನಿರ್ಮೂಲನ ಮಾಡಲ್ಪಟ್ಟ ಇಸ್ಲಾಮನ್ನು ಅಲ್ಲಿ ಪುನಃ ಪ್ರತಿಷ್ಠಾಪಿಸುವ ಅನುಗ್ರಹೀತ ಭಾಗ್ಯವು ಇಸ್ಲಾಮಿನ ದೈವಿಕ ನವೋತ್ಥಾನ ಸಂಘಟನೆಯಾದ ಅಹ್ಮದಿಯಾ ಜಮಾಅತಿಗೆ ಲಭಿಸಿದ್ದರಲ್ಲಿ ನಮಗೆ ಅಲ್ಲಾಹನೊಡನೆ ಅಮಿತ ಕೃತಜ್ಞತೆಯೂ ನ್ಯಾಯವಾದ ಅಭಿಮಾನವೂ ಸಂತೋಷವೂ ಇದೆ. ಆದರೆ ಮೌದೂದಿಗಳು ಈರ್ಷ್ಯೆಯಿಂದ ಕುದಿಯುತ್ತಿದ್ದಾರೆ—ಅಷ್ಟೆ.

ಏನೇನೂ ವಿವೇಚಿಸದೆ ಸ್ಪೈನ್ ಮಸೀದಿಯ ಬಗ್ಗೆ ತಪ್ಪು ವಾರ್ತೆ ಪ್ರಕಟಿಸಿದ 'ಸನ್ಮಾರ್ಗ'ಕ್ಕೆ ಈಗ ತನ್ನ ತಪ್ಪು ಮನವರಿಕೆಯಾಗಿದೆಯಂತೆ. ಅದು ಸಹ ಅವರಿಗೆ ವಿಷಯ ತಿಳಿದಿದ್ದು ಕಾದಿಯಾನಿಗಳು ಪ್ರತಿಕ್ರಿಯೆ ತೋರಿದಾಗ! 'ಸನ್ಮಾರ್ಗ'ದಲ್ಲಿ ಪ್ರಕಟವಾಗುತ್ತಿರುವ ಬೇರೆ ವಾರ್ತೆಗಳ ಗತಿ ಏನಿರಬಹುದೋ ? ಸ್ಪೈನ್‌ನಲ್ಲಿ ನಿರ್ಮಾಣ ಹಂತದಲ್ಲಿರುವ ಮುಸ್ಲಿಂ ಮಸೀದಿಯ ಬಗ್ಗೆ ಅದೊಂದು ಮುಸ್ಲಿಮೇತರ ಮಸೀದಿಯೆಂದು ಮೌದೂದಿಗಳು ಡಂಗುರ ಸಾರಿದರೂ ಅಹ್ಮದೀಯರಿಗೆ ಅದರಲ್ಲಿ ಏನೂ ಹಾನಿಯಿಲ್ಲ, ಭಯವೂ ಇಲ್ಲ. ಕಾರಣ ಅಹ್ಮದೀಯರು ಮುಸ್ಲಿಮರಲ್ಲವೆಂದು 'ಸನ್ಮಾರ್ಗ'ಯರೂ ಒಳಪಟ್ಟಂತೆ ಪ್ರಪಂಚದ ಬಹುಪಾಲು ಮುಸ್ಲಿಂ ಪಂಡಿತರೂ ಕೆಲವು ರಾಜ್ಯಾಡಳಿತಗಳೂ ಘೋಷಿಸಿ ಕೂಡ ಅಹ್ಮದೀಯರು ಮುಸ್ಲಿಮರಾಗಿಯೇ ಉಳಿದಿದ್ದಾರೆ. ಅವರನ್ನು ಅಮುಸ್ಲಿಮರನ್ನಾಗಿ ಮಾಡಲು ಯಾರಿಂದಲೂ ಸಾಧ್ಯವಾಗಲಿಲ್ಲ. ಮುಂದೆ ಎಂದಿಗೂ ಸಾಧ್ಯವಾಗಲಾರದು. ಅದೇ ರೀತಿ ವಿದೇಶ ರಾಜ್ಯಗಳಲ್ಲಿ ಅಹ್ಮದೀಯರು ಸ್ಥಾಪಿಸುತ್ತಿರುವ ಮುಸ್ಲಿಂ ಮಸೀದಿಗಳನ್ನು ಅಮುಸ್ಲಿಂ ಮಸೀದಿಗಳನ್ನಾಗಿ ಮಾಡುವುದು ಸಹ ಅವರ ಕೈಯಲ್ಲಿ ಆಗದ ಕೆಲಸ. ಅವುಗಳ ಖಿಬ್‌ಲವನ್ನು ಪವಿತ್ರ ಕಅಬಾದ ಕಡೆಯಿಂದ ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲವಷ್ಟೇ ?

—M. P. I.



# ಯುಗರಶ್ಮಿಗೆ

ಚಂದಾದಾರರಾಗಿರಿ.

ವಾರ್ಷಿಕ ಚಂದಾ ರೂ. 4-00 (ಅಂಚೆ ವೆಚ್ಚ ಉಚಿತ)

Regd. with the Registrar of Newspapers for India. Regd. No. R. N. 27354/75
**YUGARASHMI Kannada Quarterly, April 1981/Shahadath 1360**

## English Translation of the HOLY QUARAN with Arabic Text & Extensive Index




**Price : Rs. 15-00**

**Postal Charge Extra**

### AHMADIYYA ENGLISH LITERATURE

1. INTRODUCTION TO THE STUDY OF HOLY QUARAN 15-00
   by Hazrath Mirza Bashiruddin Muhamad Ahmad
2. THE TEACHINGS OF ISLAM 6-00
   by Hazrat Mirza Ghulam Ahmad
3. JESUS IN INDIA 2-25
   by Hazrat Mirza Ghulam Ahmad
4. CHARACTERISTICS OF THE QURANIC TEACHINGS 1-00
   by Hazrat Mirza Bashiruddin Muhamad Ahmad
5. WHERE DID JESUS DIE? 2-25
   by J. D. Shams, Ex-Imam, London Mosque

**Write to: NAZIR DAWAT-O-TABLIGH, Qadian (Punjab)-143516**

Edited and Published by Muhammad Yusuf on behalf of Jamath Ahmadiyya
at 10-23/1008, Ansari Road. Bunder, Mangalore-575 001.
Printed at Karavali Printers. Azizuddin Road, Bunder, Mangalore-575 001.